Pandit Teaches the Bible Series

Let’s Read the Pastoral Letters!

Kannada Edition

Author: L. Chandra

Translator: P. Prakash Naik

ಕನ್ನಡ ಸತ್ಯವೇದದ ಪುಸ್ತಕಗಳ ಸರಣಿ

ಸಭಾಪಾಲಕರ ಪತ್ರಿಕೆಗಳನ್ನು ಓದೋಣ!

ಪ್ರಧಾನ ಸಂಪಾದಕರು

ಟಿ. ಪಂಡಿತ್

ಲೇಖಕರು

ಎಲ್ ಚಂದ್ರ

ಅನುವಾದಕರು

ಆರ್ ಪ್ರಕಾಶನಾಯ್ಕ

ಲೇಖಕರ ಪರಿಚಯ

ಎಲ್ ಚಂದ್ರ ರವರು ಸತ್ಯವೇದ ಕಾಲೇಜಿನಲ್ಲಿ ಉಪನ್ಯಾಸಕರಾಗಿಯೂ ಮತ್ತು ಆಡಳಿತಾಧಿಕಾರಿಯಾಗಿಯೂ ಹಾಗೂ ಸ್ಥಳೀಯ ಸಭೆಯಲ್ಲಿ ಸೇವಕರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದವರಾಗಿದ್ದಾರೆ. ಅವರು ಸತ್ಯವೇದ ಭಾಷೆಗಳು ಮತ್ತು ಸೇವೆಗಳಲ್ಲಿ ತಮ್ಮ ಉನ್ನತ ವ್ಯಾಸಂಗವನ್ನು ಮಾಡಿದವರಾಗಿದ್ದಾರೆ.

ಆರ್ ಪ್ರಕಾಶ್ ನಾಯ್ಕ್ ರವರು ಒಬ್ಬ ಎಂ.ಎ ಮತ್ತು ಎಂ.ಡಿವ್ ಪದವೀದರರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೆ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ.

ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ, ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಪ್ಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಆಗಸ್ಟ್ 2025

ಸಭಾಪಾಲಕರ ಪತ್ರಿಕೆಗಳು - ಸಾರಂಶ

ಪೀಠಿಕೆ

ಪೌಲನು ಬರೆದಿರುವ ಮೂರು ಸಭಾಪಾಲಕರ ಪತ್ರಿಕೆಗಳನ್ನು ಹೀಗೆ ಕಾಲಾನುಕ್ರಮದಲ್ಲಿ ಬರೆಯಬಹುದು. ಮೊದಲನೇಯ ತಿಮೊಥೆಯ ಮತ್ತು ತೀತ ಪತ್ರಿಕೆಗಳು ಸುಮಾರು ಕ್ರಿ.ಶ 63-64 ರಲ್ಲಿ ಬರೆಯಲ್ಪಟ್ಟವು. ಎರಡನೇಯ ತಿಮೊಥೆಯ ಪತ್ರಿಕೆಯು ಸುಮಾರು ಕ್ರಿ.ಶ 65-66 ರಲ್ಲಿ ಬರೆಯಲ್ಪಟ್ಟಿತ್ತು.

ತಿಮೊಥೆಯ ಮತ್ತು ತೀತನ ಮೂರು ಪತ್ರಿಕೆಗಳು ಸಾಮಾನ್ಯವಾಗಿ ಸಭಾಪಾಲಕರ ಪತ್ರಿಕೆಗಳೆಂದು ಕರೆಯಲ್ಪಟ್ಟಿವೆ, ಯಾಕೆಂದರೆ ಪೌಲನು ಯಾವುದೇ ಸಭೆಯನ್ನು ಉದ್ದೇಶಿಸಿ ಈ ಪತ್ರಿಕೆಗಳನ್ನು ಬರೆಯದೆ ತಾನು ಕ್ರೇತದಲ್ಲಿಯೂ (ತೀತನನ್ನು) ಮತ್ತು ಎಫೆಸದಲ್ಲಿ (ತಿಮೊಥೆ) ರುವ ಸಭೆಗಳನ್ನು ಮುನ್ನಡೆಸಲು ಕಳುಹಿಸಿದ ತನ್ನ ಜೊತೆ ಸೇವಕರುಗಳಿಗೆ ಬರೆಯುತ್ತಿದ್ದಾನೆ. ಆತನು ತಿಮೊಥೆ ಮತ್ತು ತೀತರಿಬ್ಬರು ಸಭೆಯಲ್ಲಿ ಹೇಗೆ ಹಿರಿಯರನ್ನು ಮತ್ತು ನಾಯಕರುಗಳನ್ನು ನೇಮಿಸಬೇಕೆಂಬುದಕ್ಕೆ ಸಲಹೆಗಳನ್ನು ಸಹ ನೀಡುತ್ತಿದ್ದಾನೆ. ಹೊಸ ಒಡಂಬಡಿಕೆಯ ಸಭೆಗಳಲ್ಲಿ ಹಿರಿಯರು "ಕುರುಬರು" (ಸಭಾಪಾಲಕರು) ಆಗಿದ್ದರು. ಆದುದ್ದರಿಂದಲೇ ಈ ಮೂರು ಪತ್ರಿಕೆಗಳು ಸಭಾಪಾಲಕರ ಪತ್ರಿಕೆಗಳೆಂದು ಕರೆಯಲ್ಪಟ್ಟಿವೆ.

ಸಭಾಪಾಲಕರ ಪತ್ರಿಕೆಗಳ ಬರಹಗಾರನ ವಿಷಯದ ಕುರಿತಾಗಿ ಯಾವುದೇ ಪ್ರಶ್ನೆಗಳು ಇಲ್ಲ. ಪೌಲನು ಈ ಪತ್ರಿಕೆಗಳ ಬರಹಗಾರನಾಗಿದ್ದಾನೆಂಬ ವಿಷಯದಲ್ಲಿ ಆದಿಸಭೆ ಮತ್ತು ಕ್ರೈಸ್ತ ಸಂಪ್ರದಾಯಗಳು ಯಾವುದೇ ಸಂದೇಹಗಳನ್ನು ವ್ಯಕ್ತಪಡಿಸಿಲ್ಲ. ಪೌಲನ ಇತರೆ ಪತ್ರಿಕೆಗಳಿಗಿಂತ ಈ ಪತ್ರಿಕೆಗಳ ಭಾಷೆಯ ಶೈಲಿ ಮತ್ತು ಪದಗಳ ಆಯ್ಕೆಯಲ್ಲಿ ವ್ಯತ್ಯಾಸಗಳಿರುವುದಕ್ಕೆ ಒಳ್ಳೆಯ ವಿವರಗಳಿವೆ: ಪೌಲನು ಈ ಪತ್ರಿಕೆಗಳನ್ನು ಬರೆಯಲು ಬೇರೊಬ್ಬ ಸಹಾಯಕನನ್ನು ಉಪಯೋಗಿಸಿದ್ದಾನೆ, ಪ್ರಾಯಶಃ ಆತನು ಲೂಕನಾಗಿದ್ದಾನೆ. ಲೂಕನ ಬರಹಗಳಲ್ಲಿಯೂ (ಲೂಕನ ಸುವಾರ್ತೆ, ಅಪೊಸ್ತಲರ ಕೃತ್ಯಗಳು) ಮತ್ತು ಸಭಾಪಾಲಕರ ಪತ್ರಿಕೆಗಳ ಶಬ್ದಗಳು ಮತ್ತು ಪದವಿನ್ಯಾಸಗಳಲ್ಲಿ ಹೋಲಿಕೆಗಳುಂಟು ಮತ್ತು 2 ತಿಮೊಥೆ 4:11 ರಲ್ಲಿ ಪೌಲನೂ ಆ ಸಂದರ್ಭಗಳಲ್ಲಿ ತನ್ನೊಂದಿಗೆ ಇದ್ದಿದ್ದು ಲೂಕನು ಮಾತ್ರ ಎಂಬುದಾಗಿ ತಿಳಿಸುತ್ತಿದ್ದಾನೆ.

ವಿಶೇಷವಾಗಿ ಎರಡನೇಯ ತಿಮೊಥೆಯಲ್ಲಿ ಬಹಳ ವೈಯಕ್ತಿಕ ವಂದನೆಗಳುಂಟು. ಉದಾಹರಣೆಗೆ 2 ತಿಮೊಥೆ 1:16-17; 4:13 ಮತ್ತು ತೀತ 3:13 ರಲ್ಲಿ ಇತರೆ ಬರಹಗಾರರಿಗಿಂತ ಪೌಲನು ವೈಯಕ್ತಿಕ ವಂದನೆಗಳನ್ನು ಮತ್ತು ವೈಯಕ್ತಿಕ ಮಾಹಿತಿಗಳನ್ನು ತಿಳಿಸುತ್ತಿರುವಂತಹದ್ದನ್ನು ನಂಬುವಂತಹದ್ದು ಸ್ವಲ್ಪ ಕಠಿಣವಾದದ್ದಾಗಿದೆ.

ಮೊದಲನೇ ತಿಮೊಥೆಯನಿಗೆ ಬರೆದ ಪತ್ರಿಕೆ

ಸತ್ಯಾಂಶಗಳು

- ಪ್ರಾಯಶಃ ಮೊದಲನೇಯ ತಿಮೊಥೆ ಪತ್ರಿಕೆಯು ಕ್ರಿ.ಶ 63-64 ರಲ್ಲಿ ಬರೆದಿರಬಹುದಾಗಿದೆ. ತೀತನ ಪತ್ರಿಕೆಯು ಸಹ ಇದೇ ಸಮಯದಲ್ಲಿ ಬರೆಯಲ್ಪಟ್ಟಿದೆ. ಎರಡು ಪತ್ರಿಕೆಗಳು ನಾಯಕರುಗಳನ್ನು ನೇಮಿಸುವುದು ಮತ್ತು ಸುಳ್ಳುಬೋಧಕರ ಕುರಿತಾದಂತಹ ಒಂದೇ ರೀತಿಯ ಬೋಧನೆಗಳನ್ನು ಒಳಗೊಂಡಿದೆ.
- ಗ್ರೀಕ್ ತಂದೆಯನ್ನು ಮತ್ತು ಯೆಹೂದ್ಯ ತಾಯಿಯನ್ನು ಹೊಂದಿರುವ ತಿಮೊಥೆಯನು ಈ ಪತ್ರಿಕೆಯನ್ನು ಸ್ವೀಕರಿಸಿದನು.
- ತಿಮೊಥೆಯನು ಪೌಲನ ಆಪ್ತ ಜೊತೆಕೆಲಸದವನು ಮತ್ತು ಆತನಿಂದ ಮೆಚ್ಚಿಕೆಗೆ ಪಾತ್ರನಾದವನಾಗಿದ್ದನು. ಪೌಲನು ಆತನನ್ನು ತನ್ನ ನಂಬಿಕೆಯ ನಿಜಕುಮಾರನೆಂದು ಸಹ ಕರೆದಿದ್ದಾನೆ (1:2; ಅಪೊ.ಕೃತ್ಯ. 16:1-3; 1 ಕೊರಿ. 4:17, ಫಿಲಿ. 2:19-24). ತಿಮೊಥೆಯನು ಪೌಲನ ಎರಡನೇಯ ಮತ್ತು ಮೂರನೇಯ ಸುವಾರ್ತಾ ಪ್ರಯಾಣಗಳಲ್ಲಿ ಆತನೊಂದಿಗೆ ಪ್ರಯಾಣಿಸಿದ್ದನು.

ಎಫೆಸ ಪಟ್ಟಣವನ್ನು ಪೌಲನು ಚೆನ್ನಾಗಿ ಬಲ್ಲವನಾಗಿದ್ದನು. ಅಲ್ಲಿ ಆತನು ಸರಿಸುಮಾರು ಮೂರು ವರ್ಷಗಳು ವಾಸವಾಗಿದ್ದನು. ಬಹುಶಃ ಆತನು ರೋಮಿನಲ್ಲಿನ ತನ್ನ ಸೆರೆಮನೆ ವಾಸದ ನಂತರ ಎಫೆಸ ಪಟ್ಟಣವನ್ನು ಪುನಃ ಭೇಟಿ ಕೊಟ್ಟು, ಸಭೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದ್ದ ಸುಳ್ಳುಬೋಧನೆಯನ್ನು ನಿಯಂತ್ರಿಸಲು ತಿಮೊಥೆಯನ್ನು ಅಲ್ಲೆ ಬಿಟ್ಟು ಹೋಗಿದ್ದನು (1:3). ಸುಳ್ಳಬೋಧನೆಯು ಯೆಹೂದ್ಯ ಮತ್ತು ಗ್ರೀಕ್ ವೈಶಿಷ್ಟ್ಯಗಳನ್ನು ಒಳಗೊಂಡು ಯೆಹೂದ್ಯ ಧರ್ಮಶಾಸ್ತ್ರದ ಕಲ್ಪನಾಕಥೆಗಳು, ಕೊನೆಮೊದಲಿಲ್ಲದ ವಂಶಾವಳಿಗಳನ್ನು, ಮದುವೆಯಾಗಬಾರದೆಂತಲೂ, ಇಂತಿಂಥ ಆಹಾರಗಳನ್ನು ತಿನ್ನಬಾರದೆಂಬ ಲಕ್ಷಣಗಳನ್ನೊಳಗೊಂಡಿದೆ (1:4; 4:1-3).

ಪೌಲನು ಹಿಂದಿನ ಸಾರಿ ಎಫೆಸ ಪಟ್ಟಣದಲ್ಲಿ ಇದ್ದಾಗ ತಾನೇ ಸ್ವತಃ ಸುಳ್ಳುಬೋಧನೆ ಕುರಿತಾದ ಹುಮೆನಾಯನು ಮತ್ತು ಅಲೆಕ್ಸಾಂದರರ ಮೂಲಕ ಹರಡಿದ್ದ ಸುಳ್ಳುಬೋಧನೆಯನ್ನು ಬಗೆಹರಿಸಿದ್ದನು (1:20) ಮತ್ತು ಅವರಿಬ್ಬರು ಸಭೆಯ ನಾಯಕತ್ವದಲ್ಲಿರುವುದು ಕಂಡುಬರುತ್ತದೆ. ಸುಳ್ಳುಬೋಧನೆಯು ಸಭೆಯಲ್ಲಿರುವ ಯೌವನಸ್ಥ ಸ್ತ್ರೀಯರಿಂದ ಆಕರ್ಷಿಸಲ್ಪಟ್ಟಿರುವುದು ಕಾಣುತ್ತದೆ (1 ತಿಮೊಥೆ 5:11-15; 2 ತಿಮೊಥೆ 3:5-7). ಸುಳ್ಳುಬೋಧಕರು ಈ ಸ್ತ್ರೀಯರನ್ನು ತಮ್ಮ ಉನ್ನತವಾದ ಆತ್ಮೀಕತೆಯ ವೇಷದ ಮೂಲಕ ವಂಚಿಸಿದರು. ಇದು ಸಭೆಯಲ್ಲಿ ಅನೇಕ ರೀತಿಯ ಗೊಂದಲಕ್ಕೆ ದಾರಿ ಮಾಡಿಕೊಟ್ಟಿತ್ತು. ಇವರ ಸುಳ್ಳುಬೋಧನೆಯ ಕಾರಣದಿಂದಲೇ ಪೌಲನು ಸಭೆಯಲ್ಲಿ ಸ್ತ್ರೀಯರು ಬೋಧಿಸಬಾರದೆಂಬ ಕಟ್ಟಳೆಯನ್ನು ಹಾಕಿದನು.

ಎಫೆಸ ಸಭೆಯಲ್ಲಿರುವ ಪರಿಸ್ಥಿತಿಯನ್ನು ನಿಭಾಯಿಸಲು ತಿಮೊಥೆಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಸುಳ್ಳುಬೋಧನೆಯ ವಿರುದ್ಧ ಸತ್ಯ ಮತ್ತು ಸ್ವಸ್ಥ ಕ್ರೈಸ್ತೀಯ ಜೀವಿತದ ಬೋಧನೆಯನ್ನು ಬೋಧಿಸುವ ಬೋಧಕರನ್ನು ನೇಮಿಸುವ ಸಲಹೆಯನ್ನು ನೀಡುವುದೇ ಈ ಪತ್ರಿಕೆಯ ಉದ್ದೇಶವಾಗಿದೆ.

ಪಠ್ಯಕ್ರಮ

ತಿಮೊಥೆಯನಿಗೆ ಬರೆದ ಮೊದಲನೇಯ ಪತ್ರಿಕೆಯನ್ನು ಈ ರೀತಿಯಾಗಿ ವಿಭಾಗಿಸಬಹುದು:

ಅ. ಸ್ವಸ್ಥಬೋಧನೆ ಮತ್ತು ಜೀವಿತದ ಕುರಿತಾಗಿ ಮನವಿ (ಅಧ್ಯಾಯ 1-2)

ಆ. ಸಭೆಯಲ್ಲಿ ನಾಯಕರನ್ನು ಮತ್ತು ಜೊತೆ ಕೆಲಸದವರನ್ನು ನೇಮಿಸುವುದರ ಕುರಿತು ಸಲಹೆ (ಅಧ್ಯಾಯ 3)

ಇ. ತಿಮೊಥೆಯನಿಗೆ ವೈಯಕ್ತಿಕ ಸಲಹೆಗಳು (ಅಧ್ಯಾಯ 4)

ಈ. ಸಭೆಯ ಜೀವನ ಮತ್ತು ವಿಧವೆಯರ ಸ್ಥಿತಿಯ ಕುರಿತ ನಿಯಮಗಳು (ಅಧ್ಯಾಯ 5)

ಉ. ಕ್ರೈಸ್ತೀಯ ಜೀವಿತ, ಹಣ ಮತ್ತು ಶ್ರೀಮಂತಿಕೆಯ ಕುರಿತು ಎಚ್ಚರಿಕೆಯ ಆಜ್ಞೆಗಳು (ಅಧ್ಯಾಯ 6)

ಪೌಲನು ಈ ಪತ್ರಿಕೆಗಳಲ್ಲಿ ವಂದನೆಗಳನ್ನು ತಿಳಿಸಿದ ತಕ್ಷಣ ಈ ಪತ್ರಿಕೆಯ ಉದ್ದೇಶದ ಭಾರವನ್ನು ತಿಳಿಸುತ್ತಿದ್ದಾನೆ. ತಿಮೊಥೆಯು ಸುಳ್ಳುಬೋಧನೆಯಿಂದ ಸಭೆಯಲ್ಲಿ ಉದ್ಭವಿಸಿದ ಪಾಪ ಮತ್ತು ಅನೈತಿಕ ಜೀವಿತಗಳನ್ನು ಸರಿಪಡಿಸುವುದು ಅಗತ್ಯವಾಗಿತ್ತು. ಇಂತಹ ಪರಿಸ್ಥಿತಿಗಳಲ್ಲಿ ಕಾರ್ಯ ಮಾಡುವಂತಹ ಒಂದೇ ಒಂದು ಸಂಗತಿಯೆಂದರೆ ಅದುವೇ ಕ್ರೈಸ್ತೀಯ ಸುವಾರ್ತೆಯಾಗಿದೆ (1:11). ಪೌಲನು ತನ್ನಂತಹ ದೊಡ್ಡ ಪಾಪಿಯು ಬದಲಾದದ್ದು ಸುವಾರ್ತೆಯಿಂದಲೇ ಎಂಬುದನ್ನು ತಿಮೊಥೆಗೆ ನೆನಪಿಸುತ್ತಿದ್ದಾನೆ (1:12-17). ಹಾಗಾಗಿ ಆತನ ಸೇವೆಯು ಇತರೆ ಪಾಪಿಗಳಿಗೂ ಸಹ ಬದಲಾಗುವ ನಿರೀಕ್ಷೆಯನ್ನು ನೀಡುವಂತಹದ್ದಾಗಿದೆ.

ಕ್ರಮಬದ್ಧ ಮತ್ತು ಸಮಾಧಾನದ ಜೀವಿತವನ್ನು ಪೌಲನು ಉತ್ತೇಜಿಸುತ್ತಾನೆ. ವಿಶ್ವಾಸಿಗಳು ಎಲ್ಲಾ ಮನುಷ್ಯರಿಗಾಗಿಯೂ ಮತ್ತು ಅಧಿಕಾರಿಗಳಿಗಾಗಿಯೂ ಹೇಗೆ ಪ್ರಾರ್ಥಿಸಬೇಕೆಂಬುದನ್ನು ಕಲಿಯಬೇಕು (2:17). ಪುರುಷರು ಯಾವುದೇ ಕೋಪ, ವಾಗ್ವಾದವೂ ಇಲ್ಲದವರಾಗಿ ಪ್ರಾರ್ಥಿಸತಕ್ಕದ್ದು (2:8) ಮತ್ತು ಸ್ತ್ರೀಯರೂ ಸಹ ತಮ್ಮ ಹೊರಗಿನ ಸೌಂದರ್ಯಕ್ಕೆ ಹೆಚ್ಚಿನ ಮಾನ್ಯತೆಯನ್ನು ನೀಡದೆ ಕರ್ತನಲ್ಲಿ ನಂಬಿಕೆಯಿಟ್ಟಂತಹ ಭಕ್ತೆಯರಾಗಿ ಒಳ್ಳೆಯ ನಡತೆಯಲ್ಲಿ ಜೀವಿಸತಕ್ಕದ್ದು (2:9-10). ಅಡ್ಡದಾರಿ ಹಿಡಿದ ಸ್ತ್ರೀಯರು ಸಭೆಯಲ್ಲಿ ಉಪದೇಶಿಸುವುದನ್ನು ನಿಷೇಧಿಸಲಾಗಿತ್ತು. ಆದರೆ ಅವರು ನಂಬಿಕೆಯಲ್ಲಿಯೂ ಮತ್ತು ಪರಿಶುದ್ಧತೆಯಲ್ಲಿಯೂ ನಡೆದು ಕರ್ತನಿಗೆ ಭಯಪಡುವವರಾಗಿ, ಸ್ತ್ರೀಯ ಸಹಜ ಗುಣಧರ್ಮದಲ್ಲಿಯೂ ಮತ್ತು ಮಾತೃತ್ವದಲ್ಲಿಯೂ ಜೀವಿಸಬೇಕೆಂದು ಸಲಹೆಯನ್ನು ನೀಡುತ್ತಿದ್ದಾನೆ (2:11-15).

ನಂತರದಲ್ಲಿ ಪೌಲನು ಸಭೆಯಲ್ಲಿ ಹೇಗೆ ನಾಯಕರನ್ನು ಮತ್ತು ಮೇಲ್ವಿಚಾರಕರನ್ನು ನೇಮಿಸಬೇಕೆಂದು ತಿಮೊಥೆಯನಿಗೆ ಸಲಹೆಯನ್ನು ನೀಡುತ್ತಿದ್ದಾನೆ (3:8-13). ಅವರು ತಮ್ಮ ಕ್ರೈಸ್ತ ನಂಬಿಕೆಗೆ ತಕ್ಕಂತೆ ಇರುವ ಜೀವಿತದಲ್ಲಿ ಜೀವಿಸುವುದೇ ಪ್ರಮುಖ ಅಂಶವಾಗಿತ್ತು. ಅವರು ತಮ್ಮ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳುವವರು, ಅತಿಥಿ ಸತ್ಕಾರವನ್ನು ಮಾಡುವವರು, ಲೋಕದ ದುರಾಶೆಗಳಿಂದ ದೂರವಾದವರು ಹೀಗೆ ಅವರ ಜೀವಿತವು ಅನೇಕರಿಗೆ ಒಂದು ಮಾದರಿಯಾಗಿರತಕ್ಕದ್ದು. ಪೌಲನು ತಾನು ತಿಮೊಥೆಯೊಂದಿಗೆ ಸೇರಿ ಸೇವೆ ಮಾಡುವ ತನ್ನ ಬಯಕೆಯನ್ನು ತಿಳಿಸುತ್ತಿದ್ದಾನೆ.

ತಿಮೊಥೆಯು ತಾನು ಯೌವನಸ್ಥನೆಂದು ಯಾರೂ ಅವನ ಕುರಿತು ಅಸಡ್ಡೆ ಮಾಡುವ ರೀತಿಯಲ್ಲಿ ಅವನು ಜೀವಿಸಬಾರದೆಂದು ಪೌಲನು ಸಲಹೆಯನ್ನು ನೀಡುತ್ತಿದ್ದಾನೆ. ಅವನು ತನ್ನ ಜೀವಿತವನ್ನು ಬೋಧಿಸುವುದರಲ್ಲಿಯೂ, ಬೋಧಿಸಿದ್ದನ್ನು ತಾನು ತನ್ನ ಜೀವಿತದಲ್ಲಿ ಪಾಲಿಸುತ್ತಾ ಒಂದು ಒಳ್ಳೆಯ ಮಾದರಿಯಲ್ಲಿ ಜೀವಿಸಬೇಕೆಂದು ಸಹ ಸಲಹೆಯನ್ನು ನೀಡುತ್ತಿದ್ದಾನೆ. ಸಭೆಯಲ್ಲಿರುವ ವೃದ್ಧರನ್ನು ಮತ್ತು ಯೌವನಸ್ಥರನ್ನು ಹೇಗೆ ಕಾಣಬೇಕೆಂಬ ಸಲಹೆಯನ್ನು ಸಹ ಪೌಲನು ತಿಳಿಸುತ್ತಿದ್ದಾನೆ.

ಪತ್ರಿಕೆಯ ಕೊನೆಯಲ್ಲಿ ಪೌಲನು ಪುನಃ ಸುಳ್ಳುಬೋಧಕರ ಕುರಿತು ಬರೆಯುತ್ತಿದ್ದಾನೆ. ಅವರ ಜೀವಿತವು ಹಣದ ಆಸೆಯಿಂದಲೂ, ವಿವಾಧಾತ್ಮಕವಾಗಿಯೂ ಮತ್ತು ಸಕಲ ನಿಂದನೆಗಳಿಂದ ಕೂಡಿರುತ್ತದೆ (6:3-10). ಇಂತಹವುಗಳಿಂದ ತಿಮೊಥೆಯು ದೂರವಿರಬೇಕೆಂದು ಮತ್ತು ತನ್ನ ಜೀವಿತದಲ್ಲಿ ಸ್ವಸ್ಥಬೋಧನೆಗಾಗಿ ಶ್ರಮಿಸುತ್ತಾ ಯಥಾರ್ಥ ಜೀವನದಲ್ಲಿ ಜೀವಿಸಬೇಕೆಂಬುದಾಗಿ ತಿಳಿಸುತ್ತಿದ್ದಾನೆ.

ಸಂದೇಶ

ಈ ಪತ್ರಿಕೆಯ ಉದ್ದಕ್ಕೂ ಪೌಲನು ಸುಳ್ಳುಬೋಧನೆಯ ಕುರಿತು ಚರ್ಚಿಸುತ್ತಾ ತಿಮೋಥೆಯು ಹೇಗೆ ಇದನ್ನು ನಿಭಾಯಿಸಬೇಕೆಂದು ತಿಳಿಸುತ್ತಿದ್ದಾನೆ.

ಯೌವನಸ್ಥನಾದ ತಿಮೊಥೆಗೆ ವೈಯಕ್ತಿಕವಾಗಿ ಕೊಡಲ್ಪಟ್ಟ ಅನೇಕ ಸಲಹೆಗಳು ಸಹ ಇದೆ (ಆತನು ಈ ಪತ್ರವನ್ನು ಸ್ವೀಕರಿಸುವಾಗ ಸುಮಾರು 30-35 ವರ್ಷದ ವಯಸ್ಕನಾಗಿರಬಹುದು). ಆತನಿಗೆ ಕೊಡಲ್ಪಟ್ಟ ಕೆಲಸವು ಬಹಳ ಕಠಿಣವಾಗಿರುವ ನಿಮಿತ್ತ ತನ್ನ ನಾಯಕ ಅಥವಾ ಆತ್ಮೀಕ ತಂದೆಯಿಂದ ಆತನಿಗೆ ಒಳ್ಳೆಯ ಸಲಹೆ ಮತ್ತು ಉತ್ತೇಜನದ ಅಗತ್ಯತೆ ಇತ್ತು. ಹಾಗಾಗಿ ಈ ಪತ್ರಿಕೆಯಲ್ಲಿ ವಿಶೇಷವಾಗಿ ಸಭಾ ಸೇವೆಯ ನಾಯಕತ್ವದಲ್ಲಿರುವವರಿಗೆ ಒಳ್ಳೆಯ ಮಾರ್ಗದರ್ಶನ ಮತ್ತು ಪ್ರಾಯೋಗಿಕವಾದ ಸಲಹೆಗಳನ್ನು ಕಾಣಬಹುದಾಗಿದೆ.

ಪೌಲನ ದೃಷ್ಟಿಯಲ್ಲಿ ಸಿದ್ಧಾಂತ ಮತ್ತು ಜೀವಿತ ಒಟ್ಟಿಗೆ ಹೋಗುವಂತಹದ್ದಾಗಿದೆ. ದಿವ್ಯ ಶಕ್ತಿಗಿಂತ ನಡತೆಯು ಬಹಳ ಪ್ರಾಮುಖ್ಯವಾದದ್ದು ಮತ್ತು ದೇವರ ಸಭೆಯ ನಾಯಕನು ಸತ್ಯದ ಮತ್ತು ನಂಬಿಗಸ್ಥಿಕೆಯ ಜೀವಿತದಲ್ಲಿ ಜೀವಿಸುವುದು ಬಹಳ ಪ್ರಾಮುಖ್ಯವಾದುದ್ದಾಗಿದೆ.

ತೀತನು

ಸತ್ಯಾಂಶಗಳು

- ಈ ಪತ್ರವನ್ನು ಸ್ವೀಕರಿಸಿದ ತೀತನು ಪೌಲನ ಜೊತೆ ಕೆಲಸದವರಲ್ಲಿ ಒಬ್ಬನಾಗಿದ್ದಾನೆ (2 ಕೊರಿ. 2:13; 7:6-16; 8:6; 16-24; ಗಲಾತ್ಯ 2:1-3). ತೀತನು ಗ್ರೀಕ್ ಹಿನ್ನಲೆಯವನಾಗಿದ್ದನು. ಪೌಲನು ಈತನನ್ನು "ನಂಬಿಕೆಯಲ್ಲಿ ನಿಜಕುಮಾರನೆಂದು" ಕರೆದನು.
- ತೀತನು ಕ್ರೇತ ಸ್ಥಳದಲ್ಲಿದ್ದ ಸಭೆಯ ನಾಯಕನಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದನು. ಪೌಲನು ಈ ಮುಂಚೆ ಈ ಸ್ಥಳದಲ್ಲಿ ಸೇವೆ ಸಲ್ಲಿಸಿದನು, ಅವನು ಅಲ್ಲಿಂದ ಮುಂದೆ ಸಾಗಿದಾಗ ಅಲ್ಲಿನ ಜವಬ್ದಾರಿಯನ್ನು ತೀತನಿಗೆ ಒಪ್ಪಿಸಿಕೊಟ್ಟು ಹೋಗಿದ್ದನು (1:5).
- ಈ ಪತ್ರಿಕೆಯು ಯಾವಾಗ ಬರೆಯಲ್ಪಟ್ಟಿತೆಂಬುದು ಸ್ಪಷ್ಟವಿಲ್ಲ, ಆದರೆ ಪ್ರಾಯಶಃ ಕ್ರಿ.ಶ 63-64 ರ ಸುಮಾರಿನಲ್ಲಿ ಬರೆದಿರಬಹುದಾಗಿದೆ. ಪೌಲನು ರೋಮಿನ ತನ್ನ ಮೊದಲ ಸೆರೆವಾಸದ ನಂತರ ಕ್ರೇತಕ್ಕೆ ಭೇಟಿ ನೀಡಿರುವುದಾಗಿ ಕಂಡುಬರುತ್ತದೆ. ಆತನು ರೋಮಿಗೆ ಬಂಧಿಯಾಗಿ ಒಯ್ಯಲ್ಪಡುವ ಸಂದರ್ಭದಲ್ಲಿ ಕ್ರೇತದಲ್ಲಿ ಉಳಿದುಕೊಳ್ಳುವಂತೆ ಒತ್ತಾಯಿಸಲ್ಪಟ್ಟನು (ಅಪೊ.ಕೃತ್ಯ. 27:7-8).
- ಪೌಲನು ಈ ಪತ್ರಿಕೆಯನ್ನು ನಿಕೊಪೊಲಿಯಿಂದ ಬರೆದನು. ಆತನು ತೀತನಿಗೆ ಕ್ರೇತದಲ್ಲಿರುವ ಕಾರ್ಯಗಳನ್ನು ಮುಗಿಸಿದ ತಕ್ಷಣ ತನ್ನೊಂದಿಗೆ ಬಂದು ಸೇರಿಕೊಳ್ಳಬೇಕೆಂಬುದಾಗಿ ತಿಳಿಸುವುದಕ್ಕಾಗಿ ಬರೆಯುತ್ತಿದ್ದಾನೆ (3:12).

ಸಭೆಯು ಹೆಚ್ಚು ಗ್ರೀಕ್ ಹಿನ್ನಲೆಯುಳ್ಳ ಜನರಿಂದ ಕೂಡಿತ್ತು ಮತ್ತು ಕೆಲವು ಯೆಹೂದ್ಯ ಜನರು ಸಹ ಇದ್ದರು. ಸಭೆಯು ನೂತನವಾಗಿ ಸ್ಥಾಪಿಸಲ್ಪಟ್ಟಂತೆ ಪತ್ರಿಕೆಯು ಮಾಹಿತಿಯನ್ನು ನೀಡುತ್ತದೆ, ಹಾಗಾಗಿ ಅಲ್ಲಿ ಸುಳ್ಳುಬೋಧಕರು ತಮ್ಮ ಸುಳ್ಳುಬೋಧನೆಯಿಂದ ಜನರನ್ನು ಗೊಂದಲದಲ್ಲಿ ನಡೆಸುತ್ತಾ ಅವರು ತಪ್ಪಾದ ನಡುವಳಿಕೆಯಲ್ಲಿ ಜೀವಿಸುವಂತೆ ಪ್ರೇರೇಪಿಸುತ್ತಿದ್ದರು, ಆದ್ದದರಿಂದ ತೀತನು ಇಂತಹ ಅನೇಕ ಕಾರ್ಯಗಳನ್ನು ಸರಿಪಡಿಸುವ ಜವಾಬ್ದಾರಿಯನ್ನು ಹೊಂದಿದ್ದನು (1:10-16; 3:9-11).

ಪಠ್ಯಕ್ರಮ

ತೀತನಿಗೆ ಬರೆದ ಪತ್ರಿಕೆಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು:

ಅ. ಸಭೆಯಲ್ಲಿನ ಸಿದ್ಧಾಂತ ಮತ್ತು ಕಾರ್ಯಗಳು (ಅಧ್ಯಾಯ 1)

ಆ. ಮನೆಯಲ್ಲಿನ ಸಿದ್ಧಾಂತ ಮತ್ತು ಕಾರ್ಯಗಳು (ಅಧ್ಯಾಯ 2)

ಇ. ಪ್ರಪಂಚದಲ್ಲಿನ ಸಿದ್ಧಾಂತ ಮತ್ತು ಕಾರ್ಯಗಳು (ಅಧ್ಯಾಯ 3)

ಪತ್ರಿಕೆಯು ಅಸಾಧಾರಣವಾದ ಉದ್ದನೆಯ ವಂದನೆಗಳೊಂದಿಗೆ ಪ್ರಾರಂಭಗೊಳ್ಳುತ್ತದೆ. ನಂತರದಲ್ಲಿ ಪೌಲನು ಸಭೆಯಲ್ಲಿ ನಾಯಕರುಗಳನ್ನು ಹೇಗೆ ನೇಮಿಸಬೇಕೆಂದು ಮತ್ತು ಅವರಿಗೆ ಯಾವ ಅರ್ಹತೆಗಳಿರಬೇಕೆಂಬ ಸಲಹೆಗಳನ್ನು ತೀತನಿಗೆ ನೀಡುತ್ತಿದ್ದಾನೆ. ಸಭೆಯ ನಾಯಕರು ವಿಶ್ವಾಸಾರ್ಹರಾಗಿರಬೇಕು ಮತ್ತು ಅವರು ಸುಳ್ಳುಬೋಧಕರುಗಳನ್ನು ಎದುರಿಸುವ ಸಾಮಾರ್ಥ್ಯವನ್ನು ಹೊಂದಿದವರಾಗಿರಬೇಕು.

ಪೌಲನು ಸಭೆಯಲ್ಲಿ ಒಬ್ಬ ವಿಶ್ವಾಸಿಯಾಗಿ ಜೀವಿಸುವುದು ಅಂದರೇನು ಎಂಬ ಜೀವನದ ಕ್ರಮಗಳನ್ನು ತೀತನಿಗೆ ನೆನಪಿಸುತ್ತಾ, ವಯೋವೃದ್ಧ ಪುರುಷನಿಗೆ (2:2), ವೃದ್ಧ ಸ್ತ್ರೀಗೆ (2:3), ವಯಸ್ಕ ಸ್ತ್ರೀಗೆ (2:4-5), ವಯಸ್ಕ ಪುರುಷನಿಗೆ (2:6-8) ಮತ್ತು ದಾಸರಿಗೆ (2:9-10) ಸಲಹೆಗಳನ್ನು ನೀಡುತ್ತಿದ್ದಾನೆ. ಕ್ರಿಸ್ತೀಯ ಜೀವಿತವು ಯೇಸು ಕ್ರಿಸ್ತನಲ್ಲಿ ಪ್ರಕಟಿಸಲ್ಪಟ್ಟ ದೇವರ ರಕ್ಷಣೆಯ ಆಧಾರದ ಮೇಲೆ ಇರುವುದು ಮತ್ತು ಪಾಪದಿಂದ ತುಂಬಲ್ಪಟ್ಟ ಈ ಪ್ರಪಂಚದಲ್ಲಿ ನಾವು ಜೀವಿಸುತ್ತಿರುವಾಗ ನಮ್ಮ ಪಾಪದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ಒಪ್ಪದಂತೆ ದೇವರ ಕೃಪೆಯು ಒಬ್ಬ ವಿಶ್ವಾಸಿಯಲ್ಲಿ ಬಲವನ್ನು ನೀಡುವಂತಹದ್ದಾಗಿರುತ್ತದೆ.

ವಿಶ್ವಾಸಿಗಳು ಅಧಿಪತಿಗಳಿಗೂ ಅಧಿಕಾರಿಗಳಿಗೂ ಅಧೀನರಾಗುತ್ತಾ ಅವಿಶ್ವಾಸಿಗಳ ಮಧ್ಯದಲ್ಲಿ ಸಮಾಧಾನದಿಂದ ಜೀವಿಸುತ್ತಾ ಸಮಾಜದಲ್ಲಿ ಒಳ್ಳೆಯ ಮಾದರಿಯ ಜೀವಿತದಲ್ಲಿ ಜೀವಿಸಬೇಕೆಂಬ ಸಲಹೆಗಳನ್ನು ನೀಡುತ್ತಿದ್ದಾನೆ (3:1-2).

ಪೌಲನು ತೀತನಿಗೆ ವೈಯಕ್ತಿಕ ಸಲಹೆಗಳನ್ನು ನೀಡುತ್ತಾ ಪತ್ರಿಕೆಯನ್ನು ಕೊನೆಗೊಳಿಸುತ್ತಿದ್ದಾನೆ. ಆತನು ಸುಳ್ಳುಬೋಧಕರಿಂದ ದೂರವಿದ್ದು ಪೌಲನು ಬೋಧಿಸಿದ ಸ್ವಸ್ಥಬೋಧನೆಯನ್ನು ಸಭೆಗೆ ಬೋಧಿಸಬೇಕಾಗಿತ್ತು. ನಂತರದಲ್ಲಿ ಆತನು ತೀತನ ಜೊತೆಯಲ್ಲಿದ್ದ ಕೆಲವು ಜೊತೆ ಕೆಲಸದವರಿಗೆ ಕೆಲವು ಸಲಹೆಗಳನ್ನು ನೀಡುವುದರೊಂದಿಗೆ ಪತ್ರಿಕೆಯನ್ನು ಮುಕ್ತಾಯಗೊಳಿಸುತ್ತಿದ್ದಾನೆ.

ಸಂದೇಶ

ತೀತನ ಪತ್ರಿಕೆಯು ಒಳ್ಳೆಯ ಕ್ರಿಯೆಗಳನ್ನು ಮಾಡುತ್ತಾ ಪವಿತ್ರ ಜೀವಿತದಲ್ಲಿ ಜೀವಿಸುವ ಜೀವನ ಕ್ರಮದ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸುತ್ತದೆ. ಪೌಲನು ವಿವರಿಸುವ ಜೀವಿತದ ಪ್ರಮುಖ ಪದಗಳೆಂದರೆ ಪ್ರೀತಿ, ದೀನತೆ, ಪವಿತ್ರತೆ, ಪರಿಶುದ್ಧತೆ, ಸ್ವಸ್ಥ ಮನಸ್ಸು, ನಂಬಿಗಸ್ಥಿಕೆ ಮತ್ತು ದೃಢತೆ.

ಪೌಲನು ಕ್ರೈಸ್ತೀಯ ಜೀವಿತ ಕ್ರಮವನ್ನು ಹೇಗೆ ಪ್ರೇರೇಪಿಸುತ್ತಿದ್ದಾನೆ ಎಂಬುದನ್ನು ಗಮನಿಸುವುದು ಬಹಳ ಪ್ರಾಮುಖ್ಯವಾದದ್ದು. ಮೊದಲನೇಯದಾಗಿ ಆತನು ರಕ್ಷಣೆಯನ್ನು ಕುರಿತು ಸೂಚಿಸುತ್ತಿದ್ದಾನೆ. ಪ್ರಸ್ತುತ ಪ್ರಪಂಚದಲ್ಲಿ ವಿಶ್ವಾಸಿಗಳು ಪ್ರಾಪಂಚಿಕವಾದ ಬಯಕೆಗಳನ್ನು ಮತ್ತು ಪಾಪದ ಸ್ವಭಾವಗಳನ್ನು ತ್ಯಜಿಸಿ ದೈವಿಕ ನೀತಿಯ ಸ್ವಭಾವಗಳನ್ನು ಹಿಂಬಾಲಿಸಿ ಜೀವಿಸುವಂತೆ ಪ್ರಸ್ತುತದಲ್ಲಿ ಕ್ರಿಸ್ತನಿಂದ ಉಂಟಾದ ಕಾರ್ಯಗಳು ಮತ್ತು ಆತನು ಎರಡನೇಯ ಸಾರಿ ಬರುವಾಗ ಉಂಟಾಗುವ ಸಂಗತಿಗಳು ಅವರನ್ನು ಪ್ರೇರೇಪಿಸುತ್ತವೆ (2:11-14). ಎರಡನೇಯದಾಗಿ, ಪೌಲನು ನೀರಿನ ದೀಕ್ಷಾಸ್ನಾನ ಮತ್ತು ಪವಿತ್ರಾತ್ಮನಿಂದ ಉಂಟಾಗುವ ನೂತನ ಕಾರ್ಯಗಳನ್ನು ತಿಳಿಸುವುದರ ಮೂಲಕ ಕ್ರೈಸ್ತೀಯ ಜೀವಿತವನ್ನು ಉತ್ತೇಜಿಸುತ್ತಿದ್ದಾನೆ (3:3-7). ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕಾಗಿ ನಮ್ಮ ಸ್ವಂತ ಸಾಮಾರ್ಥ್ಯಕ್ಕಿಂತ ಆತನ ಬಲ ನಮಗೆ ಅತ್ಯವಶ್ಯವಾಗಿದೆ. ಯೇಸು ಕ್ರಿಸ್ತನಲ್ಲಿ ದೇವರು ಮಾಡಿರುವ ಕಾರ್ಯಗಳು ರೂಪಾಂತರಗೊಂಡ ನಮ್ಮ ಜೀವನಕ್ಕೆ ಶಕ್ತಿ ಮತ್ತು ಪ್ರೇರಣೆಯನ್ನು ನೀಡುತ್ತದೆ. ಪೌಲನು ತನ್ನ ಇತರೆ ಪತ್ರಿಕೆಗಳಂತೆ, ಕ್ರಿಸ್ತನಲ್ಲಿ ದೇವರು ಈಗಾಗಲೇ ಏನು ಮಾಡಿದ್ದಾನೆ ಅದರ ಮೇಲೆ ತನ್ನ ನೀತಿಶಾಸ್ತ್ರವನ್ನು ಮತ್ತು ಎಚ್ಚರಿಕೆಗಳನ್ನು ನಿರ್ಮಿಸುತ್ತಿದ್ದಾನೆ.

ಪೌಲನು ನಾಯಕರುಗಳ ಕುರಿತು ಮಾತನಾಡುವಾಗ ಹಿರಿಯರು ಮತ್ತು ಮೇಲ್ವಿಚಾರಕರೆಂಬ ಎರಡು ವಿಭಿನ್ನವಾದ ಪದಗಳನ್ನು ಉಪಯೋಗಿಸುತ್ತಿದ್ದಾನೆ. ಆದರೆ ಈ ಪದಗಳು ಸ್ಪಷ್ಟವಾಗಿ ಒಂದೇ ಗುಂಪಿನ ನಾಯಕರುಗಳನ್ನು ಸೂಚಿಸುತ್ತವೆ. ಆತನು ನಾಯಕರುಗಳು ನಂಬಲರ್ಹರಾಗಿರಬೇಕು ಎಂಬುದರ ಕುರಿತು ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದಾನೆ ಹೊರತು ನಾಯಕರುಗಳಲ್ಲಿರುವ ದಿವ್ಯ ಶಕ್ತಿಗಳ ಗುಣಗಳ ಬಗ್ಗೆ ಕಡಿಮೆ ಒತ್ತನ್ನು ನೀಡುತ್ತಿದ್ದಾನೆ. ಕ್ರೈಸ್ತ ನಾಯಕರುಗಳಲ್ಲಿರುವ ಪ್ರಾಥಮಿಕ ವರಗಳು ಮತ್ತು ಅವರಲ್ಲಿರುವ ಸಾಮರ್ಥ್ಯಗಳು ಹೊರಗಿರುವ ಇತರೆ ಜನರನ್ನು ಸಂಧಿಸುವಲ್ಲಿ ಸಹಾಯವಾಗುತ್ತವೆಂದು ಪೌಲನು ತಿಳಿಸುತ್ತಿದ್ದಾನೆ.

ಎರಡನೇ ತಿಮೊಥೆಯನಿಗೆ ಬರೆದ ಪತ್ರಿಕೆ

ಹಿನ್ನಲೆ

ಪೌಲನು ತಿಮೊಥೆಗೆ ಬರೆದ ಎರಡನೇಯ ಪತ್ರವು ಬಹಳ ವೈಯಕ್ತಿಕವಾದದ್ದಾಗಿದೆ. ಪೌಲನಿಗೆ ತನ್ನ ಮರಣವು ಅತೀ ಸಮೀಪವಾಗಿದೆ ಎಂಬುದಾಗಿ ತಿಳಿದಿರುವ ಅಂಶ ಆಧಾರಿತವಾಗಿ ಇದು ರಚಿಸಲ್ಪಟ್ಟಿದೆ.

ಸತ್ಯಾಂಶಗಳು

- ಪೌಲನು ಪುನಃ ಸೆರೆಮನೆಯಲ್ಲಿದ್ದಾನೆ – ತನ್ನ ಕ್ರೈಸ್ತ ನಂಬಿಕೆ ಮತ್ತು ಸೇವೆಯ ನಿಮಿತ್ತದಿಂದ ಉಂಟಾದ ಮರಣದ ಶಿಕ್ಷೆಗಾಗಿ ಕಾಯುತ್ತಿದ್ದಾನೆ.
- ಬಹುಶಃ ಆತನು ರೋಮಿನಲ್ಲಿದ್ದಾನೆ. ರೋಮ್ ಪೌರನಾದ ಆತನು ರೋಮ್ ಚಕ್ರವರ್ತಿಯ ಬಳಿಯಲ್ಲಿ ತನ್ನ ಮನವಿಯನ್ನು ಕೇಳಿರಬಹುದು. ಕ್ರೈಸ್ತ ಸಂಪ್ರದಾಯದ ಪ್ರಕಾರ ಪೌಲನು ನಿರೋ ಚಕ್ರವರ್ತಿಯ ಸಮಯದಲ್ಲಿ ಉಂಟಾದ ಹಿಂಸೆಯಲ್ಲಿ ರೋಮಿನಲ್ಲಿ ರಕ್ತ ಸಾಕ್ಷಿಯಾದನೆಂದು ತಿಳಿಸಲಾಗಿದೆ.
- ಇದು ಕ್ರಿ.ಶ 65-66 ರಲ್ಲಿ ಬರೆಯಲ್ಪಟ್ಟಿತ್ತು.

2 ತಿಮೊಥೆ 4:14-18 ರಲ್ಲಿ ತಿಳಿಸಲ್ಪಟ್ಟಂತೆ, ಕಂಚುಗಾರನಾದ ಅಲೆಕ್ಸಾಂದ್ರನು ಪೌಲನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ರೋಮ್ ಅಧಿಕಾರಿಗಳಿಗೆ ದೂರನ್ನು ನೀಡಿರಬಹುದಾಗಿದೆ, ಯಾಕೆಂದರೆ ಪೌಲನು ಆತನನ್ನು ಸಭೆಯಿಂದ ಬಹಿಷ್ಕರಿಸಿದ್ದನು (1 ತಿಮೊಥೆ 1:20).

ಪತ್ರವು ಸಮಯದ ಗಾಂಭೀರ್ಯತೆಯ ಕುರಿತು ಒತ್ತನ್ನು ನೀಡುತ್ತಿದೆ. ಇದನ್ನು ತಿಮೊಥೆಗೆ ಪೌಲನಿಂದ ಬಂದ ಆತ್ಮೀಕ ಆಸ್ತಿಯ ಹಾಗೆ ಓದಬಹುದು. ಪೌಲನು ಕೈಬಿಡಲ್ಪಟ್ಟವನಂತೆಯೂ ಮತ್ತು ಒಂಟಿತನವನ್ನು ಎದುರಿಸುತ್ತಿದ್ದನು, ಆತನು ತನ್ನ ಜೊತೆ ಸೇವಕನು ಮತ್ತು ಸ್ನೇಹಿತನು ಆದ ತಿಮೊಥೆಯು ತನ್ನ ಹತ್ತಿರವಿರಲು ಬಯಸುತ್ತಿದ್ದಾನೆ (1:3-5, 15; 4:9-11, 21). ತಿಮೊಥೆಗೆ ಪೌಲನು ಮೊದಲು ನೀಡಿದ್ದ ಕೆಲಸವು ಕಠಿಣವಾಗಿತ್ತು ಮತ್ತು ಸುಳ್ಳುಬೋಧಕರು ಸಭೆಯಲ್ಲಿ ಇನ್ನು ತಮ್ಮ ಪ್ರಭಾವವನ್ನು ಹೊಂದಿದ್ದರು (2:14, 3:9; 4:3-4). ತಿಮೊಥೆಯು ನಿರುತ್ಸಾಹನಾಗಿ ಬಿಟ್ಟುಬಿಡಬೇಕೆಂದಿದ್ದನು (1:6-8; 2:1-3).

ತದನಂತರದಲ್ಲಿ ಪೌಲನು ತುಖಿಕನನ್ನು ತಿಮೊಥೆಗೆ ಸೇವೆಯಲ್ಲಿ ಸಹಾಯ ಮಾಡಲು (4:12) ಕಳುಹಿಕೊಟ್ಟನು. ಈ ಪತ್ರವು ಆಧರಣೆ ಮತ್ತು ಪ್ರೋತ್ಸಾಹದಿಂದ ತುಂಬಲ್ಪಟ್ಟಿದೆ.

ಪಠ್ಯಕ್ರಮ

ಎರಡನೇ ತಿಮೊಥೆಯು ಎರಡು ವಿಭಾಗಗಳಾಗಿ ವಿಂಗಡಿಸಬಹುದು:

ಅ. ಪೌಲನು ತಿಮೊಥೆಯು ಸತತ ನಿಷ್ಠನಾಗಿ ಧೈರ್ಯದಿಂದ ಹೋರಾಡುವಂತೆ ಪ್ರೋತ್ಸಾಹಿಸುತ್ತಿದ್ದಾನೆ (1:1-4:5)

ಆ. ಪೌಲನು ತಿಮೊಥೆಗೆ ತನ್ನ ಬೀಳ್ಕೊಡುಗೆಯನ್ನು ತಿಳಿಸುತ್ತಿದ್ದಾನೆ (4:6-18).

ಈ ಪತ್ರವು ಸಂಕ್ಷಿಪ್ತವಾದ ವಂದನೆಯೊಂದಿಗೆ ಪ್ರಾರಂಭಗೊಂಡು, ಮೊದಲ ತಿಮೊಥೆ ಮತ್ತು ತೀತನ ಪತ್ರಿಕೆಯ ಹಾಗೆ ಪೌಲನು ವಿಶೇಷವಾಗಿ ಸುವಾರ್ತೆಗಾಗಿ ನಿಷ್ಠೆಯುಳ್ಳವನು ಮತ್ತು ನಂಬಿಕೆಯುಳ್ಳ ತಿಮೊಥೆಯ ಜೀವಿತಕ್ಕಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಕಾರ್ಯಗಳೊಂದಿಗೆ ಮುಂದುವರೆಯುತ್ತಿದೆ (1:3-5). ಪೌಲನು ಸುವಾರ್ತೆಗಾಗಿ ನಾಚಿಕೆ ಪಡದೆ ಅದಕ್ಕಾಗಿ ಹಿಂಸೆಯನ್ನು ತಾಳಿಕೊಳ್ಳುವುದಕ್ಕಾಗಿ ಮತ್ತು ಸೇವೆಯಲ್ಲಿ ದೃಢವಾಗಿ ನಿಂತುಕೊಳ್ಳುವಂತೆ ತಿಮೊಥೆಯನ್ನು ಪ್ರೋತ್ಸಾಹಿಸುತ್ತಿದ್ದಾನೆ. ಪೌಲನು ತನ್ನ ಉದಾಹರಣೆಯನ್ನೂ ನೀಡುತ್ತಾ ತಾನು ಕ್ರಿಸ್ತನನ್ನು ಹಿಂಬಾಲಿಸಿದಂತೆ, ತಿಮೊಥೆಯು ಪ್ರಸಂಗಿಸುವುದರಲ್ಲಿಯೂ ಮತ್ತು ಶ್ರಮೆಯನ್ನು ತಾಳಿಕೊಳ್ಳುವುದರಲ್ಲಿಯೂ ತನ್ನ ಮಾದರಿಯನ್ನು ಹಿಂಬಾಲಿಸಬೇಕೆಂದು ತಿಳಿಸುತ್ತಿದ್ದಾನೆ (1:13-14; 2:3).

ತಿಮೊಥೆಯು ನಂಬಿಗಸ್ತನಾಗಿ ತನ್ನ ಕಾರ್ಯಗಳಲ್ಲಿ ಸಾತ್ವಿಕನಾಗಿ ಮುಂದುವರೆಯುತ್ತಾ ಸುಳ್ಳುಬೋಧಕರನ್ನು ಎದುರಿಸುವವನಾಗಿರಬೇಕು. ಬಹುಶಃ ಆತನ ಕಾರ್ಯದ ಫಲಿತಾಂಶವು ವಿರೋಧಿಗಳು ಸುವಾರ್ತೆಗೆ ಪಶ್ಚಾತ್ತಾಪಪಡುವಂತೆ ಮಾಡಿತ್ತು. ಆದರೆ ನಿಜವಾದ ಸುವಾರ್ತೆ ಜನರು ಧರ್ಮಭ್ರಷ್ಟರಾಗಿ ದೇವರ ವಿರುದ್ಧ ದಂಗೆ ಏಳುವ ಸ್ವಭಾವವು ನಾವುಗಳು ಕೊನೆಯ ದಿನಗಳಲ್ಲಿ ವಾಸಿಸುತ್ತಿದ್ದೇವೆಂಬುದಕ್ಕೆ ಗುರುತಾಗಿದೆ ಎಂದು ಪೌಲನು ನೆನಪಿಸುತ್ತಿದ್ದಾನೆ (3:1-9). ಹಾಗಾಗಿ ತಿಮೊಥೆಯು ತನ್ನ ನೋವು ಮತ್ತು ಬಳಲುವಿಕೆಯ ಮಧ್ಯದಲ್ಲಿ ಪವಿತ್ರವಾದ ವಾಕ್ಯವನ್ನು ಬಳಸಿಕೊಂಡು ಬೋಧಿಸುತ್ತಾ, ಖಂಡಿಸುತ್ತಾ ಸರಿಪಡಿಸುತ್ತಾ ಸಿದ್ಧಪಡಿಸಬೇಕು (3:10-4:5).

ಪತ್ರಿಕೆಯು ವೈಯಕ್ತಿಕ ಸಲಹೆ ಮತ್ತು ವಂದನೆಗಳೊಂದಿಗೆ ಕೊನೆಗೊಳ್ಳುತ್ತದೆ.

ಸಂದೇಶ

ಎರಡನೇಯ ತಿಮೊಥೆಯು ಇತರೆ ಎರಡು ಸಭಾಪಾಲಕರ ಪತ್ರಿಕೆಗಳಿಗಿಂತ ವ್ಯತ್ಯಾಸವುಳ್ಳದ್ದಾಗಿದೆ, ಯಾಕೆಂದರೆ ಈ ಪತ್ರಿಕೆಯು ಸಭೆಯಲ್ಲಿ ನಾಯಕರುಗಳನ್ನು ನೇಮಿಸುವುದರ ಕುರಿತು ಯಾವುದೇ ಸಲಹೆಗಳನ್ನು ನೀಡುತ್ತಿಲ್ಲ. ಇದು ಬಹಳ ವೈಯಕ್ತಿಕವಾಗಿ ಬರೆಯಲ್ಪಟ್ಟಿದೆ ಮತ್ತು ವೈಯಕ್ತಿಕ ಸಲಹೆಗಳನ್ನು ಒಳಗೊಂಡಿದೆ. ಈ ಪತ್ರಿಕೆಯು ಬಹಳ ಅನ್ಯೋನ್ಯತೆ ಮತ್ತು ಪ್ರೀತಿಪೂರಕತೆಯಿಂದ ಕೂಡಿದ್ದು, ಒಬ್ಬ ಆತ್ಮೀಕ ತಂದೆಯು ತನ್ನ ಆತ್ಮೀಕ ಮಗನಿಗೆ ಬಹಳ ಕಾಳಜಿಯಿಂದ ಬರೆದಿರುವ ಪತ್ರವಾಗಿದೆ. ಈ ಪತ್ರಿಕೆಯಿಂದ ಪೌಲನನ್ನು ಒಬ್ಬ ಸ್ನೇಹಿತನು, ಒಬ್ಬ ಅಪೊಸ್ತಲನು ಮತ್ತು ಆತ್ಮೀಕ ಮಾರ್ಗದರ್ಶಕನನ್ನಾಗಿ ಕಾಣಬಹುದಾಗಿದೆ.

ಈ ಪತ್ರಿಕೆಯ ಮುಖ್ಯಭಾಗದಲ್ಲಿ ಪೌಲನು ತಾನು ಒಬ್ಬ ಮಾದರಿಯುಳ್ಳ ವ್ಯಕ್ತಿ ಎಂಬುದಾಗಿ ತನ್ನನ್ನು ತಾನೇ ಪ್ರತಿಬಿಂಬಿಸಿಕೊಳ್ಳುತ್ತಿದ್ದಾನೆ. ಸಂದೇಶವು ಬದ್ಧತೆ, ನಂಬಿಗಸ್ಥಿಕೆ ಮತ್ತು ಕ್ರೈಸ್ತೀಯ ನಂಬಿಕೆಗಾಗಿ ಹೋರಾಡುವುದರ ಕುರಿತಾಗಿದೆ. ಒಬ್ಬ ಕ್ರೈಸ್ತ ವಿಶ್ವಾಸಿಯು ವಿರೋಧವನ್ನು ಮತ್ತು ಹಿಂಸೆಯನ್ನು ಎದುರಿಸುವುದಕ್ಕೆ ಯಾವಾಗಲೂ ಸಿದ್ಧನಿರಬೇಕು. ಪೌಲನ ಜೀವಿತವು ಕ್ರಿಸ್ತನನ್ನು ಒಪ್ಪಿಕೊಳ್ಳುವುದರ ದೊಡ್ಡ ಬೆಲೆಗೆ ಸಾಕ್ಷಿಯಾಗಿದೆ. ಇದು ಕಠಿವಾದ ಕಾರ್ಯ ಮತ್ತು ಶ್ರಮೆಯ ಹಾಗೂ ಕ್ರಿಸ್ತನಿಗಾಗಿ ಸಾಯುವುದಕ್ಕೂ ಸಿದ್ಧವಿರುವುದರ ಕುರಿತದ್ದಾಗಿದೆ.

ಆದರೆ ಪೌಲನು ಯಾವುದಕ್ಕೂ ವಿಷಾಧಿಸುತ್ತಿಲ್ಲ ಮತ್ತು ನಾಚಿಕೆಗೊಳ್ಳುತ್ತಿಲ್ಲ. ಪತ್ರಿಕೆಯು ಭರವಸೆಯಿಂದಲೂ ಮತ್ತು ಜಯದಿಂದಲೂ ತುಂಬಲ್ಪಟ್ಟಿದೆ. ಕ್ರಿಸ್ತನನ್ನು ಹಿಂಬಾಲಿಸುವಾಗ ಉಂಟಾದ ಪೌಲನ ಹೋರಾಟಗಳಲ್ಲಿ ಯೇಸು ಕ್ರಿಸ್ತನಲ್ಲಿ ಪ್ರಕಟಿಸಲ್ಪಟ್ಟ ಕೃಪೆಯು ಆತನ ಆಧಾರ ಮತ್ತು ಬಂಡೆಗಲ್ಲಾದವು. ಯೇಸು ಕ್ರಿಸ್ತನನ್ನು ಹಿಂಬಾಲಿಸುವಾಗ ಪ್ರಪಂಚದಲ್ಲಿ ಉಂಟಾಗುವ ಯಾವುದೇ ಶ್ರಮೆಗೆ ಒಂದು ಮೌಲ್ಯವುಂಟು. ಇದು ಜೀವನದ ಅರ್ಥ ಮತ್ತು ನಿರೀಕ್ಷೆಯನ್ನು ಕೊಡುತ್ತದೆ. ಮತ್ತು ಪೌಲನು ಈಗ ಈ ಪ್ರಪಂಚವನ್ನು ಬಿಟ್ಟು ಕ್ರಿಸ್ತನೊಂದಿಗೆ ಇರಲು ಸಿದ್ಧನಾಗಿದ್ದಾನೆ.

ಎರಡನೇ ತಿಮೊಥೆಯು ಕ್ರಿಸ್ತನನ್ನು ಅನುಸರಿಸುತ್ತಾ ಸುವಾರ್ತೆಗೆ ನಂಬಿಗಸ್ತರಾಗಿರುವುದನ್ನು ಒತ್ತು ನೀಡುತ್ತದೆ.

ಮೊದಲನೇ ತಿಮೊಥೆಯ ಸಂದೇಶ

ತಿಮೊಥೆಯ ಕುರಿತು ನಮಗೆ ಏನು ತಿಳಿದಿದೆ?



ವಯಸ್ಸು

ಪೌಲನು ತಿಮೊಥೆಗೆ ತನ್ನ ಮೊದಲನೇಯ ಪತ್ರವನ್ನು ಬರೆಯುವಾಗ ಪ್ರಾಯಶಃ ತಿಮೊಥೆಗೆ ಆಗ ಮೂವತ್ತು ವರ್ಷಗಳ ಆಸುಪಾಸಿನ ವಯಸ್ಸು ಇರಬಹುದಾಗಿದೆ. ಪ್ರಾಚೀನ ಕಾಲದಲ್ಲಿ ಆತನು ಇನ್ನು ಯೌವನಸ್ಥನಾಗಿದ್ದನೆಂದು ತಿಳಿಸಲ್ಪಟ್ಟಿದೆ, 1 ತಿಮೊಥೆ 4:12. ಪೌಲನ ಎರಡನೇ ಸುವಾರ್ತಾ ಪ್ರಯಾಣದಲ್ಲಿ ಭಾಗಿಯಾಗಲು ತಿಮೊಥೆಗೆ ಆಹ್ವಾನಿಸಿದಾಗ ಪ್ರಾಯಶಃ ಆತನಿಗೆ 20 ವರ್ಷಗಳ ಪ್ರಾಯವಿರಬಹುದು, ಅಪೊ.ಕೃತ್ಯ. 16:1-3, ಅಂದಿನಿಂದ ಈಗ 13 ರಿಂದ 14 ವರ್ಷಗಳು ಕಳೆದಿವೆ.

ವ್ಯಕ್ತಿತ್ವ

ತಿಮೊಥೆಯು ನಾಚಿಕೆ ಮತ್ತು ಅಂಜುಬುರುಕ ಸ್ವಭಾವದವನಾಗಿದ್ದನು ಮತ್ತು ಆತನಿಗೆ ಹೆಚ್ಚು ಉತ್ತೇಜನ ಮತ್ತು ಧೈರ್ಯದ ಅಗತ್ಯತೆ ಇತ್ತು, 1 ತಿಮೊಥೆ 4:12.

ಆರೋಗ್ಯ

ತಿಮೊಥೆಯು ಶಾರೀರಿಕವಾಗಿ ಬಲಹೀನನಾಗಿದ್ದನು ಮತ್ತು ಆತನಿಗೆ ಹೊಟ್ಟೆ ನೋವಿನ ತೊಂದರೆ ಇತ್ತು, 1 ತಿಮೊಥೆ 5:23.

ಕುಟುಂಬ

ತಿಮೊಥೆಯ ತಾಯಿಯಾದ ಯೂನೀಕೆಯು ಮತ್ತು ಅಜ್ಜಿಯಾದ ಲೋವಿಯು ನಂಬಿಕೆಯಲ್ಲಿ ದೃಢರಾಗಿದ್ದರು, 2 ತಿಮೊಥೆ 1:5. ಆತನ ತಂದೆಯು ಗ್ರೀಕ್ ಮೂಲದವನಾಗಿದ್ದನು, ಅಪೊ.ಕೃತ್ಯ. 16:3.

ಪೌಲನೊಂದಿಗಿನ ಸಂಬಂಧ

ಪೌಲನೊಂದಿಗೆ ತಿಮೊಥೆಯು ನಿಕಟವಾದ ಸಂಬಂಧದಲ್ಲಿದ್ದನು, ತಿಮೊಥೆಯನ್ನು ಪೌಲನು ನಂಬಿಕೆಯ ನಿಜಕುಮಾರನೆಂದು ಪರಿಗಣಿಸಿದ್ದನು, 1 ಕೊರಿ. 14:17. ಅವರಿಬ್ಬರು ಜೊತೆಯಲ್ಲಿ ಸುವಾರ್ತಾ ಪ್ರಯಾಣವನ್ನು ಮಾಡಿದರು, ಅಪೊ.ಕೃತ್ಯ. 18:5, 20:4.

ನಾಯಕತ್ವ

ಎಫೆಸ ಸಭೆಯಲ್ಲಿರುವ ಕಾರ್ಯಗಳನ್ನು ಪೂರ್ಣಗೊಳಿಸುವುದಕ್ಕಾಗಿ ಪೌಲನಿಂದ ನೇಮಿಸಲ್ಪಟ್ಟಿದ್ದನು, 1 ತಿಮೊ. 1:3.

ಮರಣ

ಸಭಾ ಚರಿತ್ರೆಯ ಪ್ರಕಾರ ತಿಮೊಥೆಯು ತನ್ನ ಮುಪ್ಪಿನ ವಯಸ್ಸಿನಲ್ಲಿ ಸುವಾರ್ತೆಯನ್ನು ಸಾರುತ್ತಿರುವಾಗ ಕಲ್ಲು ಎಸೆದು ಅವನನ್ನು ಕೊಂದರೆಂದು ತಿಳಿಸಲಾಗಿದೆ.

ಆರು ಪ್ರಮುಖ ಅಧ್ಯಯನಗಳು

ಈ ಪತ್ರಿಕೆಗಳಲ್ಲಿ ಪೌಲನು ಪ್ರಮುಖ ಆರು ಅಧ್ಯಯನಗಳನ್ನು ತಿಳಿಸುತ್ತಿದ್ದಾನೆ.

1. ಸತ್ಯಬೋಧನೆ ಮತ್ತು ಸುಳ್ಳುಬೋಧಕರು: ಸುಳ್ಳುಬೋಧಕರಿಂದ ಹಾಳಾಗದೆ ಮತ್ತು ಮಲೀನವಾಗದೆ ಸಭೆಯ ಸಿದ್ಧಾಂತವನ್ನು ಕಾಪಾಡುವುದು (1:3-20)
2. ಸಭೆಯ ಸಾರ್ವತ್ರಿಕ ಆರಾಧನೆ (2:1-15).
3. ಸಭೆಯ ಹಿರಿಯರು ಮತ್ತು ಮೇಲ್ವಿಚಾರಕರು: ಸಭೆಯಲ್ಲಿ ಸ್ಥಳೀಯ ನಾಯಕತ್ವ ಮತ್ತು ಮೇಲ್ವಿಚಾರಕರನ್ನು ಮತ್ತು ಹಿರಿಯರನ್ನು ನೇಮಿಸುವುದರಲ್ಲಿ ಅರ್ಹತೆಗಳು (3:1-16)
4. ಸುಳ್ಳುಬೋಧಕರನ್ನು ಗುರುತಿಸುವುದು ಮತ್ತು ಸತ್ಯಬೋಧನೆಯನ್ನು ಪ್ರೋತ್ಸಾಹಿಸುವುದು: ಎಫೆಸ ಸಭೆಯ ನಾಯಕತ್ವದಲ್ಲಿ ಯೌವನಸ್ಥ ನಾಯಕನಾದ ತಿಮೊಥೆಯ ಮೇಲೆ ಹೆಚ್ಚು ಮಹತ್ವದ ಜವಾಬ್ದಾರಿಯನ್ನು ನೀಡುವುದು (4:11-5:2).
5. ಸಭೆಯ ಸಾಮಾಜಿಕ ಜವಾಬ್ದಾರಿಗಳು (5:3-6:2)
6. ಸರಿ ಮತ್ತು ತಪ್ಪು: ಭೌತಿಕ ಸಂಗತಿಗಳ ಕುರಿತು ಸಭೆಯ ಪ್ರತಿಕ್ರಿಯೆ (6:3-21).

1. ಸತ್ಯಬೋಧನೆ ಮತ್ತು ಸುಳ್ಳುಬೋಧಕರು (1:3-20)

ಮೊದಲ ಅಧ್ಯಾಯದಲ್ಲಿ ಪೌಲನು ಸ್ವಸ್ಥಬೋಧನೆಗೆ ಹೆಚ್ಚು ಲಕ್ಷ್ಯ ವಹಿಸುತ್ತಿದ್ದಾನೆ. ಸುಳ್ಳುಬೋಧನೆಯು ಹಬ್ಬದಂತೆ ಅದನ್ನು ತಡೆಯುವುದಕ್ಕಾಗಿ ತಿಮೊಥೆಯು ಎಫೆಸದಲ್ಲೇ ಇರುವಂತೆ ಪೌಲನು ಕೇಳಿಕೊಳ್ಳುತ್ತಿದ್ದಾನೆ. ಪೌಲನು ಗ್ರೀಕ್ ಪದವಾದ "ಹೆಟೆರೋಡಿಡಾಸ್ಕಾಲಿಯೋ" ಅನ್ನು ಉಪಯೋಗಿಸುತ್ತಿದ್ದಾನೆ, ಅಂದರೆ "ಬೇರೆ ಬೋಧನೆಯನ್ನು ಉಪದೇಶಿಸುವುದು" ಎಂದರ್ಥ, (1:3).

ಸುಳ್ಳುಬೋಧಕರು ಯಾರು ಮತ್ತು ಅವರು ಏನನ್ನು ಬೋಧಿಸುತ್ತಿದ್ದರು? ಅವರು ಧರ್ಮಶಾಸ್ತ್ರದ ಉಪದೇಶಕರಾಗಿರಬೇಕೆಂದಿದ್ದರು ಎಂಬುದಾಗಿ ಪೌಲನು ಬರೆಯುತ್ತಿದ್ದಾನೆ (1:7). ಆದರೆ ಧರ್ಮಶಾಸ್ತ್ರವನ್ನು ಉಪದೇಶಿಸುವುದರಲ್ಲಿ ತಪ್ಪೇನಿದೆ? 1:8 ರ ಪ್ರಕಾರ ಧರ್ಮಶಾಸ್ತ್ರವನ್ನು ಉಪಯೋಗಿಸುವುದರಲ್ಲಿ ತಪ್ಪಾದ ಮತ್ತು ಸರಿಯಾದ ಮಾರ್ಗಗಳೆರಡು ಇದೆ.

ಕಲ್ಪನಾಕಥೆಗಳಿಗೂ ಕೊನೆಮೊದಲಿಲ್ಲದ ವಂಶಾವಳಿಗಳಿಗೂ ಲಕ್ಷ್ಯಕೊಡಬಾರದೆಂತಲೂ ಸುಳ್ಳುಬೋಧಕರನ್ನು ತಿಮೊಥೆಯು ಖಂಡಿಸಬೇಕಾಗಿತ್ತು (1:4). ಪೌಲನು ಪುನಃ 4:7 ರಲ್ಲಿ ಪುರಾಣ ಮತ್ತು ಕಟ್ಟುಕಥೆಗಳ ಕುರಿತು ತಿಳಿಸುತ್ತಿದ್ದಾನೆ. ಕಲ್ಪನಾಕಥೆಗಳು ಮತ್ತು ಕೊನೆಮೊದಲಿಲ್ಲದ ವಂಶಾವಳಿಗಳು ವಿವಾದಕ್ಕೆ ಆಸ್ಪದವಾಗಿವೆ ಎಂದು ಪೌಲನು ಬರೆಯುತ್ತಿದ್ದಾನೆ. ವಿವಾದದ ಗ್ರೀಕ್ ಪದದ ಅರ್ಥವು "ಉಪಯೋಗಕ್ಕೆ ಬಾರದ ಊಹಾಪೋಹಗಳು" ಎಂಬುದಾಗಿಯೂ ಸಹ ಇದೆ.

ನಂಬಿಕೆಯಿಂದ ಉಂಟಾಗುವ ದೇವರ ಕಾರ್ಯದ ಬದಲಾಗಿ ಸುಳ್ಳುಬೋಧನೆಯು ಹೆಚ್ಚು ಊಹಾಪೋಹಗಳಿಗೆ ಆಸ್ಪದವನ್ನು ನೀಡುತ್ತವೆ (1:4). ಊಹಾಪೋಹಗಳು ಅನುಮಾನ (ಅಪನಂಬಿಕೆ) ವನ್ನು ಹುಟ್ಟಿಸುತ್ತವೆ. ಆದರೆ ಪ್ರಕಟಣೆ ಮತ್ತು ಸ್ವಸ್ಥಬೋಧನೆಯು ನಂಬಿಕೆಯನ್ನು ಹೆಚ್ಚಿಸುತ್ತವೆ. ಸುಳ್ಳುಬೋಧನೆಯು ವಿವಾದವನ್ನು ಹುಟ್ಟಿಸುತ್ತದೆ, ಆದರೆ ಊಹಾಪೋಹಗಳಿಲ್ಲದ ಬೋಧನೆಯ ಗುರಿಯು ಪ್ರೀತಿಯನ್ನು ಹುಟ್ಟಿಸುತ್ತದೆ (1:5).

ಗುಂಪು ಚರ್ಚೆ

ತಮ್ಮನ್ನು ತಾವೇ ಕ್ರೈಸ್ತ ಜನರೆಂದು ಕರೆಯಿಸಲ್ಪಡುವ ಗುಂಪನ್ನು ನೋಡುವಾಗ ಗುಂಪಾಗಿ ಅಥವಾ ವ್ಯಕ್ತಿಗತವಾಗಿ ಅವರು ಆರೋಗ್ಯಕರವಾದ ಆತ್ಮೀಕತೆಯಲ್ಲಿ ಇಲ್ಲ ಎಂಬುದಾಗಿ ಹೇಳಲು ಯಾವ ಅಂಶವನ್ನು ನೀನು ಪರಿಗಣಿಸುತ್ತೀಯಾ?

ಧರ್ಮಶಾಸ್ತ್ರವು ಬೋಧನೆಯಲ್ಲಿ ಉಪಯೋಗಿಸಲ್ಪಡಲೇಬೇಕು. ಆದರೆ ಇದು ಜನರು ನಂಬಿಕೆಯಲ್ಲಿಯೂ ಮತ್ತು ಪ್ರೀತಿಯಲ್ಲಿಯೂ ಅಭಿವೃದ್ಧಿಯಾಗುವ ರೀತಿಯಲ್ಲಿ ಉಪಯೋಗಿಸಲ್ಪಡಬೇಕು. ಅವರು ಗೊಂದಲಕ್ಕೆ ಅಥವಾ ಖಂಡನೆಗೆ ಒಳಗಾಗಲೇಬಾರದು, ಯಾಕೆಂದರೆ ಯೇಸು ಕ್ರಿಸ್ತನ ಸುವಾರ್ತೆಯು ಜನರನ್ನು ಗೊಂದಲಕ್ಕೆ ನಡೆಸುವುದಿಲ್ಲ, ಗಲಾತ್ಯ. 1:6-7 ಮತ್ತು ಕ್ರಿಸ್ತನಲ್ಲಿರುವವರಿಗೆ ಅಪರಾಧ ನಿರ್ಣಯವು ಇಲ್ಲವೇ ಇಲ್ಲ, ರೋಮಾ. 8:1.

ಯೆಹೂದ್ಯರಿಗೆ ಧರ್ಮಶಾಸ್ತ್ರದ ಉದ್ದೇಶವು ಅವರ ಜೀವಿತವನ್ನು ಸರಿಪಡಿಸಿ ಮಾರ್ಗದರ್ಶಿಸಿ ನೀತಿಯಲ್ಲಿ ನಡೆಸುವ ಮತ್ತು ಅವರನ್ನು ಸಂರಕ್ಷಿಸುವುದಾಗಿತ್ತು. ಯಾವಾಗ ಅವರು ದೇವರ ವಾಕ್ಯವನ್ನು ಪಾಲಿಸುತ್ತಿದ್ದರೋ ಆಗ ಅವರು ಆತನ ಆಶೀರ್ವಾದಗಳಲ್ಲಿ ಮತ್ತು ವಾಗ್ದಾನಗಳಲ್ಲಿ ಜೀವಿಸುತ್ತಿದ್ದರು. ಒಂದು ವೇಳೆ ಅವರು ಧರ್ಮಶಾಸ್ತ್ರವನ್ನು ಪಾಲಿಸದೆ ಹೋದರೆ ಅವರು ದೇವರ ಸಂರಕ್ಷಣೆಯಿಂದ ಹೊರಗಡೆಯಲ್ಲಿ ಇರುತ್ತಿದ್ದರು.

ಪೌಲನು ತಾನು ಒಬ್ಬ ಯೆಹೂದ್ಯನಾದರೂ ಸಹ ದಮಸ್ಕ ರಸ್ತೆಯಲ್ಲಿ ಯೇಸು ಕ್ರಿಸ್ತನನ್ನು ಸಂಧಿಸುವಾಗ ಧರ್ಮಶಾಸ್ತ್ರವು ಪಾಪದಿಂದ ತುಂಬಲ್ಪಟ್ಟ ವ್ಯಕ್ತಿಯನ್ನು ಸಹ ಮನವರಿಕೆಯನ್ನುಂಟು ಮಾಡುತ್ತದೆ ಎಂದು ಅರಿತುಕೊಂಡನು. ಪೌಲನಾಗಿರಲಿ ಅಥವಾ ಬೇರೆ ಯಾರೇ ಆಗಲಿ ಧರ್ಮಶಾಸ್ತ್ರದ ಅವಶ್ಯಕತೆಗಳನ್ನೆಲ್ಲಾ ಪೂರೈಸಲೇಬೇಕಾಗಿರುತ್ತದೆ. ಆದರೆ ಧರ್ಮಶಾಸ್ತ್ರವು ನಮ್ಮ ಪಾಪಗಳನ್ನು ಮತ್ತು ನ್ಯೂನ್ಯತೆಗಳನ್ನು ಮನವರಿಕೆ ಮಾಡುತ್ತದೆ, ರೋಮಾ. 3:23, 7:24. ಆದ್ದುದರಿಂದ, ಪೌಲನು ಗಲಾತ್ಯ 3:24 ರಲ್ಲಿ ಬರೆಯುವುದೇನೆಂದರೆ ಧರ್ಮಶಾಸ್ತ್ರವು ನಮ್ಮನ್ನು ಕ್ರಿಸ್ತನ ಬಳಿಯಲ್ಲಿ ಕರೆತರುವ ಪೋಷಕವಾಗಿದೆ ಎಂಬುದಾಗಿ. ಧರ್ಮಶಾಸ್ತ್ರದ ಮೂಲಕ ನಾವು ಪಾಪದಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ಧರ್ಮಶಾಸ್ತ್ರವು ನಮ್ಮಲ್ಲಿ ಪಾಪದ ಅರಿವನ್ನುಂಟು ಮಾಡಿ ನಮ್ಮ ರಕ್ಷಣೆಯ ಅಗತ್ಯತೆಯನ್ನು

ತಿಳಿಸುತ್ತದೆ. ಯೇಸು ಕ್ರಿಸ್ತನು ಧರ್ಮಶಾಸ್ತ್ರದ ಪರಾಕಾಷ್ಠೆ ಮತ್ತು ನೆರವೇರಿಕೆಯ ಅಂತ್ಯವಾಗಿದ್ದಾನೆ, ರೋಮಾ. 10:4.

ಓದಿರಿ ಮತ್ತು ಹೋಲಿಸಿರಿ

1:8-10 ರಲ್ಲಿ ಪೌಲನು ತಿಳಿಸುತ್ತಿರುವ ಪಾಪದ ಪಟ್ಟಿಯನ್ನು ಓದಿರಿ ಮತ್ತು ನಂತರದಲ್ಲಿ ವಿಮೋಚನ. 20:1-17 ನ್ನು ಹೋಲಿಸಿರಿ. ಪೌಲನ ಪಟ್ಟಿಯಲ್ಲಿ ನೀವು ಕಂಡುಹಿಡಿಯುವ ದಶಾಜ್ಞೆ ಯಾವುದಾಗಿದೆ?

ಸುವಾರ್ತೆಯ ನೈತಿಕ ಮಟ್ಟವು ಧರ್ಮಶಾಸ್ತ್ರದ ನೈತಿಕ ಮಟ್ಟಕ್ಕಿಂತ ಯಾವುದೇ ವ್ಯಾತ್ಯಾಸವಿಲ್ಲದಿರುವುದನ್ನು ನಾವು ಕಾಣುತ್ತೇವೆ. ಆದ್ದುದರಿಂದ, ನೈತಿಕ ಮಟ್ಟವನ್ನೂ ಸಂಬಂಧಪಟ್ಟಂತೆ, ಸುವಾರ್ತೆ ಮತ್ತು ಧರ್ಮಶಾಸ್ತ್ರಗಳ ಮಧ್ಯದಲ್ಲಿ ಯಾವುದೇ ವ್ಯತ್ಯಾಸಗಳು ಇಲ್ಲ. ಆದರೆ ಇದು ರಕ್ಷಣೆಯ ವಿಷಯದಲ್ಲಿ ಬರುವಾಗ ವ್ಯತ್ಯಾಸವು ನಿರ್ಣಾಯಕವಾಗಿರುತ್ತದೆ. ಧರ್ಮಶಾಸ್ತ್ರವು ಖಂಡಿಸುವಾಗ, ಸುವಾರ್ತೆಯು ಸಮರ್ಥಿಸುವುದು. ಮೊದಲ ಅಧ್ಯಾಯದಲ್ಲಿ, ಪೌಲನು ಮೊದಲು ಸುಳ್ಳುಬೋಧಕರನ್ನು ಉಲ್ಲೇಖಿಸುತ್ತಿದ್ದಾನೆ ಮತ್ತು ನಂತರದಲ್ಲಿ ತಾನು ಯೇಸು ಕ್ರಿಸ್ತನ ಒಬ್ಬ ಅಪೊಸ್ತಲನು ಎಂಬುದಾಗಿ ತಿಳಿಸುತ್ತಿದ್ದಾನೆ. ತಿಮೊಥೆಯು ತಾನು ಯಾರನ್ನು ಹಿಂಬಾಲಿಸಬೇಕೆಂಬುದರ ಆಯ್ಕೆಯನ್ನು ಪ್ರಸ್ತುತಪಡಿಸಲಾಗಿದೆ. ತಿಮೊಥೆಯು ಸುಳ್ಳುಬೋಧಕರನ್ನು ಸುಮ್ಮನಿರಿಸಬೇಕೆಂದು ಪೌಲನು ಆತನನ್ನು ಪ್ರೇರೇಪಿಸುತ್ತಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆಯಲ್ಲಿ ತಿಮೊಥೆಯು ಅವರು ಊಹಾಪೋಹಗಳಿಂದ ಜನರನ್ನು ಮೋಸಗೊಳಿಸುವ ಅವರ ಪ್ರಭಾವವನ್ನು ಗಮನಿಸಲೇಬೇಕಾಗಿತ್ತು.

ತಿಮೊಥೆಯು ತಾನು ಒಬ್ಬ ಯೌವನಸ್ಥನಾಗಿದ್ದರು, ಅನುಭವವಿಲ್ಲದವನು ಮತ್ತು ಅಂಜುಬುರುಕನಾಗಿದ್ದರು ಅವನು ತಟಸ್ಥನಾಗಿರಬೇಕಾಗಿದ್ದಿಲ್ಲ. ಆತನು ಒಳ್ಳೆಯ ಹೋರಾಟವನ್ನು ಹೋರಾಡುವುದರ ಕುರಿತ ಆತನಿಗೆ ಉಂಟಾದ ಪ್ರವಾದನೆಗಳನ್ನು ನೆನಪಿಸಲಾಗಿದೆ. ಸೇವೆಗಾಗಿ ತಿಮೊಥೆಯು ಕರೆಯಲ್ಪಡುವಾಗ, ಆತನ ಕರೆಯುವಿಕೆ ಮತ್ತು ಆತನ ಕುರಿತ ಪ್ರವಾದನೆಗಳು ದೇವರ ವಾಕ್ಯದ ಸತ್ಯಬೋಧನೆಯ ಆಧಾರಿತವಾಗಿದ್ದವು. ಆತನು ಮಾಡುವ ಉತ್ತಮ ಹೋರಾಟದ ಹೋರಾಟವು 6:2 ರಲ್ಲಿ ಕಂಡುಬರುತ್ತದೆ. ಇದು ನಂಬಿಕೆಯ ಹೋರಾಟವಾಗಿದೆ.

ಈ ಅಧ್ಯಾಯದ ಕೊನೆಯಲ್ಲಿ ಸೂಚಿಸಲ್ಪಟ್ಟ ಇಬ್ಬರು ವ್ಯಕ್ತಿಗಳಾದ ಹುಮೆನಾಯನು ಮತ್ತು ಅಲೆಗ್ಸಾಂದರರು ನಂಬಿಕೆಯ ಉತ್ತಮ ಹೋರಾಟವನ್ನು ಮಾಡುವುದರಲ್ಲಿ ವಿಫಲರಾಗಿದ್ದರು. ಅವರು ಉತ್ತಮ ಆತ್ಮಸಾಕ್ಷಿಯನ್ನು ತಿರಸ್ಕರಿಸಿ, ಸುಳ್ಳುಬೋಧನೆಯ ವಂಚನೆಗೆ ಒಳಗಾಗಿ ಸತ್ಯಬೋಧನೆಯನ್ನು ತಿರಸ್ಕರಿಸಿದ್ದರು. ಅವರನ್ನು ಸೈತಾನನ ಕೈಗೆ ಪೌಲನು ಒಪ್ಪಿಸಿಕೊಟ್ಟನು. ಅಂದರೆ ಅವರು ಸಭೆಯಿಂದ ಬಹಿಷ್ಕರಿಸಲ್ಪಟ್ಟು ಸೈತಾನನ ಆಳ್ವಿಕೆಯಲ್ಲಿರುವ ಲೋಕಕ್ಕೆ ಹಿಂದೆ ಕಳುಹಿಸಲ್ಪಟ್ಟರು. ಈ ಬಹಿಷ್ಕಾರವು ಶಾಶ್ವತವಾದದ್ದಲ್ಲ. ಈ ಇಬ್ಬರು ಪುರುಷರು ದೂಷಣೆ ಮಾಡುವುದನ್ನು ಬಿಡುವುದು ಅಗತ್ಯವಾಗಿತ್ತು. ಆದರೆ ಅವರು ಪಶ್ಚಾತ್ತಾಪಪಟ್ಟು ಬದಲಾದರೆ ಅವರನ್ನು ಅನ್ಯೋನ್ಯತೆಯಲ್ಲಿ ಪುನಃ ಸೇರಿಸಿಕೊಳ್ಳಬಹುದಿತ್ತು.

ಚರ್ಚಿಸಿರಿ

- 1:19 ನ್ನು ಪುನಃ ಓದಿರಿ. ಈ ವಾಕ್ಯಭಾಗದಲ್ಲಿ ತಿಮೊಥೆಯು ಎರಡು ಸಂಗತಿಗಳನ್ನು ಹಿಡಿದುಕೊಳ್ಳುವುದು ಒಳ್ಳೆಯದೆಂದು ಕಾಣುತ್ತೇವೆ, ಅವುಗಳು ಯಾವುವು? ಅವುಗಳನ್ನು ಹಿಡಿದುಕೊಳ್ಳುವುದು ಪ್ರಾಮುಖ್ಯವಾದದ್ದೆಂದು ನೀನು ಯಾಕೆ ಆಲೋಚಿಸುತ್ತೀಯಾ?
- 1:20 ಅನ್ನು ಓದಿರಿ. ಇಂದಿನ ಸಭೆಗೆ ಈ ವಾಕ್ಯವು ಹೇಗೆ ಅನ್ವಯಿಸಲ್ಪಡುತ್ತದೆ?

ಪ್ರಾರ್ಥಿಸಿರಿ

ಇಂದಿನ ಸಭೆಗಳಲ್ಲಿ ದೇವರ ವಾಕ್ಯವನ್ನು ಬೋಧಿಸುವ ಜವಾಬ್ದಾರಿಯಲ್ಲಿರುವವರಿಗಾಗಿ ಸ್ವಲ್ಪ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ.

2. ಸಭೆಯ ಸಾರ್ವತ್ರಿಕ ಆರಾಧನೆ (2:1-15)

ಮೊದಲನೇಯದಾಗಿ ಎಲ್ಲಾ ಜನರಿಗಾಗಿ ಪ್ರಾರ್ಥಿಸಿ ಕೃತಜ್ಞತಾಸ್ತುತಿಯನ್ನು ಮಾಡಬೇಕಾಗಿ ಪೌಲನು ತಿಮೊಥೆ ಮತ್ತು ಸಭೆಯನ್ನು ಪ್ರೇರೇಪಿಸುತ್ತಿದ್ದಾನೆ. ಆರಾಧಿಸುವ ಮತ್ತು ಪ್ರಾರ್ಥಿಸುವ ಒಂದು ಸಮುದಾಯಕ್ಕೆ ಸಭೆಯು ಅವಶ್ಯಕವಾದದ್ದಾಗಿದೆ. ಸಭೆಯ ಪ್ರಾಥಮಿಕ ಕಾಳಜಿಯು ಸುವಾರ್ತೆಯನ್ನು ಸಾರುವುದು ಎಂಬುದಾಗಿ ಸಾಮಾನ್ಯವಾಗಿ ಹೇಳುತ್ತಾರೆ, ಆದರೆ ಇದು ಸತ್ಯವಾದದ್ದಲ್ಲ. ಆರಾಧನೆಯು ಸುವಾರ್ತೀಕರಣಕ್ಕಿಂತ ಅಗ್ರಸ್ಥಾನವನ್ನು ಹೊಂದಿದೆ. ದೇವರನ್ನು ಪ್ರೀತಿಸಬೇಕೆಂಬುದು ಮೊದಲ ಆಜ್ಞೆಯಾದರೆ, ನಿನ್ನ ನೆರೆಯವನನ್ನು ಪ್ರೀತಿಸಬೇಕು ಎಂಬುದು ಎರಡನೇಯ ಆಜ್ಞೆಯಾಗಿದೆ. ಸುವಾರ್ತೀಕರಣವು ಒಂದು ದಿವಸ ಮುಗಿದು ಹೋಗುವಂತಹದ್ದಾಗಿದೆ, ಆದರೆ ದೇವರನ್ನು ಆರಾಧಿಸುವಂತಹದ್ದು ನಿತ್ಯತ್ವದಲ್ಲಿಯೂ ಇರುವಂತಹದ್ದಾಗಿದೆ. ಸುವಾರ್ತೀಕರಣವು ಸಹ ಆರಾಧನೆಯ ಒಂದು ಭಾಗವಾಗಿದೆ. ಅಧ್ಯಾಯ 2 ರಲ್ಲಿ ಪೌಲನು ಆರಾಧನೆಯ ಕುರಿತು ಬೋಧಿಸುತ್ತಾನೆ. ಸಭೆಯು ವಿಶಾಲ ಮತ್ತು ವಿಶ್ವವ್ಯಾಪಕವಾದ ಮನೋಭಾವದಿಂದ ಆರಾಧಿಸತಕ್ಕದ್ದು. ಆರಾಧನೆಯ ಸಮಯದಲ್ಲಿ ಪುರುಷ ಮತ್ತು ಸ್ತ್ರೀಯರು ಹೇಗೆ ವರ್ತಿಸಬೇಕೆಂಬುದನ್ನು ಪೌಲನು ಉಲ್ಲೇಖಿಸುತ್ತಿದ್ದಾನೆ.

ಅ. ಸಾರ್ವತ್ರಿಕ ಆರಾಧನೆಯಲ್ಲಿ ವಿಶ್ವದ ಕಾಳಜಿ

ಅ. ಸಭೆಯ ಪ್ರಾರ್ಥನೆಯಲ್ಲಿ ಎಲ್ಲಾ ಜನರ ಕುರಿತು ಕಾಳಜಿಯು ಇರತಕ್ಕದ್ದು (2:1-2)

ಪೌಲನು ನಾಲ್ಕು ವಿಧವಾದ ಆರಾಧನೆಯನ್ನು ಉಲ್ಲೇಖಿಸುತ್ತಿದ್ದಾನೆ. ವಿನಂತಿಗಳು, ಪ್ರಾರ್ಥನೆಗಳು, ಮಧ್ಯಸ್ಥಿಕೆಯ ಪ್ರಾರ್ಥನೆ ಮತ್ತು ಕೃತಜ್ಞತಾಸ್ತುತಿಗಳಾಗಿವೆ. ಈ ವಿಧವಾದ ಆರಾಧನೆಯು ಯಾವ ವಿಧದಲ್ಲಿ ಒಂದಕ್ಕೊಂದು ವ್ಯತ್ಯಾಸವಾಗಿದೆ ಎಂಬುದನ್ನು ಅರಿಯುವುದು ಪ್ರಾಮುಖ್ಯವಾದ ಪ್ರಶ್ನೆಯಲ್ಲ. ಆದರೆ ಪ್ರಾಮುಖ್ಯವಾದ ಸಂಗತಿ ಏನೆಂದರೆ ಅವುಗಳು ಪ್ರತಿಯೊಬ್ಬರಿಂದ ಅಭ್ಯಾಸಿಸುವುದು ಅವಶ್ಯವಾಗಿದೆ! ಸಭೆಯು ಪ್ರಾರ್ಥನೆಯಲ್ಲಿ ವಿಶ್ವವನ್ನು ಅಪ್ಪಿಕೊಳ್ಳಬೇಕು.

ಅಧಿಕಾರದಲ್ಲಿರುವವರಿಗಾಗಿ ಮತ್ತು ಅರಸರುಗಳಿಗಾಗಿ ಸಭೆಯು ಪ್ರಾರ್ಥಿಸತಕ್ಕದ್ದು. ಪೌಲನು ಪತ್ರವನ್ನು ಬರೆಯುತ್ತಿರುವಾಗ ಆಡಳಿತ ಮಾಡುತ್ತಿದ್ದವರು ಯಾರೆಂಬುದನ್ನು ನೆನಪಿಸಿಕೊಳ್ಳುವುದು ಅವಶ್ಯ. ಕ್ರೈಸ್ತ ನಂಬಿಕೆಯನ್ನು ವಿರೋಧಿಸಿದವನು, ಕ್ರೌರ್ಯನು, ಹಿಂಸಕನು ಆದ ನಿರೋ ಅರಸನು ಆ ಕಾಲದಲ್ಲಿ ಆಳ್ವಿಕೆಯನ್ನು ನಡೆಸುವವನಾಗಿದ್ದನು. ಆದರೆ ಸಭೆಯು ತಮ್ಮ ಅಧಿಕಾರಿಗಳಿಗಾಗಿ ಹಾಗೂ ಅರಸರುಗಳಿಗಾಗಿ ಪ್ರಾರ್ಥಿಸುವುದಕ್ಕಾಗಿ ಕರೆಯಲ್ಪಟ್ಟಿದೆ, ಯೆರೆ. 29:7 ಅನ್ನು ಸಹ ನೋಡಿರಿ. ಪ್ರಾರಂಭದ ದೈವಶಾಸ್ತ್ರಜ್ಞನು ಮತ್ತು ಸಭೆಯ ಪಿತಾಮಹನಾದ "ಟರ್ ಟಲಾಲಿಯನ್" ಹೀಗೆ ಬರೆಯುತ್ತಿದ್ದಾನೆ, "ಅರಸರುಗಳಿಗಾಗಿಯೂ ಮತ್ತು ಅಧಿಕಾರದಲ್ಲಿರುವ ನಾಯಕರುಗಳಿಗಾಗಿಯೂ ನಾವು ಪ್ರಾರ್ಥಿಸಬೇಕಾಗಿದೆ. ಯಾಕೆಂದರೆ ಅವರ ಅಧಿಕಾರವು ಶಾಂತಿಯಿಂದ ಮುಂದುವರೆದು ಪ್ರಪಂಚದ ಅಂತ್ಯವು ಮುಂದೂಡಲ್ಪಡುವುದಕ್ಕಾಗಿ".

ನಾವೆಲ್ಲರೂ ಶಾಂತಿ ಮತ್ತು ನೆಮ್ಮದಿಯಿಂದಲೂ ಜೀವಿಸುವುದಕ್ಕಾಗಿ ಇಂತಹ ವಿಧವಾದ ಪ್ರಾರ್ಥನೆಯ ಅಗತ್ಯತೆಯಿದೆ. ರೋಮ್ ಚಕ್ರವರ್ತಿಯ ಆಶೀರ್ವಾದವನ್ನು ಪೌಲನು ಸ್ವತಃ ತಾನೇ ಅನುಭವಿಸಿದ್ದವನಾಗಿದ್ದನು. ಎಲ್ಲಾ ಜನರು ರಕ್ಷಣೆಯನ್ನು ಹೊಂದಬೇಕೆಂದು ಬಯಸುವ ದೇವರಿಗೆ ನಾಯಕರುಗಳಿಗಾಗಿ ಪ್ರಾರ್ಥಿಸುವಂತಹದ್ದು ಒಳ್ಳೆಯದು ಮತ್ತು ಮೆಚ್ಚುಗೆವುಳ್ಳದ್ದಾಗಿದೆ. ಹಾಗಾಗಿ ದೇಶದಲ್ಲಿ ಸಮಾಧಾನವನ್ನು ಕಾಪಾಡಿಕೊಂಡು ಹೋಗುವುದಕ್ಕಾಗಿ ನಾವು ದೇಶದ ನಾಯಕರುಗಳಿಗಾಗಿ ಮಾಡುವ ಪ್ರಾರ್ಥನೆಯ ಅಂತಿಮ ಗುರಿಯಾಗಿದೆ. ದೇಶದಲ್ಲಿ ನಂಬಿಕೆ ಮತ್ತು ನೈತಿಕತೆಯು ಹಾಗೂ ಸುವಾರ್ತೀಕರಣವು ಯಾವುದೇ ಅಡೆತಡೆ ಇಲ್ಲದೆ ಸಾಗುವುದಕ್ಕಾಗಿ ನಾವು ಪ್ರಾರ್ಥಿಸತಕ್ಕದ್ದು.

ಚರ್ಚಿಸಿರಿ

ಇಂತಹ ವಿಧವಾದ ಪ್ರಾರ್ಥನೆಗಳಲ್ಲಿ ನಾವು ಹೇಗೆ ಭಾಗವಹಿಸಬಹುದು? ವಿಶ್ವಕ್ಕಾಗಿ ನಾವು ಹೇಗೆ ಪ್ರಾರ್ಥಿಸಬೇಕು? ಏನನ್ನು ಪ್ರಾರ್ಥಿಸಬೇಕೆಂಬುದು ನಮಗೆ ಹೇಗೆ ಗೊತ್ತಾಗುತ್ತದೆ? ಉದಾಹರಣೆಗಳನ್ನು ನೀಡಿರಿ.

ಆ. ಎಲ್ಲಾ ಜನರ ಕಾಳಜಿಯು ದೇವರ ಬಯಕೆಯಾಗಿದೆ (2:3-4)

ಎಲ್ಲಾ ಜನರು ರಕ್ಷಣೆ ಹೊಂದಬೇಕೆಂದು ದೇವರು ಬಯಸುತ್ತಾನೆ. ಇಂದು ಲೋಕದಲ್ಲಿ ಹೆಚ್ಚು ಅನ್ಯಾಯವು ಇದೆ. ಇಂದು ಜನರು ಬಳಸುವ ವರ್ಣಭೇದ, ರಾಷ್ಟ್ರೀಯತೆ, ಜಾತೀಯತೆ ಮತ್ತು ಮೇಲು ಕೀಳೆಂಬ ಅನೇಕ ಸಮಾಜಘಾತುಕ ಸಂಗತಿಗಳು ವ್ಯಾಪಕವಾಗಿ ಹರಡಿದೆ. ನಾವು ಸತ್ಯಾಂಶವನ್ನು ನಮ್ಮ ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು: ದೇವರು ಲೋಕವನ್ನು ಪ್ರೀತಿಸುತ್ತಾನೆ, ಮತ್ತು ಎಲ್ಲಾ ಜನರು ರಕ್ಷಣೆ ಹೊಂದಬೇಕೆಂದು ಬಯಸುತ್ತಾನೆ. ಪರಿಣಾಮವಾಗಿ, ನಾವು ಎಲ್ಲಾ ದೇಶದ ಜನರಿಗೆ ಸುವಾರ್ತೆಯನ್ನು ಸಾರಬೇಕೆಂದು ಮತ್ತು ಅವರು ಮನತಿರುಗಿ ದೇವರನ್ನು ಕಂಡುಕೊಳ್ಳುವಂತೆ ಪ್ರಾರ್ಥಿಸಬೇಕೆಂದು ಆತನು ನಮಗೆ ಆಜ್ಞೆಯನ್ನು ನೀಡಿದ್ದಾನೆ.

ಇ. ಎಲ್ಲಾ ಜನರಿಗಾಗಿ ಯೇಸು ಕ್ರಿಸ್ತನು ಮರಣವನ್ನು ಹೊಂದಿದನು (2:5-6)

ಯೇಸು ಕ್ರಿಸ್ತನಿಲ್ಲದೆ ದೇವರಿಗೂ ಮತ್ತು ಮನುಷ್ಯರಿಗೂ ಬೇರೆ ಯಾರೂ ಮಧ್ಯಸ್ಥಗಾರನು ಇಲ್ಲ ಎಂಬುದಾಗಿ ಪೌಲನು ತಿಳಿಸುತ್ತಿದ್ದಾನೆ. ಯೇಸು ಕ್ರಿಸ್ತನು ಮಾತ್ರ ಲೋಕದ ಎಲ್ಲಾ ಜನರು ರಕ್ಷಣೆ ಹೊಂದುವುದಕ್ಕಾಗಿ ಮಾರ್ಗವಾಗಿದ್ದಾನೆ. ಆತನನ್ನು ಹೊರತು ಬೇರೆ ಯಾವ ಮಾರ್ಗವು ಇಲ್ಲ.

ಈ. ಸಭೆಯ ಘೋಷಣೆಯು ಪ್ರತಿಯಬ್ಬ ವ್ಯಕ್ತಿಗೂ ಹಾಗೂ ಪ್ರತಿಯೊಂದು ದೇಶಕ್ಕೂ ಕಾಳಜಿಯನ್ನು ವಹಿಸುವಂತದ್ದು ಆಗಿರಬೇಕು (2:7)

ಪೌಲನು ಅನ್ಯರಿಗೂ ಅಪೊಸ್ತಲನು ಮತ್ತು ಬೋಧಕನಾಗಿಯೂ ತಾನು ರಾಯಭಾರಿಯಾಗಿದ್ದೇನೆಂದು ಕರೆದುಕೊಳ್ಳುತ್ತಿದ್ದಾನೆ. ಸಭೆಯು ಸಹ ವಿಶ್ವವ್ಯಾಪಕ ಸೇವೆಯ ಕರೆಯುವಿಕೆಯನ್ನು ಹೊಂದಿದೆ. ಎಲ್ಲರಿಗೋಸ್ಕರ ಪ್ರಾರ್ಥಿಸುವುದಕ್ಕಾಗಿ (2:1) ಮತ್ತು ಎಲ್ಲಾ ದೇಶಗಳಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ ಸಭೆಯು ಕರೆಯಲ್ಪಟ್ಟಿದೆ (2:7). ಸಭೆಯು ದೇವರನ್ನು ಅನುಕರಣೆ ಮಾಡತಕ್ಕದ್ದು. ಅಂದರೆ ಸಭೆಯ ಕಾಳಜಿಯು ದೇವರ ಕಾಳಜಿಯಾಗಿರಬೇಕೆಂಬುದು. ಒಬ್ಬನೇ ದೇವರು ಮತ್ತು ಒಬ್ಬನೇ ಮಧ್ಯವರ್ತಿಯು ಇರುವ ಕಾರಣದಿಂದ ಸಭೆಯ ಎಲ್ಲಾ ಸೇವೆಗಳಲ್ಲಿಯೂ ಮತ್ತು ಪ್ರಾರ್ಥನೆಗಳಲ್ಲಿ ಎಲ್ಲಾ ಜನರು ಭಾಗಿಯಾಗತಕ್ಕದ್ದು. ಇದು ಎಲ್ಲಾ ದೇಶಗಳನ್ನು ಸುವಾರ್ತೆಯ ಮೂಲಕ ತಲುಪುವುದಕ್ಕಾಗಿ ಕರೆಯಲ್ಪಟ್ಟ ದೇವರ ಐಕ್ಯತೆ ಮತ್ತು ಕ್ರಿಸ್ತನ ಸಾಟಿ ಇಲ್ಲದಿರುವಿಕೆಯಾಗಿದೆ. ದೇವರ ಬಯಕೆ ಮತ್ತು ಕ್ರಿಸ್ತನ ಮರಣವು ಪ್ರತಿಯೊಬ್ಬರ ಕುರಿತ ಕಾಳಜಿಯಾಗಿದೆ. ಪರಿಣಾಮವಾಗಿ ಸಭೆಯು ಸಹ ತುರ್ತಾಗಿ ಸುವಾರ್ತೆಯನ್ನು ಸಾರುವುದರಿಂದಲೂ ಮತ್ತು ಎಡಬಿಡದೆ ಪ್ರಾರ್ಥಿಸುವುದರಿಂದಲೂ ಎಲ್ಲಾ ಜನರ ಕುರಿತ ಕಾಳಜಿಯನ್ನು ಹೊಂದಿ ತನ್ನ ಕಾರ್ಯವನ್ನು ಮಾಡತಕ್ಕದ್ದು.

ಆ. ಸಾರ್ವಜನಿಕ ಆರಾಧನೆಯಲ್ಲಿ ಸ್ತ್ರೀ ಪುರುಷರ ಪಾತ್ರ (2:8-15)

ಪೌಲನು ಎರಡನೇಯ ಅಧ್ಯಾಯದಲ್ಲಿ ಸಾರ್ವತ್ರಿಕ ಆರಾಧನೆಯ ಮೇಲೆ ಕೇಂದ್ರೀಕರಿಸುವುದನ್ನು ಮುಂದುವರೆಸಿದ್ದಾನೆ, ಈಗ ಸ್ಥಳೀಯ ಸಭೆಗಳಲ್ಲಿ ಪ್ರಾರ್ಥನೆಗಳ ಆಧ್ಯತೆ ಮತ್ತು ಉದ್ದೇಶದಿಂದ ಪುರುಷರು ಮತ್ತು ಸ್ತ್ರೀಯರು ಸಭೆಯ ಆರಾಧನೆಗಾಗಿ ಕೂಡಿ ಬರುವಾಗಲೆಲ್ಲಾ ಸೂಕ್ತ ನಡುವಳಿಕೆಯನ್ನು ಹೊಂದಿರಬೇಕೆಂದು ತಿಳಿಸುತ್ತಿದ್ದಾನೆ. ಈ ವಾಕ್ಯಭಾಗವು ವಿಶೇಷವಾಗಿ ವ. 11-15 ಗಳು ಆರಾಧನೆಯ ಕುರಿತ ಹೆಚ್ಚು ಚರ್ಚೆಗೆ ಮತ್ತು ವಿವಾದಾತ್ಮ ಕಡೆಗೆ ಕಾರಣಗಳಾಗಿವೆ. ನಾವು ಈ ವಾಕ್ಯಭಾಗವನ್ನು ಓದುವಾಗ (ಆದರೆ ಇತರರೂ ಸಹ) ಅರ್ಥವಿವರಣೆಯ ಎರಡು ತತ್ವಗಳಾದ ಸಾಮರಸ್ಯ ತತ್ವ ಮತ್ತು ಇತಿಹಾಸದ ತತ್ವಗಳನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು:

- ಸಾಮರಸ್ಯ ತತ್ವ: ದೇವರು ತನ್ನನ್ನು ತಾನೇ ವಿರುದ್ಧವಾಗಿರುವುದಿಲ್ಲ. ಸತ್ಯವೇದವು ದೈವಶಾಸ್ತ್ರ ಮತ್ತು ಸಾಹಿತ್ಯ ಶೈಲಿಗಳೆರಡರಲ್ಲಿಯೂ ಸಮೃದ್ಧಿಯುಳ್ಳದ್ದಾಗಿದ್ದರೂ ಅದರ ಆಧಾರವಾಗಿರುವ ಸಿದ್ಧಾಂತಗಳಲ್ಲಿ ಸ್ಥಿರತೆ ಇದೆ. ಆದ್ದದರಿಂದ ಈ ವಾಕ್ಯಭಾಗವು ದೇವರ ಸೃಷ್ಟಿಯ ಮತ್ತು ವಿಮೋಚನೆಯ ಕಾರ್ಯದಲ್ಲಿ ಪುರುಷ ಮತ್ತು ಸ್ತ್ರೀಯರ ಮಧ್ಯದಲ್ಲಿ ಸ್ಥಾನಮಾನ ಮತ್ತು ಮೌಲ್ಯಗಳಲ್ಲಿ ಸಮಾನತೆಯನ್ನು ದೂರಮಾಡಿಲ್ಲ.
- ಇತಿಹಾಸದ ತತ್ವ: ದೇವರು ಯಾವಾಗಲೂ ಸಾಂಸ್ಕೃತಿಕವಾಗಿಯೂ ಮತ್ತು ಐತಿಹಾಸಿಕವಾಗಿಯೂ ನಿರ್ದಿಷ್ಟವಾಗಿ ಮಾತನಾಡುತ್ತಾನೆ. ಶೂನ್ಯತೆಯ ಪ್ರದೇಶದ ಸಾಂಸ್ಕೃತಿಕತೆಯಿಂದ ದೇವರ ವಾಕ್ಯವು

ಮಾತನಾಡಲ್ಪಟ್ಟಿಲ್ಲ. ಪ್ರತಿಯೊಂದು ದೇವರ ವಾಕ್ಯವು ಸಾಂಸ್ಕೃತಿಕ ಹಿನ್ನಲೆಯಿಂದ ಮಾತನಾಡಲ್ಪಟ್ಟಿದೆ. ದೇವರ ವಾಕ್ಯವನ್ನು ಓದುವವನು ಅವಶ್ಯಕವಾದ ದೇವರ ಪ್ರಕಟಣೆ (ಬದಲಾಗದೆ ಇರುವಂತಹದ್ದು) ಮತ್ತು ಅದರ ಸಾಂಸ್ಕೃತಿಕ ಪದವಿನ್ಯಾಸಗಳ (ಬದಲಾಗುವಂತಹದ್ದು) ಮಧ್ಯದಲ್ಲಿನ ವ್ಯತ್ಯಾಸವನ್ನು ತಿಳಿದಿರಬೇಕು.

ಪುರುಷ ಮತ್ತು ಅವರ ಪ್ರಾರ್ಥನೆಗಳು (2:8)

"ಆದದರಿಂದ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ಸಂದೇಹವೂ ಇಲ್ಲದೆ ಪವಿತ್ರವಾದ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ".

ಪುರುಷರು ತಮ್ಮ ಪವಿತ್ರವಾದ ಕೈಗಳಿಂದ ಪ್ರಾರ್ಥಿಸತಕ್ಕದ್ದು. ಹಸ್ತಗಳು ಹೇಗೆ ಪವಿತ್ರವಾಗುತ್ತವೆ? ಕೀರ್ತನೆ 24:4 ನ್ನು ಹೋಲಿಸಿರಿ.



ಇಲ್ಲಿ ದೇವರ ಸನ್ನಿಧಿಯಲ್ಲಿ ಬರುವವನು ಶುದ್ಧವಾದ ಹಸ್ತಗಳನ್ನು ಮತ್ತು ನಿರ್ಮಲವಾದ ಹೃದಯವನ್ನು ಹೊಂದಿದವನಾಗಿರಬೇಕೆಂದು ಬರೆಯಲ್ಪಟ್ಟಿದೆ. ಹಸ್ತಗಳು ಹೃದಯವನ್ನು ಪ್ರತಿನಿಧಿಸುತ್ತವೆ. ಒಂದು ವೇಳೆ ನಮ್ಮ ಹೃದಯದಲ್ಲಿ ಪಾಪವು ತುಂಬಲ್ಪಟ್ಟಿದ್ದರೆ ಅಥವಾ ಇತರರ ಕುರಿತು ಅಥವಾ ದೇವರ ಕುರಿತು ಕೋಪದಿಂದಲೂ ಮತ್ತು ಕಹಿತನದಿಂದಲೂ ತುಂಬಲ್ಪಟ್ಟು ನಮ್ಮ ಹಸ್ತಗಳನ್ನು ದೇವರ ಮುಂದೆ ಎತ್ತುವುದಾದರೆ ಅದು ಪ್ರಯೋಜನಕ್ಕೆ ಬಾರದ್ದಾಗಿರುತ್ತದೆ. ಮೊದಲು ನಾವು ರಾಜಿಯಾಗುವುದು ಅಗತ್ಯವಾಗಿರುತ್ತದೆ. ಪ್ರಾರ್ಥನೆಯಲ್ಲಿ ಪರಿಶುದ್ಧತೆ, ಪ್ರೀತಿ ಮತ್ತು ಸಮಾಧಾನ ಅಗತ್ಯವಾಗಿರುತ್ತವೆ. ಇದು ಬದಲಾಗದ ಪ್ರಕಟಣೆಯಾಗಿರುತ್ತದೆ. ಹಸ್ತಗಳನ್ನು ಎತ್ತುವಂತಹದ್ದು ಒಂದು ಸಾಂಸ್ಕೃತಿಕ ಸೂಚನೆಯಾಗಿರುತ್ತದೆ. ಇದು ಭೌಗೋಳಿಕವಾಗಿಯೂ ಮತ್ತು ಐತಿಹಾಸಿಕವಾಗಿಯೂ ಅನೇಕ ಸಂಗತಿಗಳನ್ನು ಸೂಚಿಸುತ್ತದೆ. ಸತ್ಯವೇದದಲ್ಲಿ ಕೈಗಳನ್ನೆತ್ತುವುದು ಮಾತ್ರವಲ್ಲ, ಪ್ರಾರ್ಥಿಸುವ ಅನೇಕ ಭಂಗಿಗಳನ್ನು ನಾವು ಕಾಣಬಹುದಾಗಿದೆ.

ನಮ್ಮ ಪ್ರಾರ್ಥನೆಯು ಯಾವಾಗಲೂ ಪರಿಶುದ್ಧತೆ, ಪ್ರೀತಿ ಮತ್ತು ಸಮಾಧಾನಗಳಿಂದ ತುಂಬಲ್ಪಟ್ಟಿರಬೇಕೆಂದು ಈ ವಾಕ್ಯಭಾಗವು ನಮ್ಮನ್ನು ಬೋಧಿಸುತ್ತದೆ. ಒಂದು ವೇಳೆ ನಾವು ಮೊಣಕಾಲೂರಿ ಅಥವಾ ನಿಂತುಕೊಂಡು ಅಥವಾ ಕೂತುಕೊಂಡು ಅಥವಾ ಬೋರಲಬಿದ್ದು ಹೇಗೆ ಪ್ರಾರ್ಥಿಸಿದರೂ, ನಾವು ದೇವರ ಮುಂದೆ ಬರುವಾಗ ಗೌರವ ಮತ್ತು ಯಥಾರ್ಥತೆಯಿಂದ ಬರುವುದು ಬಹಳ ಪ್ರಾಮುಖ್ಯವಾಗಿರುತ್ತದೆ.

ಸ್ತ್ರೀಯರು ಮತ್ತು ಅವರ ಶೃಂಗಾರ (2:9-10)



"ಹಾಗೆಯೇ ಸ್ತ್ರೀಯರು ಮಾನಸ್ಥೆಯರಾಗಿಯೂ ಡಂಭವಿಲ್ಲದವರಾಗಿಯೂ ಇದ್ದು ಮರ್ಯಾದೆಗೆ ತಕ್ಕ ಉಡುಪನ್ನುಟ್ಟುಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ. ಅವರು ಜಡೆ ಚಿನ್ನ ಮುತ್ತು ಬೆಲೆಯುಳ್ಳ ವಸ್ತ್ರ ಮುಂತಾದವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳದೆ ದೇವಭಕ್ತೆಯರೆನಿಸಿಕೊಳ್ಳುವ ಸ್ತ್ರೀಯರಿಗೆ ಯುಕ್ತವಾಗಿರುವ ಪ್ರಕಾರ ಸತ್ಕ್ರಿಯೆಗಳಿಂದಲೇ ಅಲಂಕರಿಸಿಕೊಳ್ಳಬೇಕು".

ಸ್ತ್ರೀಯರು ತಮ್ಮನ್ನು ಆಭರಣಗಳಿಂದ ಶೃಂಗರಿಸಿಕೊಳ್ಳುವುದರಲ್ಲಿ ಪೌಲನಿಗೆ ಯಾವುದೇ ಸಮಸ್ಯೆಗಳಿಲ್ಲ. ಆದರೆ ಸ್ತ್ರೀಯರು ತಮ್ಮನ್ನು ಹೇಗೆ ಶೃಂಗರಿಸಿಕೊಳ್ಳುವರೋ ಅದರ ಕುರಿತು ಪ್ರಶ್ನೆಯಿದೆ. ಆತನ ಸಲಹೆಯಲ್ಲಿ ನಾವು ಮೂರು ಅಂಶಗಳನ್ನು ಕಾಣಬಹುದಾಗಿದೆ:

1. ಸ್ತ್ರೀಯರು ಯೋಗ್ಯವಾದ, ಸಾಧಾರಣ ಮತ್ತು ವಿನಯದಿಂದ ಕೂಡಿದ ಉಡುಪುಗಳನ್ನು ಧರಿಸತಕ್ಕದ್ದು. ಅಂದರೆ ಅವರು ಸಾಧಾರಣವಾದ ಮತ್ತು ವಿವೇಚನಾಯುಕ್ತ ಉಡುಪುಗಳನ್ನು ಧರಿಸತಕ್ಕದ್ದೇ ಹೊರತು ಆಕರ್ಷಣೆಗೊಳಿಸುವ ಉಡುಪುಗಳನ್ನು ಉದ್ದೇಶಪೂರ್ವಕವಾಗಿ ಧರಿಸಕೂಡದು.

2. ಸ್ತ್ರೀಯರು ಜಡೆ ಚಿನ್ನ ಮುತ್ತು ಬೆಲೆಯುಳ್ಳ ವಸ್ತ್ರಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳಬಾರದು. ಅಂದರೆ ಜಡೆ ಹಾಕಿಕೊಳ್ಳುವುದಾಗಲಿ, ಚಿನ್ನ ಮುತ್ತು ಬೆಲೆಯುಳ್ಳ ವಸ್ತ್ರಗಳನ್ನು ಧರಿಸಿಕೊಳ್ಳಲೇಬಾರದೆಂತಲ್ಲ. ಪ್ರಕಣೆಯ ಪುಸ್ತಕದಲ್ಲಿ ಸಭೆಯು ಮದಲಗಿತ್ತಿಯಾಗಿದೆ ಎಂಬುದಾಗಿ ತಿಳಿಸಲಾಗಿದೆ. ಕುರಿಮರಿಯಾದಾತನ ಮದಲಗಿತ್ತಿಯು ತನ್ನನ್ನು ಸುಂದರವಾಗಿ ಶೃಂಗರಿಸಿಕೊಂಡಿದ್ದಾಳೆಂದು ಬರೆಯಲ್ಪಟ್ಟಿದೆ. ಎಫೆಸ ಸಭೆಯಲ್ಲಿರುವ ಸ್ತ್ರೀಯರು ತಮ್ಮನ್ನು ತಾವೇ ಆ ದಿನಗಳಲ್ಲಿದ್ದ ವೇಶ್ಯೆಯರ ಹಾಗೆ ಉಡುಪುಗಳನ್ನು ಧರಿಸಿಕೊಳ್ಳಬಾರದೆಂಬುದು ಪೌಲನ ಅಭಿಪ್ರಾಯವಾಗಿದೆ. ಆದ್ದದರಿಂದ ಇಲ್ಲಿ ಪೌಲನ ವಿಷಯವೇನೆಂದರೆ ಕ್ರೈಸ್ತ ಮಹಿಳೆಯರು ಬಟ್ಟೆ, ಜಡೆ ಹೆಣೆದುಕೊಳ್ಳುವುದು ಮತ್ತು ಆಭರಣಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳಬಹುದು, ಇದು ಅವರ ಸಂಸ್ಕೃತಿಯಲ್ಲಿ ಅತಿರಂಜಿತ, ವ್ಯರ್ಥವಾದದ್ದೆಂದು ಅಥವಾ ಸೂಚಿತವಾದ್ದದೆಂದು ಪರಿಗಣಿಸುವುದಿಲ್ಲ.

3. ಸ್ತ್ರೀಯರು ತಮ್ಮನ್ನು ಸತ್ಕ್ರಿಯೆಗಳಿಂದಲೇ ಅಲಂಕರಿಸಿಕೊಳ್ಳತಕ್ಕದ್ದು. ಪೌಲನು ಶಾರೀರಿಕ ಮತ್ತು ನೈತಿಕ ಎಂಬ ಎರಡು ವಿಧವಾದ ಸ್ತ್ರೀಯರ ಸೌಂದರ್ಯಗಳನ್ನು ತಿಳಿಸುತ್ತಿದ್ದಾನೆ, ಅವುಗಳು ಸ್ತ್ರೀಯರ ದೈಹಿಕ ಸೌಂದರ್ಯ ಮತ್ತು ನೈತಿಕ ಗುಣಗಳನ್ನು ಒಳಗೊಂಡಿವೆ.

ಒಟ್ಟಾರೆಯಾಗಿ ಹೇಳುವುದಾದರೆ: ವಿವಿಧ ಶೈಲಿಯ ಕೂದಲು, ಅಲಂಕಾರಗಳು ಮತ್ತು ಬಟ್ಟೆಗಳು ಸಾಂಸ್ಕೃತಿಕವಾಗಿರುತ್ತವೆ ಮತ್ತು ಅವು ದುರಾಕರ್ಷಣೆ ಮಾಡುವಂತಿಲ್ಲವಾಗಿದ್ದರೆ ಅಥವಾ ವ್ಯರ್ಥವಾಗಿಲ್ಲದವುಗಳಾಗಿದ್ದರೆ ಅದು ತಪ್ಪಾಗಿರುವುದಿಲ್ಲ. ಆದರೆ ದೈವಭಕ್ತೆಯಳಾದ ಸ್ತ್ರೀಯು ದೇವರೊಂದಿಗಿರುವ ಸಂಬಂಧದಿಂದ ಬರುವ ಅವರ ಆಂತರಿಕ ಸೌಂದರ್ಯದ ಕುರಿತು ಹೆಚ್ಚು ಗಮನವನ್ನು ಹರಿಸತಕ್ಕದ್ದು. ಇದೇ ಈ ಪಠ್ಯದ ಬದಲಾಗದ ಪ್ರಕಟಣೆಯಾಗಿದೆ.

ಸ್ತ್ರೀಯರು ಮತ್ತು ಅವರ ಪಾತ್ರ (2:11-15)

"ಸ್ತ್ರೀಯರು ಮೌನವಾಗಿದ್ದು ಪೂರ್ಣ ವಿಧೇಯರಾಗಿ ಉಪದೇಶವನ್ನು ಕೇಳಬೇಕು. ಉಪದೇಶ ಮಾಡುವುದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವುದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ; ಅವರು ಮೌನವಾಗಿರಬೇಕು. ಮೊದಲು ನಿರ್ಮಿತನಾದವನು ಆದಾಮನಲ್ಲವೇ, ಆ ಮೇಲೆ ಹವ್ವಳು; ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ, ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು. ಆದರೂ ಸ್ತ್ರೀಯರು ಮಾನಸ್ಥೆಯರಾಗಿ ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧತೆಯಲ್ಲಿಯೂ ನೆಲೆಗೊಂಡಿದ್ದರೆ ಮಕ್ಕಳನ್ನು ಹೆರವುದರಲ್ಲಿ ರಕ್ಷಣೆ ಹೊಂದುವರು"

ಈ ವಾಕ್ಯಭಾಗವು ವಿವಿಧ ಕಾರಣಗಳಿಂದಾಗಿ ಸತ್ಯವೇದದಲ್ಲಿ ಅತ್ಯಂತ ವಿವಿಧಾತ್ಮಕ ಪಠ್ಯಗಳಲ್ಲಿ ಒಂದಾಗಿದೆ. ಮೊಟ್ಟಮೊದಲನೇಯದಾಗಿ ಸಭೆಯಲ್ಲಿ ನಾಯಕತ್ವವನ್ನು ನಿಭಾಯಿಸುವುದಕ್ಕೂ ಮತ್ತು ಬೋಧಿಸುವುದಕ್ಕೂ ಅವಕಾಶವನ್ನು ಮಾಡಿಕೊಟ್ಟ ಪೌಲನ ವೈಯಕ್ತಿಕ ಜೀವಿತಕ್ಕೂ ಮತ್ತು ಸೇವೆಗೂ ಇದು ಹೊಂದಿಕೆಯಾಗುವುದಿಲ್ಲ (ರೋಮಾ. 16). ಎರಡನೇಯದಾಗಿ, ಈ ಪಠ್ಯವು ಪ್ರಾಚೀನ ಗ್ರೀಕ್ ಭಾಷೆಯಲ್ಲಿ ಬಳಸಲಾಗಿರುವ ಗ್ರೀಕ್ ಪದಗಳನ್ನು ಒಳಗೊಂಡಿದೆ, ಇದು ಸತ್ಯವೇದ ಶಾಸ್ತ್ರಜ್ಞರಿಗೆ ಪಠ್ಯವು ಏನನ್ನು ತಿಳಿಸುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಠಿಣವಾಗಿರುತ್ತದೆ. ಮತ್ತು ಮೂರನೇಯದಾಗಿ, ಇಂದು ಅನೇಕ ಸಂಸ್ಕೃತಿಗಳಲ್ಲಿ ಸೂಕ್ಷ್ಮವಾಗಿರುವ ವಿಷಯವಾದ, ಲಿಂಗದ ವಿಷಯದ ಕುರಿತು ಇದು ಚರ್ಚಿಸುತ್ತದೆ. ಆದ್ದದರಿಂದ ಸಭೆಗಳಲ್ಲಿ ಲಿಂಗಾಧಾರಿತವಾದ ಸ್ಥಾನಮಾನಗಳು ಆ ಸಭೆಯ ನಂಬಿಕೆ ಮೇಲೆ ಪರಿಣಾಮವನ್ನು ಬೀರುತ್ತದೆ.

ತಿಮೊಥೆಯು ಸೇವೆಯನ್ನು ಮಾಡುತ್ತಿದ್ದ ಎಫೆಸ ಪಟ್ಟಣದಲ್ಲಿದ್ದ ಸಭೆಗಳಲ್ಲಿ ಸುಳ್ಳುಬೋಧನೆಯು ಹೆಚ್ಚಾಗಿ ಹರಡಿಕೊಂಡಿತ್ತು. ಪೌಲನು ಈ ಪತ್ರವನ್ನು ಬರೆಯುವುದಕ್ಕೆ ಇದು ಒಂದು ಕಾರಣವಾಗಿತ್ತು. ಈ ಸುಳ್ಳುಬೋಧನೆಗೆ ಹೆಚ್ಚು ಸ್ತ್ರೀಯರು ಪ್ರಭಾವಿತರಾಗಿದ್ದರೆಂಬುದಾಗಿ ಕಾಣಲ್ಪಡುತ್ತದೆ (5:6, 13, 15; 2 ತಿಮೊ. 3:6). ಅವರು ತಪ್ಪಾಗಿ ಮತ್ತು ಸುಳ್ಳಾಗಿ ಬೋಧಿಸಲ್ಪಡುತ್ತಿದ್ದರು. ಉಪದೇಶ ಮಾಡುವುದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವುದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ ಎಂಬುದಾಗಿ ಪೌಲನು ತಿಳಿಸಲು ಬಳಸುತ್ತಿರುವ ಭಾಷೆಯು ಇದನ್ನು ಸೂಚಿಸುತ್ತದೆ. ಆದ್ದದರಿಂದ ಸ್ತ್ರೀಯರು ಅಧೀನದಲ್ಲಿದ್ದು ಸತ್ಯವನ್ನು ಕಲಿಯಬೇಕೆಂಬುದಾಗಿ ಪೌಲನು ತಿಳಿಸುತ್ತಿದ್ದಾನೆ. ಅವರು ಬೋಧಿಸಲು ಅವಕಾಶವಿದ್ದಿಲ್ಲ ಯಾಕೆಂದರೆ ಎಫೆಸದಲ್ಲಿರುವ ಈ ಸ್ತ್ರೀಯರು ಸುಳ್ಳು ಸಿದ್ಧಾಂತವನ್ನು ಬೋಧಿಸುತ್ತಿದ್ದರು. ಅದಕ್ಕೆ ಬದಲಾಗಿ ಅವರು ತಮ್ಮನ್ನು ತಾವೇ ಸತ್ಯವನ್ನು ಕಲಿಯಬೇಕಾಗಿತ್ತು. ಆದ್ದದರಿಂದ ಸ್ತ್ರೀ (ಮತ್ತು ಪುರುಷ) ಸುಳ್ಳುಬೋಧನೆಯನ್ನು ಕಲಿತು, ಅದನ್ನು ಹಬ್ಬಿಸುವಂತವರು ತಮ್ಮನ್ನು ತಾವೇ ಸತ್ಯಬೋಧನೆಯನ್ನು

ಕಲಿಯುವುದು ಅವಶ್ಯವಾಗಿದೆ. ಆಗ ಮಾತ್ರ ಅವರು ಇತರರಿಗೆ ಬೋಧಿಸಬಹುದಾಗಿದೆ. ಪೌಲನು ಪ್ರಿಸ್ಕಿಲ್ಲ ಅಂತಹ ಕೆಲವು ಸ್ತ್ರೀಯರನ್ನು ಸೇವೆಯಲ್ಲಿ ಬೋಧಿಸುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದನ್ನು ನಾವು ನೋಡಬಹುದಾಗಿದೆ (ರೋಮಾ. 16:3-4). ಇದು ಬದಲಾಗದ ಪ್ರಕಟಣೆಯಾಗಿದೆ.

ಸ್ತ್ರೀಯರು ಶಾಂತತೆ ಮತ್ತು ಪೂರ್ಣ ವಿಧೇಯತೆಯಲ್ಲಿ ಕಲಿಯುವಂತಹದ್ದು ಒಂದು ಸಾಂಸ್ಕೃತಿಕ ಸಂಗತಿಯಾಗಿದೆ. ಪ್ರಾಚೀನ ದಿನಗಳಲ್ಲಿ ಶಿಷ್ಯರು ಶಾಂತತೆಯಿಂದಲೂ ಮತ್ತು ವಿಧೇಯತೆಯಿಂದಲೂ ತಮ್ಮ ಗುರುಗಳಿಂದ ಕಲಿಯುವುದು ಅವಶ್ಯವಾಗಿತ್ತು. ಅದು ಸಾಂಸ್ಕೃತಿಕವಾಗಿ ಹೀಗೆಯೇ ನಡೆಯುತ್ತಿತ್ತು.

ಪೌಲನು ಯಾಕೆ ಆದಾಮ ಮತ್ತು ಹವ್ವರನ್ನು ಉಲ್ಲೇಖಿಸುತ್ತಿದ್ದಾನೆ? ಪೌಲನು ಸಾಮಾನ್ಯವಾಗಿ ಪಾಪದಲ್ಲಿ ಬಿದ್ದುಹೋದದ್ದಕ್ಕಾಗಿ ಆದಾಮನನ್ನೇ ಆರೋಪಿಸುತ್ತಿದ್ದನು (ಉದಾ. ರೋಮಾ. 5 ಅನ್ನು ನೋಡಿರಿ), ಆದರೆ ಇಲ್ಲಿ ಆತನು ಹವ್ವಳದ್ದೇ ತಪ್ಪು ಎಂಬುದಾಗಿ ಹೇಳುತ್ತಿದ್ದಾನೆ. ಹವ್ವಳು ತಾನು ಸೃಷ್ಟಿಸಲ್ಪಡುವುದಕ್ಕಿಂತ ಮುಂಚೆ ದೇವರು ಆದಾಮನಿಗೆ ಬೋಧಿಸಿದ ಎಲ್ಲಾ ಬೋಧನೆಗಳನ್ನು ಆಕೆಯು ಹೊಂದಿದ್ದಿಲ್ಲ (ಆದಿ. 2ನ್ನು ನೋಡಿರಿ). ಹಾಗಾಗಿ ಆಕೆಯು ಸರ್ಪದ ಎಲ್ಲಾ ಮಾತುಗಳನ್ನು ನಂಬಿದಳು. ಇಲ್ಲಿ ಪೌಲನು ಹವ್ವಳ ಉದಾಹರಣೆಯನ್ನು ತೆಗೆದುಕೊಂಡು ಸತ್ಯಬೋಧನೆಯ ಪ್ರಾಮುಖ್ಯತೆಯನ್ನು ಸ್ತ್ರೀ (ಪುರುಷರು) ಹೊಂದುವುದು ಎಷ್ಟು ಅವಶ್ಯವಾದದ್ದೆಂದು ತಿಳಿಸುತ್ತಿದ್ದಾನೆ. ಒಂದು ವೇಳೆ ಇದನ್ನು ನಿರ್ಲಕ್ಷ್ಯಿಸಿದರೆ, ಅದರ ಪರಿಣಾಮವು ಘೋರವಾಗಿರುತ್ತದೆ.

ಯೇಸು ಕ್ರಿಸ್ತನ ಮೇಲೆ ನಂಬಿಕೆಯಿಡುವುದರಿಂದಲೇ ನಮಗೆ ರಕ್ಷಣೆ ಬರುವುದೆಂಬುದನ್ನು ನಾವು ತಿಳಿದಿದ್ದೇವೆ. ಆದ್ದರಿಂದ ಸ್ತ್ರೀಯರು ಮಗುವನ್ನು ಹೆರುವುದರಿಂದಲೇ ರಕ್ಷಣೆ ಹೊಂದುತ್ತಾರೆಂದು ಪೌಲನು ಹೇಳುವಂತಹದ್ದು ಅಸಂಭವನಿಯವಾಗಿದೆ. ಪೌಲನು ಹೇಳುತ್ತಿರುವುದರ ಅತ್ಯಂತ ಸಾಧ್ಯತೆಯ ಅರ್ಥವೇನೆಂದರೆ ಕ್ರಿಸ್ತನನ್ನು ಉಲ್ಲೇಖಿಸುತ್ತಾ, ಸ್ತ್ರೀಯರು ಮಗುವಿನ ಜನನದ ಮುಖಾಂತರ ರಕ್ಷಣೆಯನ್ನು ಹೊಂದುತ್ತಾರೆಂದು ತಿಳಿಸುತ್ತಿದ್ದಾನೆ. ಇದು ದೀನಳು ಮತ್ತು ವಿಧೇಯಳಾದ ಮರಿಯಳ ಮುಖಾಂತರ ಎಲ್ಲಾ ಜನರಿಗೆ ರಕ್ಷಣೆಯುಂಟಾಯಿತು. ಇಲ್ಲಿ ಹವ್ವಳು ಮತ್ತು ಆಕೆಯು ಪಾಪದಲ್ಲಿ ಬೀಳುವುದಕ್ಕೆ ವಹಿಸಿದ ಪಾತ್ರಕ್ಕೆ ತದ್ವಿರುದ್ಧವಾಗಿ ಸ್ತ್ರೀಯರ ಕುರಿತು ಸಕರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

3. ಸಭೆಯ ನಾಯಕರು ಮತ್ತು ಹಿರಿಯರು (3:1-16)

ಒಬ್ಬ ಸಭಾಪಾಲಕನಾಗಿರುವುದು ಒಂದು ಶ್ರೇಷ್ಠವಾದ ಕಾರ್ಯವಾಗಿದೆ, ಯಾಕೆಂದರೆ ಇದು ದೇವಜನರ ಕುರಿತು ಕಾಳಜಿಯನ್ನು ಮತ್ತು ಪೋಷಣೆಗಳನ್ನು ಒಳಗೊಂಡಿರುತ್ತದೆ. ಒಬ್ಬ ಸಭಾಪಾಲಕರಾಗಿರಬೇಕಾದರೆ ದೇವರ ಕರೆಯುವಿಕೆಯು ಅತ್ಯಗತ್ಯವಾಗಿರುತ್ತದೆ. ಆದರೆ ಕರೆಯಲ್ಪಡುವ ವ್ಯಕ್ತಿಯ ಆಂತರಿಕ ಮಹತ್ವಾಕಾಂಕ್ಷೆ ಮತ್ತು ನಿರ್ಣಯದ ಅತ್ಯಗತ್ಯೆ ಅವಶ್ಯವಾಗಿರುತ್ತದೆ. ಹಾಗೆಯೇ ನಡೆಸಲ್ಪಡುವ ಸಭೆಯ ಜನರ ದೃಢೀಕರಣದ ಅಗತ್ಯತೆಯು ಸಹ ಅವಶ್ಯವಾಗಿರುತ್ತದೆ.

ಪೌಲನು ತಿಳಿಸುವ ಅರ್ಹತೆಗಳನ್ನು ಅಭ್ಯಾಸಿಸೋಣ:

ಅ. ವೈವಾಹಿಕ ಜೀವಿತದಲ್ಲಿ ನಿಷ್ಠೆ: ಸಭಾಪಾಲಕರು ವಿವಾಹಿತ ವ್ಯಕ್ತಿಗಳಾಗಿ, ಮಾದರಿಯಲ್ಲಿ ಜೀವಿಸಬೇಕು.

ಆ. ಸ್ವಯಂ ನಿಯಂತ್ರಣ: ಸಭಾಪಾಲಕನು ಸಮಶೀತೋಷ್ಣನು, ಸ್ವಯಂ ನಿಯಂತ್ರಣನು ಹಾಗೂ ಗೌರವಾನ್ವಿತನು ಆಗಿರಬೇಕು. ಒಬ್ಬರು ಈ ರೀತಿಯಾಗಿ ಹೇಳಿದ್ದಾರೆ, "ನನಗೆ ನನ್ನ ಮೇಲೆ ಪೂರ್ಣ ನಿಯಂತ್ರಣ ಮತ್ತು ಶಕ್ತಿ ಇಲ್ಲದಿದ್ದರೆ ನಾನು ಇತರರನ್ನು ಹೇಗೆ ನಡೆಸಲು ಸಾಧ್ಯವಿರುತ್ತದೆ?"

ಇ. ಅತಿಥಿ ಸತ್ಕಾರ ಮಾಡುವುದು: ಈ ಪದದ ಅಕ್ಷರಶಃವಾದ ಅರ್ಥವೇನೆಂದರೆ "ಅಪರಿಚಿತರಿಗೆ ಪ್ರೀತಿ ತೋರಿಸುವುದು". ಹಾಗಾಗಿ ಒಬ್ಬ ಸಭಾಪಾಲಕನು ಉದಾರಿಯು ಹಾಗೂ ಪ್ರೀತಿಯಿಂದ ತುಂಬಲ್ಪಟ್ಟವನಾಗಿರಬೇಕು.

ಈ. ಬೋಧಿಸುವ ಸಾಮರ್ಥ್ಯ: ಇದು ಉಲ್ಲೇಖಿಸಲಾಗಿರುವ ಏಕೈಕ "ವೃತ್ತಿಪರ" ಅರ್ಹತೆಯಾಗಿದೆ ಎಂಬುದನ್ನು ಗಮನಿಸಿರಿ. ಸಭಾಪಾಲಕರು ದೇವರ ವಾಕ್ಯವನ್ನು ಬೋಧಿಸಲು ಶಕ್ತರಾಗಿರಬೇಕು.

ಉ. ಕುಡಿಯುವ ಅಭ್ಯಾಸಗಳು: ಕುಡಿಕತನಕ್ಕೆ ಎಚ್ಚರಿಕೆಯಿಂದ ಇರಬೇಕೆಂಬುದಾಗಿ ಸತ್ಯವೇದದಾದ್ಯಂತ ನಾವು ಕಾಣಬಹುದಾಗಿದೆ. ಸಭಾಪಾಲಕರು ಜನರನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಮತ್ತು ಬೋಧಿಸಲು ಕರೆಯಲ್ಪಟ್ಟ ನಿಮಿತ್ತ, ಅವರು ಕುಡಿಕತನದಲ್ಲಿ ಇರಬಾರದೆಂಬುದನ್ನು ಇಲ್ಲಿ ಪೌಲನು ಸ್ಪಷ್ಟಪಡಿಸುತ್ತಿದ್ದಾನೆ.

ಊ. ಕೋಪ ಮತ್ತು ಮನೋಧರ್ಮ: ಸುಳ್ಳುಬೋಧಕರು ಜಗಳ, ಅಹಂಕಾರ ಮತ್ತು ಕಲಹಗಳೆಂಬ ಗುಣಲಕ್ಷಣಗಳಿಂದ ಕೂಡಿದವರಾಗಿರುತ್ತಾರೆ, ಆದರೆ ಕ್ರೈಸ್ತೀಯ ನಾಯಕರುಗಳು ಸೌಮ್ಯಸ್ವಭಾವದವರಾಗಿರಬೇಕು. ಸೌಮ್ಯಸ್ವಭಾವವುಳ್ಳ ಸಭಾಪಾಲಕರು ತಮ್ಮ ಗುರುವಾದ ಯೇಸುವಿನಂತೆ ಇರುತ್ತಾರೆ.

ಋ. ಹಣದ ಕುರಿತಾಗಿ ಅವರ ಮನೋಭಾವ: ಸಭಾಪಾಲಕರು ಸಮರ್ಪಕರಾಗಿ ಪಾವತಿಸಬೇಕೆಂದು ಪೌಲನು ಬಯಸುತ್ತಿದ್ದಾನೆ (5:17-18). ಆದರೆ ಅವರಿಗೆ ಹಣದ ಮೇಲೆ ಪ್ರೀತಿ ಇರಬಾರದು. ಪೌಲನು ತನ್ನ ಪತ್ರಿಕೆಯ ಕೊನೆಯಲ್ಲಿ "ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ" (6:10) ಎಂದು ತಿಳಿಸುತ್ತಿದ್ದಾನೆ.

ಎ. ಕುಟುಂಬದಲ್ಲಿ ಶಿಸ್ತು: ಸಭಾಪಾಲಕರು ದೇವರ ಮತ್ತು ತಮ್ಮ ಸ್ವಂತ ಮನೆಗಳನ್ನು ನಡೆಸುವ ಜವಾಬ್ದಾರಿಗಾಗಿ ಕರೆಯಲ್ಪಟ್ಟವರಾಗಿದ್ದಾರೆ. ಸಭಾಪಾಲಕರ ಸ್ವಂತ ಕುಟುಂಬಗಳು ಅವರ ತರಬೇತಿಯ ಕೇಂದ್ರಗಳಾಗಿರುತ್ತವೆ. ಒಂದು ವೇಳೆ ಅವರು ತಮ್ಮ ಸ್ವಂತ ಕುಟುಂಬಗಳನ್ನು ಸರಿಯಾಗಿ ನೋಡಿಕೊಳ್ಳಲು ಸಾಧ್ಯವಾಗದೆ ಇದ್ದರೆ ಹೇಗೆ ದೇವರ ಮನೆಯನ್ನು ನೋಡಿಕೊಳ್ಳಲು ಸಾಧ್ಯವಿರುತ್ತದೆ?

ಏ. ಆಧ್ಯಾತ್ಮಿಕ ಪ್ರಭುದ್ಧತೆ: ನಾಯಕರು ಇತರರನ್ನು ನಡೆಸಬೇಕಾದರೆ ಅವರು ತಮ್ಮ ನಂಬಿಕೆಯಲ್ಲಿ ಪ್ರಭುದ್ಧತೆಯನ್ನು ಹೊಂದಿರತಕ್ಕದ್ದು. ಒಂದು ವೇಳೆ ಅವರು ಅನುಭವವಿಲ್ಲದವರಾಗಿದ್ದರೆ ಮತ್ತು ನಂಬಿಕೆಯಲ್ಲಿ ಬೇರೂರದಿದ್ದರೆ, ಅವರು ಅಹಂಕಾರಿಗಳು ಹಾಗೂ ಹೆಮ್ಮೆಪಡುವವರಾಗಿರುತ್ತಾರೆ.

ಐ. ಹೊರಗಿನವರಿಂದ ಸಾಕ್ಷಿ: ಜಗತ್ತು ಸಭೆಯನ್ನು ಮತ್ತು ಅದರ ನಾಯಕರುಗಳನ್ನು ವೀಕ್ಷಿಸುತ್ತಿದೆ. ಸೈತಾನನು ಸುವಾರ್ತಾ ಸೇವಕರನ್ನು ಕಳಂಕಿತರನ್ನಾಗಿ ಮಾಡಲು ಹೊರಟಿದ್ದಾನೆ. ಆದ್ದದರಿಂದ ಸಭಾನಾಯಕರು ಸಭೆಯ ಹೊರಗಿರುವ ಜನರಿಂದ ಪರಿಗಣಿಸಲ್ಪಡುವವರು ಮಾತ್ರವಾಗಿರದೆ ಎಲ್ಲಾ ಜನರಿಂದ ಗೌರವವನ್ನು ಮತ್ತು ಮರ್ಯಾದೆಯನ್ನು ಸಂಪಾದಿಸಿಕೊಂಡವರಾಗಿರತಕ್ಕದ್ದು.

ಗುಂಪು ಚರ್ಚೆ

- ಮೇಲೆ ಪಟ್ಟಿಮಾಡಿದ ಕ್ಷೇತ್ರಗಳಲ್ಲಿ ಒಬ್ಬ ವ್ಯಕ್ತಿಯ ಹೊಂದಾಣಿಕೆಯನ್ನು ನೀವು ಹೇಗೆ ಪರೀಕ್ಷಿಸುತ್ತೀರಿ? (ಪ್ರತಿಯೊಂದು ಗುಂಪು ಎರಡರಿಂದ ಮೂರು ಅಂಶಗಳನ್ನು ಆಯ್ಕೆ ಮಾಡಿಕೊಂಡು ಚರ್ಚಿಸಿರಿ).
- ಪೌಲನು ಹಿರಿಯರನ್ನು ಮತ್ತು ಆತ್ಮೀಕತೆಯಲ್ಲಿ ಪ್ರಭುದ್ಧತೆಯನ್ನು ಹೊಂದಿದವರ ಕುರಿತು ಮಾತನಾಡುತ್ತಿದ್ದಾನೆ. ಸೇವೆಯಲ್ಲಿ ಇತ್ತೀಚಿಗೆ ವಿಶ್ವಾಸದಲ್ಲಿ ಬಂದಂತಹ ಜನರನ್ನು ಹಾಗೂ ಯೌವನಸ್ಥರನ್ನು ಆಯ್ಕೆ ಮಾಡುವುದರಲ್ಲಿ ಏನಾದರೂ ಸಮಸ್ಯೆ ಇದೆಯೋ? ಯೌವನಸ್ಥ ನಾಯಕರನ್ನು ಪ್ರೋತ್ಸಾಯಿಸಲು ಏನನ್ನು ಮಾಡಬಹುದು?

4. ಸುಳ್ಳುಬೋಧಕರನ್ನು ಗುರುತಿಸುವುದು ಮತ್ತು ಸತ್ಯಬೋಧನೆಯನ್ನು ಪ್ರೋತ್ಸಾಯಿಸುವುದು (4:1-5:2)

ಅ. ಸುಳ್ಳುಬೋಧಕರನ್ನು ಹೇಗೆ ಗುರುತಿಸುವುದು (4:1-10)

ಕೆಲವರು ನಂಬಿಕೆಯನ್ನು ಬಿಟ್ಟುಬಿಡಲು ಸಿದ್ಧರಾಗಿದ್ದಾರೆ ಮತ್ತು ಇದು ಈಗಾಗಲೇ ಪ್ರಾರಂಭಗೊಂಡಿದೆ ಎಂದು ಪೌಲನು ಹೇಳುತ್ತಿದ್ದಾನೆ. ಆತನು ಇದಕ್ಕೆ ಮೂರು ಕಾರಣಗಳನ್ನು ನೀಡುತ್ತಿದ್ದಾನೆ:

1. ಅವರು ಸೈತಾನನು ಮತ್ತು ವಂಚಿಸುವ ಆತ್ಮಗಳು ಕಲಿಸುವ ಬೋಧನೆಗಳನ್ನು ಹಿಂಬಾಲಿಸುವವರಾಗಿದ್ದಾರೆ.

ಸುಳ್ಳುಬೋಧಕರ ಹಿಂದೆ ವಾಸ್ತವಿಕವಾಗಿ ಅಂಧಕಾರಶಕ್ತಿಯ ಪ್ರಾಬಲ್ಯವಿರುತ್ತದೆ. ಸೈತಾನನು ವಂಚಕನಾಗಿದ್ದು ಜನರನ್ನು ಇಂತಹ ಸುಳ್ಳಿನ ಕಡೆಗೆ ಆಕರ್ಷಿಸುವವನಾಗಿದ್ದಾನೆ.

2. ಇಂತಹ ಬೋಧನೆಯು ಕಪಟತನದ ಸುಳ್ಳಿನಿಂದ ಬರುತ್ತದೆ.

ಇತರರನ್ನು ವಂಚಿಸುವುದಕ್ಕಾಗಿ ಸೈತಾನನು ಇತರೆ ಮನುಷ್ಯರನ್ನು ಉಪಯೋಗಿಸುತ್ತಾನೆ. ಸುಳ್ಳುಬೋಧಕರು ಉದ್ದೇಶಪೂರ್ವಕವಾಗಿ ವಂಚಕರಾಗಿದ್ದು, ತಾವು ಕಲಿಸಿದ್ದನ್ನು ತಾವೇ ನಂಬದವರಾಗಿದ್ದಾರೆ.

3. ಅವರ ಮನಸಾಕ್ಷಿಯು ಕಾದ ಕಬ್ಬಿಣದಂತೆ ನಾಶವಾಗಿದೆ.

ಚರ್ಮವನ್ನು ಕಾದ ಕಬ್ಬಿಣದಿಂದ ಸುಟ್ಟಾಗ ಅದು ನೋವನ್ನುಂಟುಮಾಡುತ್ತದೆ ಮತ್ತು ಚರ್ಮವು ಸುಡಲ್ಪಟ್ಟು ಅದರ ಸ್ಪರ್ಷವನ್ನು ಕಳೆದುಕೊಂಡು ಸಾಯುತ್ತದೆ. ಸುಳ್ಳುಬೋಧಕರ ಮನಸಾಕ್ಷಿಯು ಮೌನವಾಗಿಯೆ ಸತ್ತುಹೋಗಿರುವಂತಹದ್ದಾಗಿರುತ್ತದೆ. ಸುಳ್ಳುಬೋಧಕರು ತಮ್ಮ ಮನಸಾಕ್ಷಿಯ ಸಂವೇದನೆ ಅಥವಾ ಸೂಕ್ಷ್ಮತೆಯನ್ನು ಕಳೆದುಕೊಂಡಿರುತ್ತಾರೆ. ಅವರು ಕಪಟತನದ ಸುಳ್ಳುಗಾರರಾಗಿ ಬದಲಾಗುತ್ತಾ, ಅಂತಿಮವಾಗಿ ವಂಚಿಸುವ ಆತ್ಮಗಳ ಪ್ರಭಾವಕ್ಕೆ ಒಳಗಾಗುತ್ತಾರೆ.

ಆ. ಬೋಧನೆಯು ಸತ್ಯವಾದದ್ದೋ ಅಥವಾ ಸುಳ್ಳಾದದ್ದೋ ಎಂದು ಹೇಗೆ ಪರೀಕ್ಷಿಸುವುದು?

ಮೊದಲ ಪರೀಕ್ಷೆಯು ದೈವಶಾಸ್ತ್ರೀಯವಾದದ್ದು

ಬೋಧನೆಯನ್ನು ದೇವರ ವಾಕ್ಯವು ಒಪ್ಪಿಕೊಳ್ಳುತ್ತದೋ? ಎಫೆಸದಲ್ಲಿ ಸುಳ್ಳುಬೋಧಕರು ಮದುವೆ ಮಾಡಿಕೊಳ್ಳುವುದನ್ನು ಮತ್ತು ಇಂತಿಂಥಹ ಆಹಾರಗಳನ್ನು ಸೇವಿಸುವುದನ್ನು ನಿಷೇಧಿಸಿದ್ದರು. ಇದಕ್ಕೆ ಪೌಲನ ಉತ್ತರವೇನೆಂದರೆ ದೇವರು ಇವುಗಳನ್ನೆಲ್ಲವನ್ನು ನಮಗಾಗಿ ಉಂಟುಮಾಡಿರುವುದರಿಂದ ನಾವು ಕೃತಜ್ಞತಾ ಹೃದಯದಿಂದ ಇವುಗಳನ್ನು ಸೇವಿಸಬೇಕೆಂದು ತಿಳಿಸುತ್ತಿದ್ದಾನೆ. ನಾವು ಸೃಷ್ಟಿಕರ್ತನಾದ ದೇವರ ಎಲ್ಲಾ ವರಗಳನ್ನು ಗುರುತಿಸಿ ಅವುಗಳನ್ನು ಪ್ರಶಂಶಿಸಿ ಅನುಭವಿಸತಕ್ಕದ್ದು. ಅವುಗಳನ್ನು ತಿರಸ್ಕರಿಸುವಂತಹದ್ದು ನಾವು ಸೃಷ್ಟಿಕರ್ತನಿಗೆ ಮಾಡುವ ಅಗೌರವವಾಗಿದೆ. ದಯವಿಟ್ಟು ಗಮನಿಸಿರಿ, ಕೆಲವು ಸಮಯಗಳಲ್ಲಿ ಮಾಡುವ ಉಪವಾಸವನ್ನು ಅಥವಾ ಬ್ರಹ್ಮಚರ್ಯೆಯ ಜೀವತದಲ್ಲಿ ಜೀವಿಸುವುದಕ್ಕಾಗಿ ಕರೆಯಲ್ಪಟ್ಟವರನ್ನು ನಿಷೇಧಿಸುವುದಿಲ್ಲ.

ಎರಡನೇಯ ಪರೀಕ್ಷೆಯು ನೈತಿಕವಾದದ್ದು

ತಿಮೊಥೆಯು ತನ್ನನ್ನು ತಾನೇ ದೈವಭಕ್ತಿಯಲ್ಲಿ ತರಬೇತಿಗೊಳಿಸಿಕೊಳ್ಳಬೇಕೆಂಬುದಾಗಿ ಪೌಲನು ತಿಳಿಸುತ್ತಿದ್ದಾನೆ. ಹೇಗೆ ಜನರು ದೈಹಿಕವಾಗಿ ಸದೃಢತೆಯಲ್ಲಿಯೂ ಮತ್ತು ಆರೋಗ್ಯದಲ್ಲಿಯೂ ಜೀವಿಸುವುದಕ್ಕಾಗಿ ದೈಹಿಕ ತರಬೇತಿಯ ಅಗತ್ಯತೆ ಇರುತ್ತದೋ ಹಾಗೆಯೇ ದೈವಿಕತ್ವದಲ್ಲಿ ತರಬೇತಿಗೊಳಿಸಿಕೊಳ್ಳುವಂತಹದ್ದು ದೇವಜನರನ್ನು ಆತ್ಮೀಕವಾಗಿ ಆರೋಗ್ಯವಂತರನ್ನಾಗಿಯೂ ಮತ್ತು

ಜಾಗರೂಕರನ್ನಾಗಿಯೂ ಇರುವಂತೆ ಮಾಡುತ್ತದೆ. ಈ ಒಂದು ವಾಕ್ಯಭಾಗದಲ್ಲಿ ಪೌಲನು ಹೇಗೆ ಆತ್ಮೀಕ ತರಬೇತಿಯನ್ನು ಮಾಡಬೇಕೆಂಬುದಾಗಿ ಯಾವ ಮಾಹಿತಿಯನ್ನು ನೀಡುತ್ತಿಲ್ಲ.

ಚರ್ಚಿಸಿರಿ

- ದೈವಿಕ ಸ್ವಭಾವದಲ್ಲಿ ನಮ್ಮನ್ನು ನಾವು ಹೇಗೆ ತರಬೇತಿಗೊಳಿಸಿಕೊಳ್ಳಬಹುದಾಗಿದೆ?

"ದೈವಿಕ ಸ್ವಭಾವದ ತರಬೇತಿಯ" ಕುರಿತ ಯಾವ ವಾಕ್ಯಗಳು ನಿಮಗೆ ತಿಳಿದಿರುತ್ತವೆ? ಪೌಲನು ತಿಮೊಥೆಗೆ ಎರಡು ಪರೀಕ್ಷೆಗಳನ್ನು ನೀಡುತ್ತಿದ್ದಾನೆ, ಇಂದು ಈ ಬೋಧನೆಗಳು ಪ್ರಶ್ನಾತೀತವಾಗಿ ಇನ್ನೂ ಅಳವಡಿಸಿಕೊಳ್ಳಲು ಸಾಧ್ಯವಿದೆಯೋ? ನೀವು ಕೇಳಿಸಿಕೊಳ್ಳುತ್ತಿರುವ ಬೋಧನೆಯು ದೇವರ ವಾಕ್ಯಕ್ಕೆ ಅನುಗುಣವಾಗಿದೆಯೋ? ಮತ್ತು ಈ ಬೋಧನೆಯು ನಮ್ಮನ್ನು ದೇವರ ಹತ್ತಿರಕ್ಕೆ ಅಧಿಕವಾಗಿ ನಡೆಸಿ ನಮ್ಮನ್ನು ಕ್ರಿಸ್ತನ ಹಾಗೆ ಮತ್ತು ನಮ್ಮಲ್ಲಿ ದೈವಿಕ ಸ್ವಭಾವಗಳನ್ನುಂಟು ಮಾಡುವಲ್ಲಿ ಸಹಕಾರಿಯಾಗಿದೆಯೋ?

ಇ. ಸತ್ಯಬೋಧನೆಯನ್ನು ಹೇಗೆ ಪ್ರೋತ್ಸಾಹಿಸುವುದು (4:11-5:2)

ಇವುಗಳು ಪೌಲನ ಅಂಶಗಳಾಗಿವೆ.

ಅ. ತಿಮೊಥೆಯು ಒಳ್ಳೆಯ ಮಾದರಿಯಾಗಿರಬೇಕು.

ಜನರು ಆತನ ಮಾದರಿಯನ್ನು ಮೆಚ್ಚಿದರೆ ಅವರು ಆತನನ್ನು ಯೌವನಸ್ಥನೆಂದು ಅಸಡ್ಡೆಮಾಡುವುದಿಲ್ಲ. ಪೇತ್ರನು ಸಹ ಸಭೆಯ ಹಿರಿಯರು ದೀನತೆಯಿಂದ ತಮಗೆ ನೇಮಿಸಿದ ಹಿಂಡಿನ ಸೇವೆಯನ್ನು ಮಾಡಬೇಕೆಂಬುದಾಗಿ ಬೋಧಿಸುತ್ತಿದ್ದಾನೆ. ಅವರು ಹಿಂಡಿಗೆ ಯಜಮಾನರಂತೆ ಇರದೆ ಮಾದರಿಯಾಗಿರಬೇಕೆಂದು ತಿಳಿಸುತ್ತಿದ್ದಾನೆ (1ಪೇತ್ರ 5:3)

ಆ. ತಿಮೊಥೆಯು ಪೌಲನಿಂದ ನೇಮಿಸಲ್ಪಟ್ಟಾಗ ತಾನು ಅಧಿಕಾರವನ್ನು ಹೊಂದಿದ್ದೇನೆಂದು ಅರಿಯಬೇಕು ಮತ್ತು ಆತನು ವಾಕ್ಯದಿಂದ ಇನ್ನೂ ಅಧಿಕವಾದ ಅಧಿಕಾರವನ್ನು ಹೊಂದಿದವನಾಗಿದ್ದನು.

ಎಜ್ರನು ಧರ್ಮಶಾಸ್ತ್ರವನ್ನು ಓದಿದಂತೆ (ನೆಹೆಮೀಯ 8:8-9) ಮತ್ತು ನಜರೇತಿನಲ್ಲಿ ಯೇಸು ಯೆಶಾಯ ಗ್ರಂಥದ ಸುರುಳಿಯನ್ನು ಓದಿದಂತೆ (ಲೂಕ 4:18-19) ಸಭಾಮಂದಿರದಲ್ಲಿ ನಾಯಕನು ಪರಿಶುದ್ಧ ದೇವರ ವಾಕ್ಯವನ್ನು ಓದಬೇಕು. ದೇವರ ವಾಕ್ಯವು ಸ್ವತಃ ಅಧಿಕಾರವನ್ನು ಹೊಂದಿದ್ದು ಈ ಅಧಿಕಾರವನ್ನು ಎಜ್ರ ಮತ್ತು ಯೇಸುವಿಗೆ ರವಾನಿಸಲಾಗಿದೆ.

ಇ. ತಿಮೊಥೆಯು ತನ್ನಲ್ಲಿರುವ ವರಗಳನ್ನು ಬಳಕೆಮಾಡಬೇಕು.

ತಿಮೊಥೆಯನ್ನು ಪ್ರಾರ್ಥಿಸಿ ನೇಮಿಸಿದಾಗ ಅವನು ದೇವರಿಂದ ವರಗಳನ್ನು ಹೊಂದಿದವನಾಗಿದ್ದನು. ಈ ವರಗಳನ್ನು ಅಲಕ್ಷ್ಯಮಾಡದೆ ಅವುಗಳನ್ನು ಉಪಯೋಗಿಸಬೇಕೆಂದು ತಿಮೊಥೆಗೆ ಪೌಲನು ಪ್ರೋತ್ಸಾಹಿಸುತ್ತಿದ್ದಾನೆ. ದೇವರು ವರಗಳನ್ನು ನೀಡುತ್ತಾನೆ ಆದರೆ ಅವುಗಳನ್ನು ಅಭಿವೃದ್ಧಿಪಡಿಸಿ ಉಪಯೋಗಿಸುವಂತಹದ್ದು ಸ್ವೀಕರಿಸಿದವನಿಗೆ ಬಿಟ್ಟದ್ದು.

ಈ. ತಿಮೊಥೆಯು ತನ್ನ ಪ್ರಗತಿಯನ್ನು ತೋರಿಸತಕ್ಕದ್ದು.

ಒಬ್ಬ ನಾಯಕನಾಗಿ ತಿಮೊಥೆಯು ಕಲಿಯುತ್ತಾ ಬೆಳೆಯತಕ್ಕದ್ದು ಮತ್ತು ಆತನ ಪ್ರಗತಿಯನ್ನು ಜನರು ನೋಡತಕ್ಕದ್ದು. ಕ್ರೈಸ್ತನಾಯಕರುಗಳು ಕ್ರಿಯಾತ್ಮಕ ಮತ್ತು ಪ್ರಗತಿಪರ ಮಾದರಿಯನ್ನು ತೋರಿಸತಕ್ಕದ್ದು. ಸ್ವತಃ ಪೌಲನೇ ತಾನು ಇನ್ನೂ ಪರಿಪೂರ್ಣತೆಯಲ್ಲಿ ಮುಟ್ಟಿಲ್ಲ ಆದರೆ ಇನ್ನೂ ನಾಯಕನಾಗಿ ಬೆಳೆಯುತ್ತಿದ್ದೇನೆಂದು ತಿಳಿಸುತ್ತಿದ್ದಾನೆ (ಫಿಲಿ. 3:12)

ಉ. ತಿಮೊಥೆಯು ತನ್ನ ಕುರಿತು ಗಮನವನ್ನು ಹರಿಸಬೇಕು

ಆತನು ತನ್ನ ಜೀವಿತವನ್ನು (ತನ್ನ ನಡತೆಯನ್ನು ಮತ್ತು ನಿರ್ವಹಿಸುವಿಕೆಯನ್ನು) ಮತ್ತು ಆತನ ಸಿದ್ಧಾಂತವನ್ನು (ಆತನು ಇತರರಿಗೆ ಬೋಧಿಸುವ ಬೋಧನೆ) ಎಚ್ಚರಿಕೆಯಿಂದ ನಿರ್ವಹಿಸಬೇಕು. ನಾಯಕನಾದವನು ತನ್ನ ಸ್ವಂತ ಜೀವಿತ ಮತ್ತು ನಂಬಿಕೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ

ಸಮಯವನ್ನು ಕಳೆಯತಕ್ಕದ್ದು ಮತ್ತು ತನ್ನ ಸೇವೆಗಾಗಿಯೇ ತನ್ನ ಎಲ್ಲಾ ಶಕ್ತಿಯನ್ನು ವ್ಯಯಮಾಡಕೂಡದು. ಅವರ ಜೀವಿತಗಳಲ್ಲಿ ಎಲ್ಲವೂ ಕ್ರಮವಾಗಿರತಕ್ಕದ್ದು.

೮೫. ತಿಮೊಥೆಯು ತನ್ನ ಸಂಬಂಧಗಳಿಗೆ ಹೆಚ್ಚು ಗಮನವನ್ನು ಹರಿಸತಕ್ಕದ್ದು

ಸಭೆಯ ನಾಯಕರುಗಳು ಎಲ್ಲಾ ಸಂತತಿಯ ಜನರುಗಳನ್ನು ಮತ್ತು ಸಮಾಜದಲ್ಲಿರುವ ಎಲ್ಲಾ ವರ್ಗಗಳ ಜನರನ್ನು ನಡೆಸುವವರಾಗಿರುತ್ತಾರೆ. ಹಾಗಾಗಿ ಅವರು ಜೊತೆ ಕೆಲಸ ಮಾಡುವ ಜನರೊಂದಿಗೆ ಸರಿಯಾದ ನಡವಳಿಕೆಯನ್ನು ಹೊಂದಿರತಕ್ಕದ್ದು. ಪೌಲನು ಕುಟುಂಬದಲ್ಲಿ ಎಲ್ಲರು ಪ್ರೀತಿಯಿಂದ ಕಟ್ಟಲ್ಪಟ್ಟಿರುತ್ತಾರೆಂಬ ಉದಾಹರಣೆಯನ್ನು ತಿಳಿಸುತ್ತಿದ್ದಾನೆ. ಹಿರಿಯರನ್ನು ಗೌರವದಿಂದ ಮತ್ತು ಮರ್ಯಾದೆಯಿಂದಲೂ ನಡೆಸಿಕೊಳ್ಳತಕ್ಕದ್ದು. ನಾಯಕನು ಜನರನ್ನು ಸಮಾನತೆಯಲ್ಲಿ ಕಾಣುವುದು ಪ್ರಾಮುಖ್ಯವಾಗಿರುತ್ತದೆ ಮತ್ತು ವಿರುದ್ಧ ಲಿಂಗಗಳೊಂದಿಗೆ ಪರಿಶುದ್ಧತೆಯಿಂದಲೂ ಮತ್ತು ಸ್ವಯಂ ನಿಯಂತ್ರಣಗಳಿಂದಲೂ ವರ್ತಿಸತಕ್ಕದ್ದು.

ಗುಂಪು ಚರ್ಚೆ

- ಅನೇಕ ಯೌವನಸ್ಥ ನಾಯಕರುಗಳು ತಮ್ಮ ಹಿರಿಯ ನಾಯಕರುಗಳು ತಮ್ಮನ್ನು ಕೀಳಾಗಿ ನೋಡುತ್ತಾರೆ ಮತ್ತು ಪ್ರೋತ್ಸಾಯಿಸುವುದಿಲ್ಲ, ಅವರ ಯೌವನದ ತಪ್ಪುಗಳನ್ನು ಎತ್ತಿಹಿಡಿಯುತ್ತಾರೆಂಬ ದೂರನ್ನು ಹೇಳುತ್ತಾರೆ. ಈ ಒಂದು ಕ್ಷೇತ್ರದಲ್ಲಿ ನಿಮಗೆ ಯಾವ ಅನುಭವವಿದೆ?
- ಮೇಲಿರುವ ಎಲ್ಲಾ ಅಂಶಗಳನ್ನು ಚರ್ಚಿಸಿರಿ. ಈ ಅಂಶಗಳನ್ನು ನೀವು ಅಧ್ಯೈಸಿಕೊಂಡಿರೋ? ನೀವು ಒಬ್ಬ ನಾಯಕನಾಗಿ ಈ ಅಂಶಗಳ ಆಧಾರಿತವಾಗಿ ಹೇಗೆ ಜೀವಿಸುತ್ತೀರಿ?

ಪ್ರಾರ್ಥಿಸಿರಿ

ಇಂದಿನ ನಾಯಕರುಗಳ ಶುದ್ಧತೆಗಾಗಿ ಮತ್ತು ವಿವೇಚನೆಗಾಗಿ ಸ್ವಲ್ಪ ಸಮಯವನ್ನು ತೆಗೆದುಕೊಂಡು ಪ್ರಾರ್ಥಿಸಿರಿ. ಹಾಗೇ ನಾಯಕರುಗಳಾಗಿ ನಿಮ್ಮ ಸ್ವಂತ ಕರೆಯುವಿಕೆಗಾಗಿಯೂ ಪ್ರಾರ್ಥಿಸಿರಿ.

5. ಸಭೆಯ ಸಾಮಾಜಿಕ ಜವಬ್ದಾರಿಗಳು (5:3-6:2)

ಈ ಒಂದು ವಾಕ್ಯ ಭಾಗವು ಸಭೆಯಲ್ಲಿ ವಿಶೇಷ ಕಾಳಜಿಯನ್ನು ವಹಿಸುವ ಮೂರು ಗುಂಪುಗಳನ್ನು ಉಲ್ಲೇಖಿಸುತ್ತದೆ: ವಿಧವೆಯರು, ಹಿರಿಯರು ಅಥವಾ ಸೇವಕರು ಮತ್ತು ಗುಲಾಮರು.

ಅ. ವಿಧವೆಯರು

ಸತ್ಯವೇದವು ಇತರೆ ಸಂಸ್ಕೃತಿಯವರು ಮಾಡುವುದಕ್ಕಿಂತ ಅತ್ಯಧಿಕವಾಗಿ ವಿಧವೆಯರ ಕುರಿತು ಮಾತನಾಡುತ್ತದೆ. ಮತ್ತು ಅವರ ಕುರಿತು ಕಾಳಜಿಯನ್ನು ಸಹ ವಹಿಸುತ್ತದೆ. ದೇವರನ್ನು ತಂದೆಯಿಲ್ಲದವರಿಗೆ ತಂದೆಯು ಮತ್ತು ವಿಧವೆಯರ ರಕ್ಷಕನೆಂದು ವರ್ಣಿಸಲಾಗಿದೆ (ಧರ್ಮೋ. 10:18, ಕೀರ್ತನೆ. 146:9). ಸ್ವತಃ ಯೇಸು ಕ್ರಿಸ್ತನು ವಿಧವೆಯರ ಕುರಿತು ಕಾಳಜಿಯನ್ನು ವಹಿಸುವಾತನಾಗಿದ್ದನು (ಲೂಕ. 7:11-12; ಲೂಕ. 18:1-7; ಮಾರ್ಕ. 12:41-42; ಮಾರ್ಕ. 12:38). ಆದಿಸಭೆಯು ಸಹ ಯೇಸು ಕ್ರಿಸ್ತನ ಮಾದರಿಯನ್ನು ಹಿಂಬಾಲಿಸಿ ವಿಧವೆಯರ ಕಾಳಜಿಯನ್ನು ವಹಿಸಿತು. ವಿಧವೆಯರ ಕಾಳಜಿ ವಹಿಸಲು ಸಭೆಯಲ್ಲಿ ಕೆಲವು ಜನರನ್ನು ನೇಮಕ ಮಾಡಲಾಗಿತ್ತು (ಅಪೊ.ಕೃತ್ಯ. 6:1-6).



ವಿಧವೆಯರನ್ನು ಗೌರವಿಸಬೇಕು ಮತ್ತು ಕಾಳಜಿ ವಹಿಸಬೇಕು. ಈ ವಾಕ್ಯಭಾಗದಲ್ಲಿ ಪೌಲನು ಪುನಃ ಪುನಃ ತಿಳಿಸುತ್ತಿರುವುದೇನೆಂದರೆ, ವಿಧವೆಯ ಕುಟುಂಬದವರು ತಕ್ಷಣವೇ ಆಕೆಯ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕೆಂದು. ಈ ಜವಾಬ್ದಾರಿಗೆ ಪೌಲನು ಕೆಲವು ಕಾರಣಗಳನ್ನು ಕೊಡುತ್ತಿದ್ದಾನೆ: ಹೆತ್ತವರ ಋಣವನ್ನು ತೀರಿಸುವುದು (ವ. 4), ದೇವರನ್ನು ಮೆಚ್ಚಿಸುವುದಕ್ಕಾಗಿ (ವ. 4), ನಂಬಿಕೆಯನ್ನು ಅಲ್ಲಗಳೆಯದೆ ಅದನ್ನು ವ್ಯಕ್ತಪಡಿಸುವುದಾಗಿದೆ (ವ. 8) ಮತ್ತು ಸಭೆಗೆ ಹೊರೆಯಾಗದಂತೆ ನೋಡಿಕೊಳ್ಳುವುದಕ್ಕಾಗಿ (ವ. 16). ಆದರೆ ಕುಟುಂಬದವರ ಆಶ್ರಯವಿಲ್ಲದ ವಿಧವೆಯರನ್ನು ಸಭೆ ಪೋಷಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಪ್ರಾಯದ ವಿಧವೆಯರು ಒಂಟಿಗರಾಗಿ ಜವಾಬ್ದಾರಿಯಿಂದ ಜೀವಿಸಲಿಕ್ಕೆ ಕಠಿಣತನವನ್ನು ಎದುರಿಸುತ್ತಿದ್ದರೆ ಅವರು ಮರುಮದುವೆಯನ್ನು ಮಾಡಿಕೊಳ್ಳುವುದು ಸೂಕ್ತವಾಗಿದೆ.

ಆ. ಹಿರಿಯರು/ಸೇವಕರು

ಮೆಚ್ಚುಗೆ, ಶಿಸ್ತು ಮತ್ತು ನೇಮಕಾತಿಯಲ್ಲಿ ತಿಮೊಥೆಯು ಸೇವಕರನ್ನು ಹೇಗೆ ನಡೆಸಿಕೊಳ್ಳಬೇಕೆಂಬುದರ ಕುರಿತು ಪೌಲನು ಸೂಚನೆಯನ್ನು ನೀಡುತ್ತಿದ್ದಾನೆ. ಈ ವಿಷಯಗಳಲ್ಲಿ ಮಾರ್ಗದರ್ಶಿಸಲು ನಾವು ಐದು ನಿಯಮಗಳನ್ನು ಕಾಣುತ್ತೇವೆ:

ಅ. ಮೆಚ್ಚುಗೆ (5:17-18): ನಾಯಕರು ಎರಡು ವಿಧಗಳಲ್ಲಿ ಉತ್ತೇಜಿಸಲ್ಪಡುವರು. ಅವರಿಗೆ ಗೌರವವನ್ನು ನೀಡುವುದು ಮತ್ತು ನ್ಯಾಯಯುತವಾಗಿ ಪಾವತಿಸುವುದು. ಬೋಧಕರು ಹಣಕಾಸಿನ ನೆರವನ್ನು ಪಡೆಯುವ ಹಕ್ಕನ್ನು ಪ್ರತಿಪಾದಿಸುವ ವೇಳೆಯಲ್ಲಿ ಪೌಲನು ತನ್ನ ಸ್ವಂತ ಖರ್ಚಿಗಾಗಿ ಗುಡಾರ ಕೆಲಸವನ್ನು ಮಾಡಿದನು.

ಆ. ಪರವಹಿಸದೆ ನ್ಯಾಯವಾಗಿ ಬುದ್ಧಿಹೇಳುವುದು (5:19-20): ತಪ್ಪನ್ನು ಮಾಡಿದ ನಾಯಕನನ್ನು ಸರಿಯಾದ ರೀತಿಯಲ್ಲಿ ಬುದ್ಧಿಹೇಳುವುದು ಅವಶ್ಯ. ಅವರನ್ನು ಬಹಿರಂಗವಾಗಿ ಖಂಡಿಸುವುದಾಗಲಿ ಅಥವಾ ನಿಂದಿಸುವುದಾಗಲಿ ಮಾಡುವುದು ಒಳ್ಳೆಯದಲ್ಲ. ಅವರ ತಪ್ಪುಗಳು ಇಬ್ಬರು ಅಥವಾ ಮೂರು ಸಾಕ್ಷಿಗಳಿಂದ ಸಾಬೀತಾದರೆ ಮಾತ್ರ ಅವರ ವಿರುದ್ಧವಾಗಿ ಸಭೆಯು ಕ್ರಮಕೈಗೊಳ್ಳತಕ್ಕದ್ದು.

ನಮ್ಮ ಇತರೆ ಪ್ರಯತ್ನಗಳು ವೈಯಕ್ತಿಕವಾಗಿ ಆಗಲಿ ಅಥವಾ ಸಾರ್ವಜನಿಕವಾಗಿ ಆಗಲಿ ಸರಿಯಾದ ಕ್ರಮ ಕೈಗೊಳ್ಳವಂತಹದ್ದು ಅವಶ್ಯಕವಾಗಿರುತ್ತದೆ.

ಇ. ನಿಷ್ಪಕ್ಷಪಾತ: ತಿಮೊಥೆಯು ಪೌಲನ ಸಲಹೆಗಳನ್ನು ಪಾಲಿಸಿ ಹಿರಿಯರನ್ನು ಪಕ್ಷಪಾತವಿಲ್ಲದೆ ನ್ಯಾಯಯುತವಾಗಿ ನಡೆಸಿಕೊಳ್ಳಬೇಕು. ಸಭೆಯಲ್ಲಿ ಪಕ್ಷಪಾತಕ್ಕೆ ಅವಕಾಶ ಇರಬಾರದು. ಪೌಲನು ತನ್ನ ಅಂಶವನ್ನು ದೃಢಪಡಿಸುವುದಕ್ಕಾಗಿ ದೇವರು, ಯೇಸು ಕ್ರಿಸ್ತನು ಮತ್ತು ಆಯ್ಕೆಯಾದ ದೇವದೂತರು ಸಾಕ್ಷಿಗಳಾಗಿದ್ದರೆಂದು ತಿಳಿಸುತ್ತಿದ್ದಾನೆ. ಹಾಗಾಗಿ ಬಹಳ ಪ್ರಾಮುಖ್ಯವಾದದ್ದು!

ಈ. ಎಚ್ಚರಿಸು (5:21-22): ತಿಮೊಥೆಯು ಸೇವೆಗಾಗಿ ತಾನು ಯಾರನ್ನು ಹಸ್ತಾರ್ಪಣೆ ಮಾಡಿ ನೇಮಿಸುತ್ತಾನೋ ಅವರ ವಿಷಯದಲ್ಲಿ ಜಾಗೃತನಾಗಿರತಕ್ಕದ್ದು. ಒಂದು ವೇಳೆ ಆತನು ಅಜಾಗೃತನಾಗಿ ಈ ಕಾರ್ಯವನ್ನು ಮಾಡುವುದಾದರೆ ಸೇವೆಯಲ್ಲಿ ಇದು ನಕರಾತ್ಮಕವಾದ ಪರಿಣಾಮವನ್ನುಂಟು ಮಾಡುತ್ತದೆ.

ಉ. ಸೂಕ್ಷ್ಮವಾಗಿ ಗ್ರಹಿಸುವುದು (5:24-25): ಮೊದಲ ಹೊರಗಿನ ನೋಟದ ಕಾರ್ಯಗಳು ಒಬ್ಬ ವ್ಯಕ್ತಿ ಸೇವೆಗೆ ಸರಿಯಾದವನೋ ಎಂಬ ಸ್ಪಷ್ಟವಾದ ಚಿತ್ರಣವು ನಮಗೆ ನೀಡುವುದಿಲ್ಲ. ಹಾಗಾಗಿ ತಿಮೊಥೆಯು ಜನರನ್ನು ಸೇವೆಯಲ್ಲಿ ನೇಮಕಮಾಡುವುದಕ್ಕಿಂತ ಮುಂಚೆ ಅವರೊಂದಿಗೆ ಹೆಚ್ಚಿನ ಸಮಯವನ್ನು ಎಡಬಿಡದೆ ಕಳೆಯುವುದು ಅವಶ್ಯವಾಗಿರುತ್ತದೆ.

ಇ. ದಾಸರು

ದಾಸತ್ವವು ಅಂದು ಮತ್ತು ಇಂದು ಒಂದು ಕ್ರೂರ ಮತ್ತು ಅನ್ಯಾಯದ ಅಭ್ಯಾಸವಾಗಿದೆ. ಇದೆಲ್ಲದರ ಮಧ್ಯದಲ್ಲಿ ಯಜಮಾನರು ವಿಶ್ವಾಸಿಗಳಾಗಿದ್ದರೂ ಅಥವಾ ಆಗದೆ ಇದ್ದರೂ ಗುಲಾಮರು (ದಾಸರು) ಅವರ ಯಜಮಾನರಿಗೆ ಗೌರವವನ್ನು ಸಲ್ಲಿಸಿ ಅವರಿಗೆ ಅಧೀನರಾಗಿರಬೇಕೆಂದು ಪೌಲನು ಸಲಹೆಯನ್ನು ನೀಡುತ್ತಿದ್ದಾನೆ. ಇದನ್ನು ಮಾಡುವುದರಿಂದ ಅವರು ದೇವರ ನಾಮಕ್ಕೂ ಮತ್ತು ಅಪೊಸ್ತಲರ ಬೋಧನೆಗೂ ಮನ್ನಣೆಯನ್ನು ತರುವವರಾಗಿರುತ್ತಾರೆ.

ಚರ್ಚಿಸಿರಿ

- ಭಾರತೀಯ ಸಂಸ್ಕೃತಿಯಲ್ಲಿ ಒಬ್ಬ ವಿಧವೆಯನ್ನು ಹೇಗೆ ಗೌರವಿಸಲಾಗುವುದು ಮತ್ತು ಪರಿಗಣಿಸಲಾಗುವುದು? ಅಪರಿಚಿತರಿಗೂ ಮತ್ತು ತಂದೆಯಿಲ್ಲದವರಿಗೂ ಹಾಗೂ ವಿಧವೆಯರಿಗೆ ಸಭೆಯು ಹೆಚ್ಚಿನದ್ದನ್ನು ಏನಾದರೂ ಮಾಡಲು ಸಾಧ್ಯವಿದೆಯೋ?
- ಪಾವತಿಸುವ ಸಭಾಪಾಲಕರ ಕುರಿತು ನೀವು ಏನನ್ನು ಆಲೋಚಿಸುವಿರಿ? 'ಗುಡಾರವನ್ನು ಮಾಡುವ ಕಾರ್ಯ' ನೀವು ಒಂದು ಆಯ್ಕೆಯನ್ನಾಗಿ ಕಾಣುವಿರೋ?
- ಹಸ್ತಾರ್ಪಣೆಯನ್ನು ಮಾಡುವುದು ಎಂಬುದಾಗಿ ಉಲ್ಲೇಖಿಸುವಾಗ ಪೌಲನು ಏನನ್ನು ಉಲ್ಲೇಖಿಸುತ್ತಿದ್ದಾನೆ? ಈ ಒಂದು ಕಾರ್ಯದಲ್ಲಿ ಜಾಗರೂಕರಾಗಿರುವುದು ಏಕೆ ಪ್ರಾಮುಖ್ಯವಾಗಿದೆ?

6. ಸರಿ ಮತ್ತು ತಪ್ಪು (6:3-21)

ಪೌಲನು ಅಧ್ಯಾಯ 6 ರಲ್ಲಿ ದೇವರ ಸೇವಕರು ಮತ್ತು ಬಡ ಮತ್ತು ಶ್ರೀಮಂತ ಕ್ರೈಸ್ತವಿಶ್ವಾಸಿಗಳು ಮತ್ತು ಸುಳ್ಳುಬೋಧಕರ ವಿಷಗಳ ಕುರಿತಾಗಿ ಸರಿ ಮತ್ತು ತಪ್ಪುಗಳ ಕುರಿತು ತಿಮೊಥೆಗೆ ಮಾರ್ಗದರ್ಶಿಸುತ್ತಿದ್ದಾನೆ.

ಅ. ಸುಳ್ಳುಬೋಧಕರು (6:3-5)

ಸುಳ್ಳುಬೋಧಕರು ನಂಬಿಕೆಯಿಂದ ವಿಮುಖರಾಗುತ್ತಿದ್ದಾರೆ

ಪೌಲನು ಅಪೊಸ್ತಲರ ಬೋಧನೆ ಮತ್ತು ಸಿದ್ಧಾಂತಗಳನ್ನು ಈ ರೀತಿಯಾಗಿ ವಿವರಿಸುತ್ತಿದ್ದಾನೆ: ಇದು ಉತ್ತಮವಾದ ಸೂಚನೆಗಳನ್ನು ನೀಡುತ್ತದೆ (ವ. 3). ಇದು ಸತ್ಯವನ್ನು ಒಳಗೊಂಡಿದೆ (ವ. 5). ಇದು ನಿಮ್ಮನ್ನು ನಿಜವಾದ ನಂಬಿಕೆಯಲ್ಲಿ ಕಾಪಾಡುತ್ತದೆ (ವ. 10, 12, 21). ಇದು ಪೌಲನು ಆಜ್ಞಾಪಿಸುತ್ತಿರುವುದಾಗಿದೆ (ವ. 14). ಸುಳ್ಳುಬೋಧಕರಿಂದ ಉಂಟಾದ ಗೊಂದಲದ ಕಾರ್ಯಗಳಿಗೆ ಅಪೊಸ್ತಲರ ಬೋಧನೆಯು ಗುಣಮಟ್ಟದ ಮಾಪನವಾಗಿದೆ. ಸುಳ್ಳುಬೋಧಕರು ದೈವಿಕವಾದ ಬೋಧನೆಗಳಿಂದ ದೂರ ಸರಿದಿದ್ದಾರೆ. ಆದ್ದದರಿಂದ ಅವರು ಅಹಂಕಾರಿಗಳಾಗಿದ್ದಾರೆ ಮತ್ತು ಏನನ್ನು ಅರ್ಥಮಾಡಿಕೊಳ್ಳದವರಾಗಿದ್ದಾರೆ.

ಸುಳ್ಳುಬೋಧಕರು ಸಭೆಯನ್ನು ವಿಭಜಿಸುವವರಾಗಿದ್ದಾರೆ

ಸುಳ್ಳುಬೋಧಕರು ಜನರ ಮನಸ್ಸುಗಳನ್ನು ಗೊಂದಲಗೊಳಿಸುತ್ತಾರೆ. ಪರಿಣಾಮವಾಗಿ ಸಭೆಯಲ್ಲಿ ಸಂಬಂಧಗಳು ಗೊಂದಲಕ್ಕೆ ಒಳಗಾಗುತ್ತವೆ.

ಸುಳ್ಳುಬೋಧಕರು ಹಣವನ್ನು ಪ್ರೀತಿಸುವವರಾಗಿರುತ್ತಾರೆ

ಸುಳ್ಳುಬೋಧಕರು ಸಭೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಮತ್ತು ಹಣದ ಲಾಭಕ್ಕಾಗಿ ತಮ್ಮಲ್ಲಿ ದೈವಿಕ ಸ್ವಭಾವವನ್ನು ರೂಡಿಸಿಕೊಳ್ಳುತ್ತಾರೆ.

ಆ. ಬಡ ಕ್ರೈಸ್ತ ವಿಶ್ವಾಸಿಗಳು (6: 6-10)

ಪೌಲನು ಎರಡು ವಿಧವಾದ ಬಡ ಕ್ರೈಸ್ತರನ್ನು ವಿವರಿಸುತ್ತಾನೆ:

ಸಂತೃಪ್ತರಾದ ಬಡವರು (6:7-8)

ಪೌಲನು ವಿವರಿಸುವ ಜನರು ಬದುಕುಳಿಯಲು ಮೂಲಭೂತ ಅವಶ್ಯಕತೆಗಳ ಕೊರತೆಯಿರುವ ನಿರ್ಗತಿಕರಲ್ಲ. ಬಡತನದಿಂದ ಯಾರೂ ತೃಪ್ತರಾಗಲು ಸಾಧ್ಯವಿಲ್ಲ. ಆದರೆ ಪೌಲನು ಹೇಳುವಂತೆ ಊಟ ಮತ್ತು ಬಟ್ಟೆಯನ್ನು ಯಾರು ಹೊಂದಿರುತ್ತಾರೋ ಅದು ಅವರ ಮೂಲಭೂತ ಅವಶ್ಯಕತೆಗೆ ಅಷ್ಟು ಸಾಕಾಗಿರುತ್ತದೆ. ಆದ್ದದರಿಂದ ಅದರಲ್ಲೇ ತೃಪ್ತರಾಗಿ ಜೀವಿಸುವುದು ಅವಶ್ಯವಾಗಿರುತ್ತದೆ. ಆತನ ವಾದವು ಯೋಬನು ಹೇಳಿದಂತೆ "ನಾವು ಬೆತ್ತಲೆಯಾಗಿ ಬಂದೆವು ಬೆತ್ತಲೆಯಾಗಿ ಹೋಗುವೆವು" ಎಂಬುದಾಗಿರುತ್ತದೆ (ಯೋಬ. 1:21). ದೇವರು ಒಳ್ಳೆಯ ಸೃಷ್ಟಿಕರ್ತನಾಗಿದ್ದಾನೆಂದು ಮತ್ತು ಆತನ ವರಗಳನ್ನು ನಾವು ಕೃತಜ್ಞತಾ ಮನೋಭಾವದಿಂದ ಸ್ವೀಕರಿಸಬೇಕೆಂದು ಪೌಲನು ವಿವರಿಸುತ್ತಿದ್ದಾನೆ (4:3-5). ಇನ್ನೂ ಆತನು ಹೇಳುವುದೇನೆಂದರೆ ದೇವರು ನಮ್ಮ ಸಂತೋಷಕ್ಕಾಗಿ ಎಲ್ಲವನ್ನೂ ಸಮೃದ್ಧಿಯಾಗಿ ಒದಗಿಸುತ್ತಾನೆ (6:17). ಹಾಗಾಗಿ ಪೌಲನು ಸನ್ಯಾಸತ್ವವನ್ನು ಪ್ರತಿಪಾದಿಸುತ್ತಿಲ್ಲ ಆದರೆ ಭೌತಿಕ ಮತ್ತು ದುರಾಸೆಯ ಬದಲಿಗೆ ತೃಪ್ತಿಯ ಜೀವಿತವನ್ನು ಪ್ರತಿಪಾದಿಸುತ್ತಿದ್ದಾನೆ.

ದುರಾಸೆಯ ಬಡವರು (6:9-10)

ಇವರು ಭೌತಿಕವಾಗಿ ದುರಾಸೆಯುಳ್ಳವರು ಮತ್ತು ಶ್ರೀಮಂತರಾಗಲು ಬಯಸುವ ಬಡಜನರಾಗಿದ್ದಾರೆ. ಇವರು ಹಣವನ್ನು ಪ್ರೀತಿಸುತ್ತಾರೆ. ಈ ರೀತಿಯಾದ ಬಯಕೆಗಳು ಜನರು ತಮ್ಮ ಜೀವಿತಗಳಲ್ಲಿ ದೇವರಿಗಿಂತ ಹಣವನ್ನು ಅತ್ಯುನ್ನತ ಸ್ಥಾನದಲ್ಲಿ ಇರಿಸುವಂತ ಶೋಧನೆಗಳಿಗೆ ಮಾರ್ಗವಾಗುತ್ತದೆ ಎಂದು ಪೌಲನು ತಿಳಿಸುತ್ತಿದ್ದಾನೆ. ವಸ್ತುವಿಗಾಗಿ ಮತ್ತು ಹಣಕ್ಕಾಗಿ ಅವರ ಹಂಬಲವು ಕ್ರಮೇಣವಾಗಿ ಹೆಚ್ಚಾಗುತ್ತಾ ಕೊನೆಯಲ್ಲಿ ಅವರ ನಾಶನಕ್ಕೆ ಕಾರಣವಾಗುತ್ತದೆ. ಯೇಸು ಕೇಳಿದ ಹಾಗೆ, *"ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?* (ಮಾರ್ಕ 8:36).

ಮೊದಲನೇಯದಾಗಿ, ಪೌಲನು ಉಲ್ಲೇಖಿಸುತ್ತಿರುವ ಬಡತನವು ದೇವರ ಚಿತ್ತಕ್ಕೆ ವಿರುದ್ಧವಾದದ್ದು ಮತ್ತು ಮನುಷ್ಯ ಕುಲದ ವಿನಾಶನದ ಸಂಗತಿ ಅಲ್ಲ. ಪೌಲನು ತಿಳಿಸುತ್ತಿರುವುದೇನೆಂದರೆ ಸರಳತೆಯ ಮತ್ತು ತೃಪ್ತಿಕರವಾದ ಜೀವಿತವನ್ನು ತಿಳಿಸುತ್ತಿದ್ದಾನೆ. ಎರಡನೇಯದಾಗಿ, ಬಡತನ ಮತ್ತು ಅನ್ಯಾಯದ ವಿರುದ್ಧ ನಿಲ್ಲಲು ನಮ್ಮ ಸಂತೃಪ್ತಿಯ ಜೀವಿತ ಅಡ್ಡಿಯಾಗಬಾರದು.

ಇ. ದೇವರ ಸೇವಕರು (6:11-16)

ಈ ವಾಕ್ಯಭಾಗದಲ್ಲಿ ಪೌಲನು ತಿಮೊಥೆಯನಿಗೆ ಒಬ್ಬ ದೇವರ ಸೇವಕನಿಗೂ ಮತ್ತು ಸುಳ್ಳುಬೋಧಕರ ಮಧ್ಯದಲ್ಲಿರುವ ವ್ಯತ್ಯಾಸವನ್ನು ತಿಳಿಸುತ್ತಿದ್ದಾನೆ. ತಿಮೊಥೆಯು ಮತ್ತು ಇತರೆ ಕ್ರೈಸ್ತ ನಾಯಕರುಗಳು ಭಕ್ತಿಹೀನತೆಯ ವಿರುದ್ಧ ನಿಂತುಕೊಳ್ಳುವುದು ಅಗತ್ಯವಾಗಿರುತ್ತದೆ.

ಚರ್ಚಿಸಿರಿ

1 ತಿಮೊಥೆ 6:11-16 ಅನ್ನು ಓದಿರಿ ಮತ್ತು ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

1. ನೀತಿಯ ವಿಷಯಕ್ಕೆ ಬಂದಾಗ ದೇವರ ಸೇವಕನು ಯಾವುದರಿಂದ ಓಡಿಹೋಗಬೇಕು?
2. ನೀತಿಯ ವಿಷಯಕ್ಕೆ ಬಂದಾಗ ದೇವರ ಸೇವಕನು ಯಾವುದಕ್ಕೆ ಶ್ರಮವಹಿಸಬೇಕು?
3. ಸೈದ್ಧಾಂತಿಕ ವಿಷಯಕ್ಕೆ ಬಂದಾಗ ದೇವರ ಸೇವಕನು ಯಾವುದರಿಂದ ಓಡಿಹೋಗಬೇಕು?
4. ಸೈದ್ಧಾಂತಿಕವಾಗಿ ದೇವರ ಸೇವಕನು ಯಾವುದಕ್ಕೆ ಶ್ರಮವಹಿಸಬೇಕು?
5. ದೇವರ ಸೇವಕನು ಯಾಕೆ ಈ ಸಂಗತಿಗಳನ್ನು ಮಾಡಬೇಕು?

ಪೌಲನು ದೇವರನ್ನು ವರ್ಣಿಸುತ್ತಾನೆ ಮತ್ತು ಆತನ ವಿವರಣೆಯನ್ನು ನಾವು ನಾಲ್ಕು ಶಕ್ತಿಯುತ ಪದಗಳಿಂದ ಸಂಕ್ಷಿಪ್ತಗೊಳಿಸಬಹುದು: ದೇವರು ಸೋಲರಿಯದವನು (ಆತನೊಬ್ಬನೇ ಆಳುವವನು, ರಾಜಾಧಿರಾಜನು ಮತ್ತು ಕರ್ತನು). ದೇವರು ಅಮರನು. ದೇವರು ತಲುಪಲಾಗದವನು (ಆತನು ಎಟುಕದ ಬೆಳಕಿನಲ್ಲಿ ವಾಸಿಸುವವನಾಗಿದ್ದಾನೆ). ದೇವರು ಅದೃಶ್ಯನಾಗಿದ್ದಾನೆ (ಯಾರೂ ಅವನನ್ನು ನೋಡುವುದಿಲ್ಲ).

- ಈ ಪದಗಳನ್ನು ನೀನು ಹೇಗೆ ಅರ್ಥೈಸಿಕೊಳ್ಳುತ್ತೀ? ಮತ್ತು ದೇವರು ಈ ರೀತಿಯಾದ ಗುಣಲಕ್ಷಣಗಳನ್ನು ಹೊಂದಿದ್ದಾನೆ ಎಂದು ಹೇಳುವುದರ ಅರ್ಥವೇನು?

ಈ. ಶ್ರೀಮಂತ ಕ್ರೈಸ್ತವಿಶ್ವಾಸಿಗಳು (6:17-19)

ಪೌಲನು ಈಗಾಗಲೇ ಬಡವರಾಗಿರುವ ವಿಶ್ವಾಸಿಗಳನ್ನು ಉದ್ದೇಶಿಸಿ ಮಾತನಾಡಿದ್ದಾನೆ. ಈಗ ಆತನು ಈ ಜಗತ್ತಿನಲ್ಲಿರುವ ಶ್ರೀಮಂತರ ಕಡೆಗೆ ತಿರುಗುತ್ತಿದ್ದಾನೆ. ಶ್ರೀಮಂತರು ಎದುರಿಸುವ ಎರಡು ಅಪಾಯದ ಸಂಗತಿಗಳೆಂದರೆ ಅವರು ಹೆಮ್ಮೆ ಪಡುವವರಾಗಿರುತ್ತಾರೆ ಮತ್ತು ಅವರು ತಪ್ಪಾದ ಭದ್ರತೆಯ ಭಾವನೆಯಲ್ಲಿ ಜೀವಿಸುವವರಾಗಿರುತ್ತಾರೆ. ಹಣವು ಜನರನ್ನು ಪ್ರಾಮುಖ್ಯವಾದದ್ದೆಂದು ಭಾವಿಸುವಂತೆ ಮಾಡುವುದಲ್ಲದೆ ಮತ್ತು ತಮ್ಮಲ್ಲಿರುವ ಆಸ್ತಿ ಮತ್ತು ಹಣಕ್ಕಾಗಿ ಅವರು ಕೊಚ್ಚಿಕೊಳ್ಳುವಂತೆ ಮಾಡುತ್ತದೆ. ಹಣವು ತಪ್ಪಾದ ಭದ್ರತೆಯ ಮನೋಭಾವವನ್ನುಂಟುಮಾಡುತ್ತದೆ, ಹಾಗಾಗಿ ಶ್ರೀಮಂತ ವ್ಯಕ್ತಿಯು ಉಡುಗೊರೆಯನ್ನು

ಕೊಡುವವನಿಗಿಂತ ಉಡುಗೊರೆಯನ್ನು (ಹಣ ಮತ್ತು ವಸ್ತುಗಳು) ಹೆಚ್ಚು ನಂಬುವವನಾಗಿರುತ್ತಾನೆ. ಶ್ರೀಮಂತ ವಿಶ್ವಾಸಿಗಳು ಎದುರಿಸುವ ಈ ಎರಡು ಅಪಾಯಗಳು ದೇವರೊಂದಿಗಿರುವ ಅವರ ಸಂಬಂಧ ಮತ್ತು ಇತರೆ ವಿಶ್ವಾಸಿಯೊಂದಿಗೆ ಇರುವ ಅವರ ಪ್ರಮುಖ ಸಂಬಂಧಗಳನ್ನು ಹಾಳು ಮಾಡಬಹುದು.

ಶ್ರೀಮಂತ ವಿಶ್ವಾಸಿಗಳು ತಮ್ಮ ಜವಬ್ದಾರಿಗಳಿಗೆ ತಕ್ಕಂತೆ ಜೀವಿಸಬೇಕು ಮತ್ತು ಒಳ್ಳೆಯದನ್ನು ಮಾಡುವ ತಮ್ಮ ಕರ್ತವ್ಯಗಳನ್ನು ತಿಳಿದಿರಬೇಕು. ಶ್ರೀಮಂತರಾಗಿರುವುದು ತಪ್ಪು ಎಂಬುದಾಗಿ ಪೌಲನು ಹೇಳುತ್ತಿಲ್ಲ. ಆದರೆ ಶ್ರೀಮಂತ ಜನರು ಜನಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಆತನು ಬಯಸುತ್ತಿದ್ದಾನೆ. ಅವರು ಹಣವಿದೆ ಎಂಬುದಾಗಿ ಸೋಮಾರಿಗಳಾಗಿರಬಾರದು ಆದರೆ ಒಳ್ಳೆಯ ಕಾರ್ಯಗಳಲ್ಲಿ ಶ್ರೀಮಂತರಾಗಿರಬೇಕು. ಅವರು ದೇವರ ಐಶ್ವರ್ಯದಲ್ಲಿ ಅರವಂತೆಯೇ ಇರಬೇಕು. ಒಳ್ಳೆಯದನ್ನು ಮಾಡುವವರು, ಕೊಡುವುದರಲ್ಲಿ ಮನಸ್ಸುಳ್ಳವರು ಮತ್ತು ಉದಾರಿಗಳಾಗಿರಬೇಕು. ಅವರು ಇತರರಿಗೆ ಒಳ್ಳೆಯದನ್ನು ಮಾಡುವುದರ ಮೂಲಕವಾಗಿ "ಆತ್ಮೀಕ ಶ್ರೀಮಂತಿಕೆ" ಯ ಮೇಲೆ ತಮ್ಮ ಗಮನವನ್ನು ಕೇಂದ್ರಿಕರಿಸಿರುವವರಾಗಿರಬೇಕು.

ಆದ್ದದರಿಂದ ಪೌಲನು ಹಣದ ಕುರಿತು ಹೀಗೆ ಬೋಧಿಸುತ್ತಿದ್ದಾನೆ:

- ಭೌತಿಕತೆಯ ವಿರುದ್ಧ ಪೌಲನು ಸರಳ ಜೀವನ ಶೈಲಿಯನ್ನು ತಿಳಿಸುತ್ತಿದ್ದಾನೆ.
- ವೈರಾಗ್ಯದ ವಿರುದ್ಧ ಪೌಲನು ದೇವರ ಸೃಷ್ಟಿ ಮತ್ತು ಕೊಡುಗೆಗಳಿಗಾಗಿ ಕೃತಜ್ಞತೆಯನ್ನು ತಿಳಿಸುತ್ತಿದ್ದಾನೆ.
- ದುರಾಶೆಯ ವಿರುದ್ಧ ಪೌಲನು ನಮ್ಮಲ್ಲಿರುವುದರಲ್ಲಿ ಸಂತೃಪ್ತಿಯಿಂದ ಇರಬೇಕೆಂದು ತಿಳಿಸುತ್ತಿದ್ದಾನೆ.
- ಸ್ವಾರ್ಥದ ವಿರುದ್ಧ ಪೌಲನು ದೇವರ ಅನುಕರಣೆಯಲ್ಲಿ ಉದಾರತೆಯನ್ನು ತಿಳಿಸುತ್ತಿದ್ದಾನೆ.

ಆದ್ದದರಿಂದ ಆರೋಗ್ಯಕರವಾದ ಕ್ರೈಸ್ತೀಯ ಜೀವಿತವು ಸರಳತೆ, ಕೃತಜ್ಞತೆ, ತೃಪ್ತಿ ಮತ್ತು ಉದಾರತೆಯಲ್ಲಿ ಕಂಡುಬರುತ್ತದೆ.

ಚರ್ಚೆ

- ಈ ಜಗತ್ತಿನಲ್ಲಿ ಹಣದ ಪ್ರೀತಿಯ ವಿರುದ್ಧ ನಾವು ಹೇಗೆ ನಿಂತುಕೊಳ್ಳಬಹುದಾಗಿದೆ? ನಮ್ಮ ಜೀವಿತಗಳಲ್ಲಿ ಈ ಗುಣಲಕ್ಷಣಗಳನ್ನು (ಸರಳತೆ, ಕೃತಜ್ಞತಾ ಮನೋಭಾವ, ತೃಪ್ತಿ ಮತ್ತು ಉದಾರತೆ) ಬೆಳೆಯುವಂತೆ ನಾವು ಏನು ಮಾಡಬಹುದು? ನಾವು ಯಾವುದರಲ್ಲಿ ಬದಲಾಗಬೇಕಾಗಿದೆ?

ಪ್ರಾರ್ಥನೆ

- ಸ್ವಲ್ಪ ಸಮಯವನ್ನು ತೆಗೆದುಕೊಂಡು ದೇವರನ್ನು ಗೌರವಿಸುವ ರೀತಿಯಲ್ಲಿ ಮತ್ತು ಇತರರಿಗೆ ಸಹಾಯ ಮಾಡುವ ಹಾಗೆ ನೀವು ಮತ್ತು ನಿಮ್ಮ ಸಭೆಯು ಹಣವನ್ನು ಮತ್ತು ಆಸ್ತಿಗಳನ್ನು ಸರಿಯಾಗಿ ನಿರ್ವಹಿಸುವಂತೆ ದೇವರಲ್ಲಿ ಪ್ರಾರ್ಥಿಸಿರಿ.
- ಮೊದಲನೇಯ ತಿಮೊಥೆಯ ಸಂದೇಶವು ನಿಮ್ಮಲ್ಲಿ ಬೇರೂರಿ ಮತ್ತು ನೀವು ಕಲಿತಿರುವಂತಹದ್ದನ್ನು ನಿಮ್ಮ ಜೀವಿತ ಮತ್ತು ಸೇವೆಯಲ್ಲಿ ಉಪಯೋಗಿಸುವಂತೆ ಪ್ರಾರ್ಥಿಸಿರಿ.

ತೀತನ ಸಂದೇಶ

ತೀತನ ಕುರಿತು ನಮಗೆ ಏನು ತಿಳಿದಿದೆ?



ಹಿನ್ನಲೆ

ತೀತನು ಹುಟ್ಟಿನಿಂದ ಗ್ರೀಕನು.

ಪೌಲನೊಂದಿಗೆ ಸಂಬಂಧ

ಆತನು ಪೌಲನಿಗೆ ನಂಬಿಕೆಯ ಕುಮಾರನಾಗಿದ್ದನು, ತೀತ. 1:4. ತೀತನು ಪೌಲನ ಮುಖಾಂತರ ರಕ್ಷಣೆಗೆ ಬಂದವನಾಗಿದ್ದನು ಮತ್ತು ನಿಕಟ ಸಹೋದ್ಯೋಗಿಯಾಗಿದ್ದನು, 2 ಕೊರಿ. 2:13. ತೀತನು ಪೌಲನ ಕೆಲವು ಸುವಾರ್ತಾ ಪ್ರಯಾಣದಲ್ಲಿ ಪ್ರಯಾಣಿಸಿದನು.

ಸೇವೆ

ತೀತನನ್ನು ಸಭೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುವುದಕ್ಕಾಗಿ ಕೊರಿಂಥ ಪಟ್ಟಣಕ್ಕೆ ಕಳುಹಿಸಲಾಯಿತು, 2 ಕೊರಿ. 7:5-7, 13-15. ಆತನು ಯೆರೂಸಲೇಮಿನಲ್ಲಿ ಅಗತ್ಯತೆಯಲ್ಲಿರುವ ವಿಶ್ವಾಸಿಗಳಿಗೆ ಸಹಾಯ ಮಾಡುವುದಕ್ಕಾಗಿ ಮತ್ತು ವಸ್ತು ಸಂಗ್ರಹಿಸುವುದಕ್ಕೆ ಮೆಕೆದೋನ್ಯದಲ್ಲಿ ಪೌಲನಿಗೆ ಸಹಾಯ ಮಾಡಿದನು, 2 ಕೊರಿ. 8:1-23. ನಂತರದಲ್ಲಿ ಪೌಲನು ಆತನಿಗೆ ಕ್ರೇತದ್ವೀಪದಲ್ಲಿ ಸಭೆಯನ್ನು ಸ್ಥಾಪಿಸಿ ಕರ್ತನ ಕಾರ್ಯವನ್ನು ಮುಂದುವರೆಸುವ ಜವಾಬ್ದಾರಿಯನ್ನು ನೀಡುತ್ತಾನೆ, ತೀತ. 1:5.

ಮೂರು ಮುಖ್ಯಭಾಗಗಳು

ಪೌಲನು ತೀತನಿಗೆ ಬರೆದ ಪತ್ರಿಕೆಯನ್ನು ಮೂರು ಮುಖ್ಯ ಭಾಗಗಳಾಗಿ ಈ ರೀತಿಯಾಗಿ ವಿಂಗಡಿಸಬಹುದು:

1. ಸಭೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (ಅಧ್ಯಾಯ 1)
2. ಮನೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (ಅಧ್ಯಾಯ 2)
3. ಜಗತ್ತಿನಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (ಅಧ್ಯಾಯ 3)

1. ಸಭೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (1:5-16)

ಕ್ರೇತದಲ್ಲೇ ತೀತನನ್ನು ಬಿಟ್ಟು ಹೋಗುವುದರ ಪೌಲನ ಉದ್ದೇಶವೇನೆಂದರೆ, ಪೌಲನು ಅಪೂರ್ಣವಾಗಿ ಬಿಟ್ಟಿದ್ದ ಕಾರ್ಯವನ್ನು ಅವನು ಪೂರ್ಣಗೊಳಿಸಿ ಮತ್ತು ಸಭೆಗಳಲ್ಲಿ ಹಿರಿಯರನ್ನು ನೇಮಿಸಬೇಕೆಂಬುದಕ್ಕಾಗಿ (1:5).

ತೀತನ ಪತ್ರಿಕೆಯಲ್ಲಿ ಕಂಡುಬರುವ ಹಿರಿಯರನ್ನು ನೇಮಿಸುವುದರ ಅರ್ಹತೆಗಳು 1 ತಿಮೊಥೆ. 3:1-13 ರಲ್ಲಿ ಪೌಲನ ಸಲಹೆಗಳಲ್ಲಿ ಕಾಣಬಹುದಾಗಿದೆ. ಆದ್ದರಿಂದ ಇಲ್ಲಿ ಅವರ ಕುರಿತು ವಿವರವಾಗಿ ಹೋಗುವುದರ ಅಗತ್ಯತೆಯಿಲ್ಲ.

ಹಿರಿಯನು ಎಂಬುದರ ಗ್ರೀಕ್ ಪದವು (ಪ್ರೆಸ್ಬಿಟರ್, ತೀತ 1:6) ಮತ್ತು ಬಿಷಪ್ (ಎಪಿಸ್ಕೋಪೋಸ್, ವ. 7) ಎರಡು ಪದಗಳು ಸಮಾನಾರ್ಥಕ ಪದಗಳಾಗಿದ್ದು ಮತ್ತು ಸಭೆಯಲ್ಲಿ ಇವರಿಬ್ಬರು ಒಂದೇ ಕಾರ್ಯವನ್ನು ಮಾಡುವವರಾಗಿರುತ್ತಾರೆ. ಆದ್ದರಿಂದ ಹಿರಿಯ ಮತ್ತು ಬಿಷಪ್ ರ ನಡುವು ಯಾವುದೇ ವ್ಯತ್ಯಾಸವಿಲ್ಲ.

ತೀತನು ಹಿರಿಯರನ್ನು (ಬಹುವಚನದಲ್ಲಿ) ನೇಮಿಸಬೇಕೆಂದು ಪಠ್ಯವು ತಿಳಿಸುತ್ತದೆ. ಪ್ರಾಯಶಃ ಸಭೆಯಲ್ಲಿನ ಪ್ರತಿ ಮನೆಯ ಗುಂಪಿಗೆ ಒಬ್ಬ ಹಿರಿಯರಿದ್ದರು. ಬಹುಶಃ ಅನೇಕ ಮನೆಯ ಗುಂಪುಗಳಿದ್ದವು. ಆದ್ದರಿಂದ ತೀತನು ಒಂದಕ್ಕಿಂತ ಹೆಚ್ಚು ಹಿರಿಯರನ್ನು ನೇಮಿಸಲು ಹೇಳಲಾಯಿತು. ಪೌಲನು "ಒಬ್ಬ ಕುರುಬನ ನಾಯಕತ್ವವನ್ನು" ಪ್ರೋತ್ಸಾಯಿಸಲಿಲ್ಲ ಬದಲಾಗಿ ತಂಡವಾಗಿ ನಿಕಟವಾಗಿ ಕಾರ್ಯನಿರ್ವಹಿಸುವುದನ್ನು ಉತ್ತೇಜಿಸಿದನು.

ಹಿರಿಯರ ಕುರಿತ ಮೂರು ಅಂಶಗಳು

1. ಅವರು ತಮ್ಮ ವಿವಾಹ ಮತ್ತು ಕುಟುಂಬ ಜೀವನದಲ್ಲಿ ನಿರ್ದೋಷಿಗಳಾಗಿರಬೇಕು (1:6)
2. ಅವರು ತಮ್ಮ ಸ್ವಭಾವ ಮತ್ತು ನಡವಳಿಕೆಯಲ್ಲಿ ದೋಷರಹಿತರಾಗಿರಬೇಕು (1:7-8)
3. ಅವರು ತಮ್ಮ ಸೈದ್ಧಾಂತಿಕ ವಿಷಯದಲ್ಲಿ ನಿರ್ದೋಷಿಗಳಾಗಿರಬೇಕು (1:9)

ಚರ್ಚಿಸಿರಿ

- ಇತರೆ ಬೇರೆ ಅಂಶಗಳಿಗಿಂತ ಈ ಅಂಶಗಳು ಹೆಚ್ಚು ಪ್ರಾಮುಖ್ಯವಾಗಿವೆ ಎಂದು ನೀವು ಆಲೋಚಿಸುತ್ತೀರಾ? ಯಾಕೆ ಅಥವಾ ಯಾಕೆ ಇಲ್ಲ?
- ನಿರ್ದೋಷಿಗಳಾಗಿರುವುದು ಎಂಬುದರ ಅರ್ಥವೇನು? ಹಿರಿಯರು ಪರಿಪೂರ್ಣರು ಮತ್ತು ನಿಷ್ಕಳಂಕರು ಆಗಿರಬೇಕೇ? ಅಥವಾ ಅವರ ಮೇಲೆ ಆರೋಪ ಮಾಡಲು ಮತ್ತು ದೂಷಿಸಲು ಏನೂ ಇರಬಾರದು ಎಂಬುದು ಇದರರ್ಥವಾಗಿದೆಯೋ?
- ಈ ಅಂಶವು ಇಂದು ಕರ್ನಾಟಕದ ಸಭೆಗಳಿಗೆ ಹೇಗೆ ಅನ್ವಯಿಸಲ್ಪಡುತ್ತದೆ? ನಾವು ನಾಯಕರುಗಳನ್ನು ಹೇಗೆ ನೇಮಿಸುತ್ತೇವೆ?
- ಈ ಅಂಶಗಳು ನಿಮಗೆ ಅನ್ವಯಿಸಲ್ಪಡುತ್ತವೆಯೋ? ಹೇಗೆ?

ತೀತನಿಗೆ ಹಿರಿಯರನ್ನು ನೇಮಿಸುವುದರ ಕುರಿತ ಸಲಹೆಯನ್ನು ನೀಡಿದ ನಂತರ, ಪೌಲನು ಪ್ರಸ್ತುತದಲ್ಲಿ ಕ್ರೇತದಲ್ಲಿ ಪ್ರತ್ಯಕ್ಷವಾಗಿರುವ ಸುಳ್ಳುಬೋಧಕರನ್ನು ಕೇಂದ್ರೀಕರಿಸುತ್ತಾನೆ. ಸಭೆಯಿಂದ ಸುಳ್ಳುಬೋಧನೆಯನ್ನು ಹೊರಗಡೆ ಇಡುವುದಕ್ಕಾಗಿ ಹಿರಿಯರನ್ನು ನೇಮಿಸಲಾಗಿತ್ತು.

ಪೌಲನು ಸುಳ್ಳುಬೋಧಕರನ್ನು ಈ ರೀತಿಯಾಗಿ ವಿವರಿಸುತ್ತಿದ್ದಾನೆ:

ಅ. ಅವರ ಗುರುತು: ಅವರು ದಂಗೆ ಏಳುವವರು, ಬರೀ ಮಾತನ್ನು ಆಡುವವರು ಮತ್ತು ವಂಚಕರು.

ಆ. ಅವರ ಪ್ರಭಾವ: ಅವರು ಮನೆಗಳಿಗೆ ಭೇಟಿ ನೀಡುವವರು, ಸುಳ್ಳುಸಿದ್ಧಾಂತಗಳನ್ನು ಬೋಧಿಸುತ್ತಾ ಮನೆಗಳನ್ನು ಮತ್ತು ಗೃಹಸಭೆಗಳನ್ನು ಹಾಳುಮಾಡುವವರಾಗಿದ್ದಾರೆ.

ಇ. ಅವರ ನಡತೆ: ಅವರು ಸುಳ್ಳು ಹೇಳುವವರು, ದುಷ್ಟರು ಮತ್ತು ಸೋಮಾರಿಗಳು.

ಈ. ಅವರ ತಪ್ಪುಗಳು: ಅವರು ದೇವರ ಸತ್ಯತೆಗಿಂತ ಮನುಷ್ಯರ ಆಜ್ಞೆಗಳಿಗೆ ಹೆಚ್ಚು ಮಹತ್ವ ನೀಡುವವರಾಗಿದ್ದಾರೆ. ಅವರು ಶುದ್ಧತೆಯ ಬಗ್ಗೆ ತಪ್ಪಾಗಿ ಅರ್ಥಮಾಡಿಕೊಂಡವರಾಗಿದ್ದಾರೆ. ಮತ್ತು ಅವರು ದೇವರಿಂದ ಉಂಟಾಗುವ ಆಂತರಿಕ ಪರಿಶುದ್ಧತೆಗಿಂತ ಇತರೆ ಜನರು ತಮ್ಮನ್ನು ಹೊಗಳುವ ರೀತಿಯಲ್ಲಿ ಜನರ ಮುಂದೆ ಪರಿಶುದ್ಧರಾಗಿ ನಡೆದುಕೊಳ್ಳುವುದರಲ್ಲಿ ಹೆಚ್ಚು ಕಾಳಜಿಯನ್ನು ತೋರಿಸುವವರಾಗಿದ್ದಾರೆ. ಅವರು ತಾವು ದೇವರನ್ನು ತಿಳಿದಿದ್ದೇವೆ ಎಂದು ಹೇಳಿಕೊಂಡರೂ ಅವರು ತಮ್ಮ ನಡವಳಿಕೆಯಿಂದಲೂ ಮತ್ತು ಅವರ ಕಾರ್ಯಗಳಿಂದಲೂ ದೇವರನ್ನು ಅಲ್ಲಗಳೆಯುವವರಾಗಿದ್ದಾರೆ. ಇದರರ್ಥವೇನೆಂದರೆ ಅವರ ಮಾತುಗಳು ಅವರು ಯಾರೆಂಬುದನ್ನು ಪ್ರತಿಬಿಂಬಿಸುವುದಿಲ್ಲ.

ಹಾಗಾದರೆ ನಾವು ಸುಳ್ಳುಬೋಧಕರ ವಿರುದ್ಧ ಬಳಸಬಹುದಾದ ಪೌಲನ ತಂತ್ರವೇನು? ಪಠ್ಯಭಾಗವು ನಮಗೆ ಎರಡು ಅಂಶಗಳನ್ನು ತಿಳಿಸುತ್ತದೆ:

1. ಸುಳ್ಳುಬೋಧಕರು ಹೆಚ್ಚಾದಂತೆ, ಸ್ವಸ್ಥಬೋಧನೆಯನ್ನು ಮಾಡುವವರು, ನಂಬಿಗಸ್ತರು ಮತ್ತು ನಿಜವಾದ ಶಿಕ್ಷಕರನ್ನು ಹೆಚ್ಚಾಗಿ ನೇಮಿಸಬೇಕೆಂಬುದನ್ನು ಪೌಲನು ಬಯಸುತ್ತಿದ್ದಾನೆ. ಒಂದು ವೇಳೆ ಹೆಚ್ಚು ಸುಳ್ಳುಬೋಧಕರಿದ್ದರೆ, ಸ್ವಸ್ಥಬೋಧಕರ ಅಗತ್ಯತೆಯು ಹೆಚ್ಚಿದೆ. ಇದಕ್ಕಾಗಿಯೇ ಸಭೆಗಳಲ್ಲಿಯೂ ಮತ್ತು ಪಂಗಡಗಳಲ್ಲಿಯೂ ಸತ್ಯವೇದ ಕಾಲೇಜುಗಳನ್ನು ಮತ್ತು ಸೆಮಿನರಿಗಳನ್ನು ಹೊಂದಿರತಕ್ಕದ್ದು. ಅಲ್ಲಿ ವಿದ್ಯಾರ್ಥಿಗಳು ಸ್ವಸ್ಥಬೋಧನೆಯ ಸಿದ್ಧಾಂತಗಳನ್ನು ಕಲಿಯುವಂತವರಾಗಿರುತ್ತಾರೆ.

2. ಸಭೆಯ ನಾಯಕರುಗಳಾಗಿ ನೇಮಿಸಲ್ಪಟ್ಟವರ ಉನ್ನತ ಗುಣಮಟ್ಟವನ್ನು ಪೌಲನು ಬಯಸಿದನು. ಆದ್ದರಿಂದ ನಮ್ಮ ನಾಯಕತ್ವವು ಗುಣಮಟ್ಟದಿಂದ ಕೂಡಿರಬೇಕೆಂದು ನಾವು ಬಯಸೋಣ. ಸಭೆಯಲ್ಲಿ ನಾಯಕರುಗಳ ಮತ್ತು ಸಭಾಪಾಲಕರುಗಳ ಕೊರತೆಯಿರುವಾಗ ಸಭೆ ಅಥವಾ ಸಂಸ್ಥೆಗಳು ಸಿದ್ಧರಿರುವ ಯಾರನ್ನಾದರೂ ಒಂದು ವೇಳೆ ಅವರು ಮನೆಗಳಲ್ಲಿ ನಡತೆಗಳಲ್ಲಿ ಮತ್ತು ಸಿದ್ಧಾಂತಗಳಲ್ಲಿ ದೋಷರಹಿತರಿಲ್ಲದೆ ಇದ್ದರು ಅಂತವರನ್ನು ನೇಮಿಸುವ ಶೋಧನೆಗೆ ಒಳಗಾಗುವುದುಂಟು. ಅದಕ್ಕಾಗಿ ಬದಲಿಗೆ ನಮ್ಮ ಹಿರಿಯರನ್ನು ಮತ್ತು ನಾಯಕರನ್ನು ಎಚ್ಚರಿಕೆಯಿಂದ ಆಯ್ಕೆ ಮಾಡೋಣ. ಒಳ್ಳೆಯ ನಾಯಕರು ಸಭೆಯನ್ನು ಆರೋಗ್ಯಕರವಾಗಿರಿಸುತ್ತಾರೆ.

2. ಮನೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (2:1-15)

ದೇವರ ನಾಯಕರುಗಳು ಸುಳ್ಳುಬೋಧಕರುಗಳಿಗಿಂತ ಭಿನ್ನವಾಗಿರಲು ಕರೆಯಲ್ಪಟ್ಟಿದ್ದಾರೆ. ಪೌಲನು ತೀತನಿಗೆ, ನೀನಾದರೋ ಸ್ವಸ್ಥಬೋಧನೆಗೆ ಅನುಗುಣವಾಗಿ ಉಪದೇಶ ಮಾಡು ಎಂಬುದಾಗಿ ಬರೆಯುತ್ತಿದ್ದಾನೆ. ಸುಳ್ಳುಬೋಧಕರ ಅನಾರೋಗ್ಯಕರವಾದ ಬೋಧನೆಗೂ ಮತ್ತು ಸತ್ಯ ಹಾಗೂ ಆರೋಗ್ಯಕರ ಸಿದ್ಧಾಂತಗಳ ಮಧ್ಯದಲ್ಲಿ ವ್ಯತ್ಯಾಸವಿದೆ. ತೀತನು ಉತ್ತಮ ಸಿದ್ಧಾಂತದೊಂದಿಗೆ ಒಳಗೊಂಡ ನೀತಿಶಾಸ್ತ್ರವನ್ನು ಸಹ ಕಲಿಸಬೇಕು.

ತೀತನಿಗೆ ಬರೆದ ತನ್ನ ಪತ್ರಿಕೆಯಲ್ಲಿ ಪೌಲನು (ಈ ಮುಂಚೆ ಆತನು ಎಫೆಸ ಪತ್ರಿಕೆಯಲ್ಲಿ ಮಾಡಿದ ಹಾಗೆ) ಗ್ರೀಕ್ ಮತ್ತು ರೋಮ್ ಕುಟುಂಬಗಳನ್ನು ರೂಪಿಸುವ ಹಾಗೆ ವಿವಿಧ ರೀತಿಯ ಜನರಿಗೆ ನಿಯಮಗಳ ಗುಂಪನ್ನು ಸೇರಿಸಿದ್ದಾನೆ. ಇಂತಹ ಪಟ್ಟಿಯನ್ನು "ಮನೆಯ ನಿಯಮ" ಅಥವಾ "ಗೃಹ ಬಳಕೆಯ ನಿಯಮ" ಎಂಬುದಾಗಿ ಕರೆಯಲಾಗಿದೆ. ಇದು ಜೊತೆಯಾದ ಜನರು (ಗಂಡ/ಹೆಂಡತಿ, ಪೋಷಕರು/ಮಕ್ಕಳು, ಯಜಮಾನ/ಗುಲಾಮ) ಮನೆಯಲ್ಲಿ ಹೇಗೆ ಒಬ್ಬರಿಗೊಬ್ಬರು ಪರಸ್ಪರ ಸಂಬಂಧದಲ್ಲಿ ಇರಬೇಕು ಎಂಬುದನ್ನು ಕ್ರಮಪಡಿಸುತ್ತದೆ. ಪೌಲನು ತನ್ನ ಮನೆಯ ನಿಯಮವನ್ನು ಗೃಹಸಭೆಗಳಿಗೆ ಅಳವಡಿಸಿಕೊಳ್ಳುತ್ತಿದ್ದಾನೆ, ಇದನ್ನು ಆತನು ಕ್ರೈಸ್ತೀಕರಣಗೊಳಿಸಿದನು ಮತ್ತು ಒಬ್ಬ ವಿಶ್ವಾಸಿಯು ಇನ್ನೊಬ್ಬ ವಿಶ್ವಾಸಿಯೊಂದಿಗೆ ಹೊಂದಿರುವ ಸಂಬಂಧಗಳ ಮೇಲೆ ಕೇಂದ್ರೀಕರಿಸಿದನು.

ಚರ್ಚಿಸಿರಿ

ತೀತ. 2:1-10ನ್ನು ಓದಿರಿ ಮತ್ತು ಈ ಕೆಳಗಿನ ಮೂರು ಪ್ರಶ್ನೆಗಳನ್ನು ಚರ್ಚಿಸಿರಿ:

- ಪೌಲನು ಯಾವ ಗುಂಪುಗಳನ್ನು ಮತ್ತು ವ್ಯಕ್ತಿಗಳನ್ನು ಉಲ್ಲೇಖಿಸುತ್ತಿದ್ದಾನೆ?
- ವಿವಿಧ ಗುಂಪುಗಳೊಂದಿಗೆ ಮರುಕಳಿಸುವ ಯಾವುದೇ ನಿರ್ದಿಷ್ಟ ವಿಷಯಾಂಶಗಳನ್ನು ನೀವು ನೋಡುತ್ತೀರಾ?
- ಪೌಲನ ಸಲಹೆಗಳನ್ನು ನಮ್ಮ ಸ್ವಂತ ಪರಿಸ್ಥಿತಿಗೆ ಅನ್ವಯಿಸಬಹುದೇ? ಹೇಗೆ?

ಪೌಲನು ತನ್ನ ಇತರೆ ಪತ್ರಿಕೆಗಳಲ್ಲಿ (ರೋಮಾಪುರದವರಿಗೆ, ಗಲಾತ್ಯದವರಿಗೆ, ಎಫೆಸದವರಿಗೆ) ದೇವರು ನಮಗಾಗಿ ಏನು ಮಾಡಿದ್ದಾನೆಂಬುದಾಗಿ ಮತ್ತು ಸಿದ್ಧಾಂತವನ್ನು ಬೋಧಿಸುವುದರ ಮೂಲಕ ಪ್ರಾರಂಭಿಸುತ್ತಾನೆ. ನಂತರದಲ್ಲಿ ಆತನು ನಾವು ಹೇಗೆ ಜೀವಿಸಬೇಕೆಂಬ ಕ್ರೈಸ್ತತ್ವದ ಕರ್ತವ್ಯ ಮತ್ತು ನೀತಿಯನ್ನು ಬೋಧಿಸಲು ಹೋಗುತ್ತಾನೆ. ಆದರೆ ತೀತನಲ್ಲಿ ಈ ಕ್ರಮವು ತದ್ವಿರುದ್ಧವಾಗಿದೆ: ಪೌಲನು ನೈತಿಕ ಕರ್ತವ್ಯಗಳನ್ನು ಬೋಧಿಸುವುದರ ಮೂಲಕ ಪ್ರಾರಂಭಿಸುತ್ತಾನೆ, ಮತ್ತು ನಂತರದಲ್ಲಿ ನಾವು ಏಕೆ ಅಂತಹ ರೀತಿಯಲ್ಲಿ ಬದುಕಬೇಕು ಎಂಬುದಕ್ಕೆ ತನ್ನ ಕಾರಣಗಳನ್ನು ನೀಡುತ್ತಾನೆ (2:11-15).

ನೈತಿಕವಾಗಿ ಜೀವಿಸುವುದಕ್ಕೆ ಪೌಲನ ಕಾರಣಗಳು ಯೇಸು ಕ್ರಿಸ್ತನ ಎರಡು ಬರುವಿಕೆಗಳಾಗಿವೆ. ತನ್ನ ಮೊದಲ ಬರುವಿಕೆಯಲ್ಲಿ, ಎಲ್ಲಾ ಜನರಿಗೆ ರಕ್ಷಣೆಯನ್ನು ತರುವುದರ ಮೂಲಕ ದೇವರ ಕರುಣೆಯು ಯೇಸು ಕ್ರಿಸ್ತನ ಮೂಲಕ ಪ್ರಕಟವಾಯಿತು. ನಂತರದಲ್ಲಿ ದೇವಜನರಾದ ನಾವು ಮಹಿಮೆಯುಳ್ಳ ಆತನ ಮರುಕಾಣಿಸಿಕೊಳ್ಳುವಿಕೆಯಾದ ಎರಡನೇ ಬರೋಣವನ್ನು ಎದುರು ನೋಡುವವರಾಗಿದ್ದೇವೆ. ದೇವರು ಯೇಸುವಿನ ಮೂಲಕ ನಮಗೆ ಕೃಪೆಯನ್ನು ನೀಡಿದ್ದಾನೆ ಮತ್ತು ಆತನ ಮಹಿಮೆಯ ಹಿಂತಿರುಗುವಿಕೆಯ ನಿರೀಕ್ಷೆ ನಮಗುಂಟು. ಈ ಮಹತ್ತಾದ ವಿಷಯಗಳು ನಾವು ನಂಬಿಕೆಯಲ್ಲಿಯೂ ಮತ್ತು ಪ್ರೀತಿಯಲ್ಲಿಯೂ ಹಾಗೂ ಸ್ವಯಂ ನಿಯಂತ್ರಣದಲ್ಲಿದ್ದು ಪರಿಶುದ್ಧ ಜೀವಿತದಲ್ಲಿ ಜೀವಿಸುವಂತೆ ದೇವರ ಕೃಪೆ ಮತ್ತು ಯೇಸುವಿನ ಮಹಿಮೆಯು ನಮಗೆ ಪ್ರೇರಕ ಶಕ್ತಿಗಳಾಗಿವೆ.

3. ಜಗತ್ತಿನಲ್ಲಿ ಸಿದ್ಧಾಂತ ಮತ್ತು ಕರ್ತವ್ಯಗಳು (3:1-8)

ಪೌಲನು ಅಧ್ಯಾಯ 3 ರಲ್ಲಿ ಇದೇ ಕ್ರಮವನ್ನು ಉಪಯೋಗಿಸಿದ್ದಾನೆ. ಮೊದಲು ಆತನು ಜಗತ್ತಿನಲ್ಲಿರುವ ನಮ್ಮ ಕರ್ತವ್ಯಗಳ ಕುರಿತು ಬೋಧಿಸುತ್ತಾನೆ. ನಂತರದಲ್ಲಿ ಆತನು ಅದರ ಸಿದ್ಧಾಂತ ಮತ್ತು ಅದರ ಕಾರಣವನ್ನು ವಿವರಿಸುತ್ತಾನೆ.

ಅ. ನಮ್ಮ ಸಂಬಂಧಗಳು

ಆಡಳಿತಗಾರರೊಂದಿಗೆ ಕ್ರೈಸ್ತರ ಸಂಬಂಧ (3:6)

ಸಭೆಯು ನಮ್ಮ ಬೋಧಕರಾದ ಆಡಳಿತಗಾರರಿಗಾಗಿ ಪ್ರಾರ್ಥಿಸಬೇಕೆಂಬುದಾಗಿ ಪೌಲನು ತಿಮೊಥೆಗೆ ಬರೆದದ್ದನ್ನು ನಾವು ಈ ಮೊದಲೇ ನೋಡಿದ್ದೇವೆ (1 ತಿಮೊಥೆ 2:1-4). ಈಗ ಆತನು ನಾವು ಅವರಿಗೆ ವಿಧೇಯರಾಗಬೇಕೆಂಬುದಾಗಿ ತೀತನಿಗೆ ಬರೆಯುತ್ತಿದ್ದಾನೆ. ಇದರರ್ಥ ನಾವು ಅವರಿಗೆ ಯಾವುದೇ ಷರತ್ತು ಇಲ್ಲದೆ ನಿಷ್ಠೆಯನ್ನು ತೋರಿಸಬೇಕೆಂದಲ್ಲ, ಹಾಗೆ ಮಾಡಿದರೆ ಅದು ವಿಗ್ರಹಾರಾಧನೆಯಾಗುತ್ತದೆ. ಯೇಸು ಕ್ರಿಸ್ತನೇ ಯಾವಾಗಲೂ ನಮ್ಮ ಮೊದಲ ಮತ್ತು ಅತ್ಯಂತ ಪ್ರಮುಖ ರಾಜನು ಮತ್ತು ಕರ್ತನು ಆಗಿದ್ದಾರೆ. ನಾವು ಮನುಷ್ಯರಿಗಿಂತ ದೇವರಿಗೆ ವಿಧೇಯರಾಗಬೇಕೆಂದು ಪೇತ್ರನು ಹೇಳುತ್ತಾನೆ (ಅಪೊ.ಕೃತ್ಯ. 5:29).

ಆದ್ದರಿಂದ ಅಧಿಕಾರದಲ್ಲಿರುವವರಿಗೆ ವಿಧೇಯರಾಗುವುದು ಎಂದರೆ ನಮ್ಮ ದೇಶದ ಕಾನೂನುಗಳನ್ನು ಪಾಲಿಸುವುದು ಮತ್ತು ಒಳ್ಳೆಯದನ್ನು ಮಾಡುವುದಕ್ಕೆ ನಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡತಕ್ಕದ್ದು. ವಿಶ್ವಾಸಿಗಳು ಅವರ ರಾಷ್ಟ್ರವನ್ನು ಏಳಿಗೆಯಲ್ಲಿ ತರುವುದರ ಮೂಲಕ ಮತ್ತು ಮಾನವ ಹಕ್ಕುಗಳನ್ನು ಬಲಪಡಿಸುವುದರ ಮೂಲಕ ಸಮಾಜದಲ್ಲಿ ಅವರು ಸಕರಾತ್ಮಕ ಶಕ್ತಿಯಾಗಬೇಕು.

ಎಲ್ಲರೊಂದಿಗೆ ವಿಶ್ವಾಸಿಗಳ ಸಂಬಂಧ (3:2)

ಅವಿಶ್ವಾಸಿಗಳೊಂದಿಗೆ ವಿಶ್ವಾಸಿಗಳು ಹೇಗೆ ಸಂಬಂಧ ಹೊಂದಿರಬೇಕು? ಪೌಲನು ನಾಲ್ಕು ಅಂಶಗಳನ್ನು ಉಲ್ಲೇಖಿಸುತ್ತಾನೆ: ನಾವು ಯಾರ ಬಗ್ಗೆ ಕೆಟ್ಟದ್ದಾಗಿ ಮಾತನಾಡಬಾರದು ಅಥವಾ ನಿಂದಿಸಬಾರದು. ನಾವು ಶಾಂತಿಯಿಂದಲೂ ಮತ್ತು ಸೌಹಾರ್ದತೆಯಿಂದಲೂ ಇರುವ ಜನರಾಗಿರಬೇಕು. ನಾವು ವಿವೇಚನೆಯುಳ್ಳ ಮತ್ತು ಸೌಮ್ಯವುಳ್ಳ ಜನರಾಗಿರಬೇಕು. ನಾವು ಎಲ್ಲರಿಗೂ ವಿನಯ ಮತ್ತು ದೀನತೆಯನ್ನು ತೋರಿಸುವವರಾಗಿರಬೇಕು.

ಚರ್ಚಿಸಿರಿ

- ನಮ್ಮ ಸಮಾಜದಲ್ಲಿರುವ ಜನರು ಕ್ರೈಸ್ತರಾದ ನಮ್ಮ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದಾರೆಂದು ನೀವು ಭಾವಿಸುತ್ತೀರಿ? ಈ ಲೋಕದಲ್ಲಿ ಹೆಚ್ಚು ಕ್ರಿಸ್ತನಂತೆ ಆಗಲು ನಾವು ಏನನ್ನು ಮಾಡಬಹುದು?

ಆ. ರಕ್ಷಣೆ

3:3-8 ರಲ್ಲಿ ಪೌಲನು ನಮ್ಮ ರಕ್ಷಣೆಯನ್ನು ಚರ್ಚಿಸುತ್ತಾನೆ, ಇದು ನಮ್ಮ ಸಾರ್ವಜನಿಕ ಜೀವಿತದಲ್ಲಿನ ಜವಾಬ್ದಾರಿಯುತ ವರ್ತನೆ ಮತ್ತು ನಮ್ಮ ಸಾಮಾಜಿಕ ಹಾಗೂ ನೈತಿಕ ಜೀವಿತದ ನಡವಳಿಕೆಗೆ ದೈವಿಕ ಸಿದ್ಧಾಂತದ ಕಾರಣವಾಗಿದೆ. ಆತನು ನಮ್ಮ ಹಿಂದಿನ ಪಾಪದಿಂದ ತುಂಬಲ್ಪಟ್ಟ ಜೀವನದಲ್ಲಿ ನಾವು ಹೇಗೆ ಸಮಾಜ ವಿರೋಧಿಗಳಾಗಿ ಯಾವುದರ ಕುರಿತು ಕಾಳಜಿಯಿಲ್ಲದವರಾಗಿದ್ದನ್ನು ತೋರಿಸುತ್ತಿದ್ದಾನೆ. ಆದರೆ ಯೇಸು ಕ್ರಿಸ್ತನು ಈ ಹಳೇಯ ಜೀವಿತದಿಂದ ನಮ್ಮನ್ನು ರಕ್ಷಿಸಿದನು. ಅದಕ್ಕಾಗಿಯೇ ನಾವು ನಮ್ಮ ಕಾಲದಲ್ಲಿ ಜಗತ್ತನ್ನು ತಲುಪಬಹುದು ಮತ್ತು ಸಕಾರಾತ್ಮಕ ಬದಲಾವಣೆಯನ್ನು ಮಾಡಬಹುದು.

ಚರ್ಚಿಸಿರಿ

ತೀತ. 3:3-8 ನಮಗೆ ಯಾವುದರ ಕುರಿತು ಹೇಳುತ್ತದೆ:

- ನಮ್ಮ ರಕ್ಷಣೆಯ ಅಗತ್ಯತೆ?
- ನಮ್ಮ ರಕ್ಷಣೆಯ ಸಂಪನ್ಮೂಲ?
- ನಮ್ಮ ರಕ್ಷಣೆಯ ಅಡಿಪಾಯ?
- ನಮ್ಮ ರಕ್ಷಣೆಯ ಅರ್ಥ?
- ನಮ್ಮ ರಕ್ಷಣೆಯ ಗುರಿ?

ಇ. ವೈಯಕ್ತಿಕ ಸಲಹೆಗಳು

ಪೌಲನು ತೀತನಿಗೆ ಕೆಲವು ವೈಯಕ್ತಿಕ ಸಲಹೆಗಳನ್ನು ನೀಡುವುದರ ಮೂಲಕ ತನ್ನ ಪತ್ರಿಕೆಯನ್ನು ಕೊನೆಗೊಳಿಸುತ್ತಾನೆ. ತೀತನು ಮೂರ್ಖತನದ ವಿವಾದಗಳಿಂದ ದೂರವಿರತಕ್ಕದ್ದು. ತೊಂದರೆಪಡಿಸುವವರನ್ನು ಆತನು ಶಿಸ್ತು ಮಾಡಬೇಕು. ಆತನು ನಿಕೊಪೊಲಿಯಲ್ಲಿ ಪೌಲನೊಂದಿಗೆ ಸೇರಿಕೊಳ್ಳಬೇಕು. ಹೆಸರುಗಳನ್ನು ಉಲ್ಲೇಖಿಸಿರುವ ಸಹೋದರರನ್ನು ಅವನು ಕಾಳಜಿ ತೋರಿಸುವವನಾಗಿರಬೇಕು. ಆತನು ವಿಶ್ವಾಸಿಗಳಿಗೆ ಪೌಲನ ಶುಭಾಷಯಗಳನ್ನು ತಿಳಿಸಬೇಕು.

ಪ್ರಾರ್ಥಿಸಿರಿ

ನಾವು ಸತ್ಯಬೋಧನೆಯಲ್ಲಿ ಬಲವಾಗಿ ನಿಂತುಕೊಂಡು ಸುಳ್ಳುಬೋಧನೆಯನ್ನು ಎದುರಿಸುವವರಾಗಿರುವಂತೆ ಪ್ರಾರ್ಥಿಸಿರಿ.

ನಮ್ಮ ಮನೆಗಳಲ್ಲಿ, ನಮ್ಮ ಸಭೆಗಳಲ್ಲಿ ಮತ್ತು ನಮ್ಮ ಸಮಾಜದಲ್ಲಿ ನಾವು ಆಶೀರ್ವಾದಕರವಾಗಿರುವಂತೆ ಪ್ರಾರ್ಥಿಸಿರಿ.

ಎರಡನೇ ತಿಮೊಥೆಯ ಸಂದೇಶ

ಪೀಠಿಕೆ

ಎರಡನೇ ತಿಮೊಥೆಯ ಪತ್ರಿಕೆಯು ವೈಯಕ್ತಿಕ ಮತ್ತು ಚಲನೆಯುಳ್ಳದ್ದಾಗಿದೆ. ಪೌಲನು ಈಗ ವೃದ್ಧನಾಗಿದ್ದು ರೋಮಿನಲ್ಲಿರುವ ಶೀತದ ಕತ್ತಲೆಯ ಬಂಧಿಖಾನೆಯಲ್ಲಿದ್ದು ತನ್ನ ಮರಣ ದಂಡನೆಗಾಗಿ ಕಾಯುತ್ತಿದ್ದಾನೆ. "ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ" (4:7) ಎಂಬುದಾಗಿ ಹೇಳುವುದರ ಮೂಲಕ ತನ್ನ ಅಪೊಸ್ತಲತನದ ಮತ್ತು ಕ್ರೈಸ್ತ ಸೇವಕತನದ ಕಾರ್ಯಗಳು ಕೊನೆಗೊಳ್ಳಲಿಕ್ಕಿದೆ.

ಅಧ್ಯಾಯ 1: ಸುವಾರ್ತೆಯನ್ನು ಸಾರುವುದಕ್ಕೆ ಅಪ್ಪಣೆ ಕೊಡುವುದು

1. ತಿಮೊಥೆ

ಮೊದಲನೇಯ ತಿಮೊಥೆ ಪತ್ರಿಕೆಯಲ್ಲಿ ನಾವು ತಿಮೊಥೆಯ ಕುರಿತು ಕೆಲವು ಸಂಗತಿಗಳನ್ನು ಕಲಿತಿದ್ದೇವೆ. ಎರಡನೇಯ ತಿಮೊಥೆಯ ಪೀಠಿಕೆಯಲ್ಲಿ ಪೌಲನು ತಿಮೊಥೆಗೆ ಕೆಲವು ವೈಯಕ್ತಿಕ ವಿಷಯಗಳನ್ನು ತಿಳಿಸುತ್ತಾನೆ: "ನಾನು ಹಗಲಿರುಳು ನನ್ನ ಪ್ರಾರ್ಥನೆಗಳಲ್ಲಿ ನಿನ್ನನ್ನು ತಪ್ಪದೆ ಜ್ಞಾಪಿಸಿಕೊಳ್ಳುತ್ತೇನೆ", ವ. 3. "ನಿನ್ನ ಕಣ್ಣೀರುಗಳನ್ನು ನೆನಪಿಗೆ ತಂದುಕೊಳ್ಳುತ್ತೇನೆ", ವ. 4. "ನಿನ್ನಲ್ಲಿರುವ ನಿಷ್ಕಪಟವಾದ ನಂಬಿಕೆಯು ನನ್ನ ನೆನಪಿಗೆ ಬಂತು", ವ. 5. ತಿಮೊಥೆಯ ಜೀವಿತವನ್ನು ರೂಪಿಸಿದ್ದಕ್ಕಾಗಿ ಪೌಲನು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿದನು. ತಿಮೊಥೆಯನ್ನು ರೂಪಿಸಿ ಮತ್ತು ಕ್ರಮಪಡಿಸಲು ಕೊಡುಗೆಯನ್ನು ನೀಡಲು ಪ್ರಭಾವ ಬೀರಿದ ನಾಲ್ಕು ಸಂಗತಿಗಳನ್ನು ಕಾಣಬಹುದಾಗಿದೆ:

1) ಅವನ ಪೋಷಕರ ಪಾಲನೆ

ಪೌಲನು ತನ್ನ ಸ್ವಂತ ಮತ್ತು ತಿಮೊಥೆಯ ಪೂರ್ವಜರನ್ನು ಉಲ್ಲೇಖಿಸುತ್ತಾನೆ, ಹಾಗೆಯೇ ಅವರಿಬ್ಬರೂ ಹಂಚಿಕೊಂಡ ಯೆಹೂದಿ ಪರಂಪರೆಯನ್ನು ಸಹ ಉಲ್ಲೇಖಿಸುತ್ತಿದ್ದಾನೆ. ಆತನು ಅವರ ವಾಕ್ಯದ ಕುರಿತ ಜ್ಞಾನ ಮತ್ತು ಅವರ ದೈವಿಕ ಜೀವನಗಳ ಕುರಿತು ಉಲ್ಲೇಖಿಸುತ್ತಿದ್ದಾನೆ. ತಿಮೊಥೆಯು ದೈವಿಕ ಕುಟುಂಬದ ಹಿನ್ನಲೆಯಿಂದ ಬಂದವನಾಗಿದ್ದಾನೆ. ಆತನ ತಂದೆ ಗ್ರೀಕ್ ಮೂಲದವರು ಮತ್ತು ತಾಯಿಯು ಯೆಹೂದ್ಯ ಹಿನ್ನಲೆಯುಳ್ಳವರಾಗಿದ್ದರು, ಹೀಗೆ ಆತನು ಮಿಶ್ರಣ ಸಂಸ್ಕೃತಿಯ ಹಿನ್ನಲೆಯಿಂದ ಬಂದವನಾಗಿದ್ದನು (ಅಪೊ.ಕೃತ್ಯ. 16:1). ಅವನ ತಾಯಿಯಾದ ಯೂನೀಕೆಯು ಸಹ ನಿಷ್ಕಪಟವಾದ ನಂಬಿಕೆಯುಳ್ಳವಳಾಗಿದ್ದಳು. ಪೌಲನು ತನ್ನ ಮೊದಲ ಸುವಾರ್ತಾ ಪ್ರಯಾಣದಲ್ಲಿ ಲುಸ್ತ್ರಕ್ಕೆ ಸುವಾರ್ತೆಯನ್ನು ತಂದಾಗ ಪ್ರಾಯಶಃ ಈ ಮೂರು ಜನ ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟರು (ಅಪೊ.ಕೃತ್ಯ. 14), ಯಾಕೆಂದರೆ ಪೌಲನು ತನ್ನ ಎರಡನೇಯ ಪ್ರಯಾಣದಲ್ಲಿ ಹಿಂತಿರುಗಿದಾಗ ತಿಮೊಥೆಯು ಒಬ್ಬ ವಿಶ್ವಾಸಿಯಾಗಿದ್ದನು (ಅಪೊ.ಕೃತ್ಯ. 16:1).

2) ಅವನ ಆತ್ಮಿಕ ಸ್ನೇಹತ್ವ

ನಮ್ಮ ಕುಟುಂಬದವರನ್ನು ಹೊರತುಪಡಿಸಿ ನಮ್ಮ ಮೇಲೆ ಹೆಚ್ಚು ಪ್ರಭಾವವನ್ನು ಬೀರುವವರು ನಮ್ಮ ಸ್ನೇಹಿತರಾಗಿದ್ದಾರೆ. ತಿಮೊಥೆಯು ಪೌಲನನ್ನು ಒಬ್ಬ ಅತ್ಯುತ್ತಮ ಶಿಕ್ಷಕ ಮತ್ತು ಸ್ನೇಹಿತನಾಗಿ ಹೊಂದಿದ್ದನು. ಅವರಿಬ್ಬರು ಅತೀ ನಿಕಟವಾದ ಸಂಬಂಧವನ್ನು ಹೊಂದಿದವರಾಗಿದ್ದರು. ಅವರಿಬ್ಬರು ಅಗಲುವಾಗ ತಿಮೊಥೆಯು ಅಳುತಿದ್ದನು ಮತ್ತು ಪೌಲನು ಹಗಲು ರಾತ್ರಿ ಅವನಿಗಾಗಿ ಹಾತೊರೆಯುತ್ತಿದ್ದನು. ಇಂತಹ ಕ್ರೈಸ್ತ ಸ್ನೇಹತ್ವವು ತಿಮೊಥೆಯನ್ನು ರೂಪಿಸುವಲ್ಲಿಯೂ ಮತ್ತು ಅವನು ಕ್ರಿಸ್ತನಲ್ಲಿ ಬಲಹೊಂದಿ ಪೋಷಿಸಲ್ಪಡುವಲ್ಲಿ ಪ್ರಬಲವಾದ ಪರಿಣಾಮವನ್ನು ಬೀರಿತ್ತು.

3) ಅವನ ವಿಶೇಷವಾದ ಕೊಡುಗೆ

ದೇವರು ತಿಮೊಥೆಯನಿಗೆ ಒಳ್ಳೆಯ ಪಾಲನೆ ಮತ್ತು ಸ್ನೇಹಿತರನ್ನು ಕೊಟ್ಟಿದ್ದನು, ಹಾಗೆಯೇ ಆತನ ಮೇಲೆ ವಿಶೇಷವಾದ ವರಗಳನ್ನು ಸಹ ಕೊಟ್ಟಿದ್ದರು, ನೋಡಿರಿ 1:6. ಯಾವ ದೇವರ ವರವನ್ನು ಆತನು ಹೊಂದಿದ್ದನೆಂಬುದು ನಮಗೆ ತಿಳಿದಿಲ್ಲ ಮತ್ತು ಸತ್ಯವೇದವು ಸಹ ಇದರ ಕುರಿತು ನಮಗೆ ಏನನ್ನು ತಿಳಿಸುವುದಿಲ್ಲ. ಆದರೆ ತಿಮೊಥೆಯು ಸಭಾಪಾಲಕನಾಗಿಯೂ ಮತ್ತು ಬೋಧಕನಾಗಿಯೂ ಸೇವೆ ಮಾಡುವುದಕ್ಕಾಗಿ ಪೌಲನಿಂದ ಹಸ್ತಾರ್ಪಣೆಯನ್ನು ಹೊಂದಿದವನಾಗಿರುವುದನ್ನು ನಾವು ಅರ್ಥಮಾಡಿಕೊಳ್ಳಬಹುದಾಗಿದೆ. ಇದನ್ನೇ ಪೌಲನು ಸೂಚಿಸುತ್ತಿರಬಹುದು ಅಥವಾ ತಿಮೊಥೆಯು ಹೊಂದಿದ್ದ ನಿರ್ದಿಷ್ಟವಾದ ವರವನ್ನು ಆತನ ಸುತ್ತಲಿರುವ ಜನರು ಆತನಲ್ಲಿರುವುದನ್ನು ತಿಳಿದಿರುವಂತಹದ್ದಾಗಿರಬಹುದು.

4) ಅವನ ವೈಯಕ್ತಿಕ ಶಿಸ್ತು

ನೈಸರ್ಗಿಕವಾದ ಮತ್ತು ಆತ್ಮೀಕವಾದ ಎಲ್ಲಾ ದೇವರ ವರಗಳನ್ನು ಅಭಿವೃದ್ಧಿಪಡಿಸಬೇಕು ಮತ್ತು ಉಪಯೋಗಿಸಬೇಕು. ಪೌಲನು ಮೊದಲನೇಯ ತಿಮೊಥೆಯಲ್ಲಿ ತಿಮೊಥೆಗೆ ತನ್ನ ವರಗಳನ್ನು ನಿರ್ಲಕ್ಷಿಸಬೇಡವೆಂದು ಹೇಳಿದನು (4:14). ಈಗ ಅವನು ತನ್ನ ಸ್ನೇಹಿತನು ಮತ್ತು ಯುವ ಶಿಷ್ಯನಿಗೆ ತನ್ನಲ್ಲಿರುವ ವರವನ್ನು ಬೆಳಗಿಸುವಂತೆ ಉತ್ತೇಜಿಸುತ್ತಿದ್ದಾನೆ. ದೇವರು ನಮ್ಮ ಜೀವಿತಗಳಲ್ಲಿ ಕೊಟ್ಟಂತಹ ವರಗಳನ್ನು ಆತನ ಮಹಿಮೆಗಾಗಿ ಉಪಯೋಗಿಸಬೇಕೇ ಹೊರತು ಅದನ್ನು ಹಾಗೆ ಬಳಸದೆ ಇಟ್ಟುಕೊಳ್ಳಬಾರದು.

ತಿಮೊಥೆಯ ಅಜ್ಜಿ ಮತ್ತು ಆತನ ತಾಯಿಯು ಅವನಿಗೆ ದೇವರ ವಾಕ್ಯಗಳನ್ನು ಬೋಧಿಸಿದರು ಹಾಗೂ ಅವರು ಅವನನ್ನು ದೇವರ ಹತ್ತಿರಕ್ಕೆ ನಡೆಸಿದರು. ಪೌಲನು ಆತನನ್ನು ಕ್ರಿಸ್ತನ ಬಳಿಯಲ್ಲಿ ಕರೆತಂದನು, ಅವನ ಸ್ನೇಹಿತನಾದನು, ಅವನಿಗಾಗಿ ಪ್ರಾರ್ಥಿಸಿದನು, ಅವನಿಗಾಗಿ ಪತ್ರಗಳನ್ನು ಬರೆದನು, ಅವನನ್ನು ಪ್ರೋತ್ಸಾಯಿಸಿದನು ಮತ್ತು ತರಬೇತಿಗೊಳಿಸಿದನು. ಆದರೆ ದೇವರು ಮಾತ್ರ ತಿಮೊಥೆಗೆ ವಿಶೇಷ ವರಗಳನ್ನು ನೀಡಬಲ್ಲನು. ಈಗ ತಿಮೊಥೆಯ ಜೀವಿತದಲ್ಲಿ ದೇವರು ಇರಿಸಿರುವ ವರವನ್ನು ಅಭಿವೃದ್ಧಿಪಡಿಸುವುದು ಆತನಿಗೆ ಬಿಟ್ಟದ್ದು. ಆತನು ದೇವರ ವರದೊಂದಿಗೆ ಸ್ವಯಂ ಶಿಸ್ತನ್ನು ಸೇರಿಸಬೇಕಾಗಿತ್ತು.

ಚರ್ಚಿಸಿರಿ

ಮೇಲಿರುವ ನಾಲ್ಕು ಅಂಶಗಳ ಬೆಳಕಿನಲ್ಲಿ ನಿಮ್ಮ ಸ್ವಂತ ಜೀವಿತವನ್ನು ಪ್ರತಿಬಿಂಬಿಸಿರಿ.

ಈ ಪ್ರಶ್ನೆಗಳನ್ನು ನೀವು ಉಪಯೋಗಿಸಬಹುದು:

- ತಿಮೊಥೆಯ ಜೀವಿತವನ್ನು ರೂಪಿಸಿದ ನಾಲ್ಕು ಪ್ರಮುಖ ಪ್ರಭಾವ ಬೀರಿದ ಅಂಶಗಳನ್ನು ಪುನರಾವರ್ತಿಸಿರಿ. ನಿಮ್ಮ ಸ್ವಂತ ಜೀವಿತದಲ್ಲಿ ಇದೇ ರೀತಿಯ ಅಂಶಗಳು ಕಾರ್ಯ ಮಾಡಿದ್ದರ ಬಗ್ಗೆ ನಿಮಗೆ ತಿಳಿದಿದೆಯೇ?
- ಮಾರ್ಗದರ್ಶಕರು ಮತ್ತು ನಂಬಿಕೆಯಲ್ಲಿರುವ ಸ್ನೇಹಿತರು ಯಾಕೆ ಪ್ರಾಮುಖ್ಯರಾಗಿದ್ದಾರೆ? ನಿಮ್ಮ ಕ್ರೈಸ್ತೀಯ ಜೀವಿತದಲ್ಲಿ ನೀವು ಮಾರ್ಗದರ್ಶಕರನ್ನು ಮತ್ತು ಸ್ನೇಹಿತರನ್ನು ಹೊಂದಿದ್ದೀರೋ? ಇಲ್ಲವಾದರೆ ಇಂತಹ ಜನರನ್ನು ಹುಡುಕಲು ನೀವು ಏನಾದರೂ ಮಾಡಬಹುದೇ?
- ನೀವು ಪರಸ್ಪರ ಮತ್ತು ನಿಮ್ಮಲ್ಲಿರುವ ಯಾವ ಆತ್ಮೀಕ ಮತ್ತು ನೈಸರ್ಗಿಕ ವರಗಳನ್ನು ನೋಡುವಿರಿ? ಅವುಗಳನ್ನು ನೀವು ಉಪಯೋಗಿಸುತ್ತಿದ್ದೀರೋ?

2. ಸುವಾರ್ತೆ

ನಂತರದಲ್ಲಿ ಪೌಲನು ಅಧ್ಯಾಯ 1 ರಲ್ಲಿ ಸುವಾರ್ತೆಯ ಕುರಿತು ಬರೆಯುತ್ತಿದ್ದಾನೆ. ವ. 8 ರಲ್ಲಿ ಆತನು ತಿಮೊಥೆಯು ಸುವಾರ್ತೆಯ ಕುರಿತಾಗಲಿ, ಅದರ ಸಾಕ್ಷಿ ಮತ್ತು ಆತನ ಸೇವಕನ ಕುರಿತಾಗಲಿ ನಾಚಿಕೆಪಡಬಾರದೆಂದು ಹೇಳುತ್ತಿದ್ದಾನೆ. ನಾವು ಪೌಲನ ಪ್ರಾಮುಖ್ಯವಾದ ಅಂಶವನ್ನು ಗುರುತಿಸುತ್ತೇವೆ. ನಾವು ದೇವರ ಕರೆಯುವಿಕೆ, ಕೃಪೆ ಮತ್ತು ಉದ್ದೇಶದಿಂದ ಕ್ರಿಸ್ತ ಯೇಸುವಿನಲ್ಲಿ ರಕ್ಷಿಸಲ್ಪಟ್ಟವರಾಗಿದ್ದೇವೆ ಹೊರತು ನಮ್ಮ ಸ್ವಂತ ಕಾರ್ಯಗಳಿಂದಲ್ಲ. ಪೌಲನು ಮುದುಕನಾಗಿದ್ದು ದಮಸ್ಕ ರಸ್ತೆಯಲ್ಲಿ ಯೇಸು ಅವನಿಗೆ ಕಾಣಿಸಿಕೊಂಡಾಗಿನಿಂದ ಅನೇಕ ವರ್ಷಗಳು ಕಳೆದಿವೆ. ಆದರೆ ಸುವಾರ್ತೆಯು ಪೌಲನು ಮೊದಲು ಅದನ್ನು ಸ್ವೀಕರಿಸುವಾಗ ಮತ್ತು ಅನುಭವಿಸುವಾಗ ಹೇಗಿತ್ತೋ ಹಾಗೆಯೇ ಇದೆ. ಪೌಲನು ತನ್ನ ಪತ್ರಿಕೆಯಾಧ್ಯಂತ ಅದೇ ಸುವಾರ್ತೆಯನ್ನು ಬೋಧಿಸುವುದನ್ನು ನಾವು ಕಾಣಬಹುದಾಗಿದೆ.

ಎರಡನೇ ತಿಮೊಥೆ 1:10 ರಲ್ಲಿ ಪೌಲನು ಸುವಾರ್ತೆಯ ಕುರಿತು ಎರಡು ಅಂಶಗಳನ್ನು ತಿಳಿಸುತ್ತಿದ್ದಾನೆ. ಮೊದಲನೇಯ ಅಂಶವು ಪ್ರಶ್ನೆಗೆ ಉತ್ತರವನ್ನು ತಿಳಿಸುತ್ತದೆ: ಯೇಸು ಏನನ್ನು ಸಾಧಿಸಿದನು? ಎರಡನೇಯ ಅಂಶವು ಪ್ರಶ್ನೆಗೆ ಉತ್ತರವನ್ನು ತಿಳಿಸುತ್ತದೆ: ಯೇಸುವಿನ ಸುವಾರ್ತೆಯು ಏನನ್ನು ಸಾಧಿಸಿತು?

ಅ. ಯೇಸು ಕ್ರಿಸ್ತನು ಏನನ್ನು ಸಾಧಿಸಿದನು: ಆತನು ಮರಣವನ್ನು ರದ್ದುಗೊಳಿಸಿದನು.

ಮರಣವು ಪಾಪದ ಪರಿಣಾಮವಾಗಿ ನಮ್ಮ ಮಾನವ ಪರಿಸ್ಥಿತಿಯನ್ನು ಸಾರಾಂಶಗೊಳಿಸುವ ಪದವಾಗಿದೆ. ಮರಣವು ಪಾಪದ ಪರಿಣಾಮವಾಗಿದೆ (ರೋಮಾ. 6:23). ಸತ್ಯವೇದವು ಮರಣದ ಕುರಿತು ಮೂರು ರೀತಿಯಲ್ಲಿ ಮಾತನಾಡುತ್ತದೆ. ದೇಹವು ಸತ್ತಾಗ ದೈಹಿಕ ಸಾವಾಗುತ್ತದೆ. ಆತ್ಮವು ಸತ್ತಾಗ ಆತ್ಮೀಕ ಸಾವಾಗುತ್ತದೆ. ಮತ್ತು ನಿತ್ಯತ್ವದ ಮರಣವಿದೆ, ಶರೀರ ಮತ್ತು ಆತ್ಮವು ದೇವರಿಂದ ಶಾಶ್ವತವಾಗಿ ಬೇರ್ಪಡುವುದಾಗಿದೆ. ಎಲ್ಲಾ ಮರಣವು ಪಾಪದ ಫಲಿತಾಂಶವಾಗಿದೆ. ಮರಣವು ಭಯಾನಕವಾದದ್ದು ಆದರೆ ಅದು ಪಾಪದ ಫಲಿತಾಂಶವಾಗಿದೆ.

ಆದರೆ ಯೇಸು ಮರಣವನ್ನು ರದ್ದುಗೊಳಿಸಿದ್ದಾನೆ. ಎಲ್ಲಾ ಮರಣ ಸಂಪೂರ್ಣವಾಗಿ ನಿರ್ಮೂಲನೆಯಾಗಿದೆ ಎಂದು ಇದರ ಅರ್ಥವಲ್ಲ. ಇದು ನಮ್ಮ ದೈನಂದಿನ ಅನುಭವದಿಂದ ಸ್ಪಷ್ಟವಾಗುತ್ತದೆ. ಸಾವಿನ ಅಂತಿಮ ವಿನಾಶನವು ಭವಿಷ್ಯದಲ್ಲಿ ಇನ್ನೂ ಇದೆ ಎಂಬುದಾಗಿ ಪೌಲನು ಕೊರಿಂಥ ಸಭೆಗೆ ಮೊದಲೇ ಬರೆದಿದ್ದನು. ಇದು ನಾಶವಾಗುವ ದೇವರ ಕೊನೆಯ ಶತ್ರುವಾಗಿದೆ. ಯೇಸು ಕ್ರಿಸ್ತನ ಎರಡನೇಯ ಬರೋಣದವರೆಗೂ ನಾವು ಮರಣವು ವಿಜಯದಲ್ಲಿ ನುಂಗಲ್ಪಟ್ಟಿದೆ ಎಂದು ಘೋಷಿಸಲು ಸಾಧ್ಯವಿಲ್ಲ (1 ಕೊರಿ. 15:26, 54).



ಆದರೆ ಕ್ರಿಸ್ತನು ಸಾವನ್ನು ಸೋಲಿಸಿದನು ಮತ್ತು ಅದನ್ನು ದುರ್ಬಲಗೊಳಿಸಿದನು. 1 ಕೊರಿ. 15:55 ರಲ್ಲಿ ಪೌಲನು ಕ್ರಿಸ್ತನ ರಕ್ಷಣೆಯ ಕಾರ್ಯದ ಮೂಲಕ ಮರಣಕ್ಕೆ ಏನಾಯಿತು ಎಂಬುದನ್ನು ವಿವರಿಸಲು ಎರಡು ರೂಪಾಲಂಕಾರಗಳನ್ನು ಬಳಸುತ್ತಿದ್ದಾನೆ: ಮರಣವೇ, ನಿನ್ನ ಜಯವೆಲ್ಲಿ? ಮರಣವೇ, ನಿನ್ನ ವಿಷದ ಕೊಂಡಿ ಎಲ್ಲಿ? ಮರಣವು ತನ್ನ ಸೈನ್ಯವು ಸೋಲಿಸಲ್ಪಟ್ಟ ಮಿಲಿಟರಿ ಕಮಾಂಡರ್‌ನಂತೆ ಮತ್ತು ಕೊಂಡಿಯನ್ನು ತೆಗೆದ ಚೇಳಿನಂತೆ ಆಗಿದೆ.

ಮರಣವಾಗಲಿ, ಪಾಪವಾಗಲೀ, ನಮ್ಮ ಬಿದ್ದುಹೋದ ಮನುಷ್ಯನ ಸ್ವಭಾವವಾಗಲೀ, ದೆವ್ವವಾಗಲೀ ಇನ್ನೂ ಸಂಪೂರ್ಣವಾಗಿ ನಿರ್ಮೂಲವಾಗಿಲ್ಲ. ಆದರೆ ಕ್ರಿಸ್ತನ ಬಲದಿಂದ ಕ್ರಿಸ್ತನಲ್ಲಿರುವ ನಮ್ಮ ಮೇಲೆ ಅವುಗಳ ದಬ್ಬಾಳಿಕೆಯ ನಿಯಂತ್ರಣವು ಮುರಿದುಹೋಗಿದೆ. ಕ್ರಿಸ್ತನಲ್ಲಿರುವ ನಾವುಗಳು ಸ್ವಂತಂತ್ರರಾಗಿದ್ದೇವೆ.

ಆ. ಸುವಾರ್ತೆಯು ಏನನ್ನು ಸಾಧಿಸುತ್ತದೆ: ಯೇಸು ಕ್ರಿಸ್ತನ ಸುವಾರ್ತೆಯು ಜೀವ ಮತ್ತು ಅಮರತ್ವವನ್ನು ಬೆಳಕಿಗೆ ತರುತ್ತದೆ.

ಯೇಸು ಕ್ರಿಸ್ತನು ತನ್ನ ಮರಣ ಮತ್ತು ಪುನರುತ್ಥಾನಗಳ ಮೂಲಕ ಮರಣವನ್ನು ರದ್ದುಗೊಳಿಸಿದನು ಮತ್ತು ಸುವಾರ್ತೆಯ ಮೂಲಕ ಅಮರತ್ವವನ್ನು ಮತ್ತು ನಿತ್ಯತೆಯನ್ನು ತಾನು ಸಾಧಿಸಿದ್ದ ಈ ಒಳ್ಳೆಯ ಸುದ್ದಿಯನ್ನು ಆತನು ಪ್ರಕಟಿಸುವವನಾಗಿರುತ್ತಾನೆ, ಆತನು ಅವರಿಗಾಗಿ ಜಯಿಸಿದ್ದಾನೆ. ಬರೀ ಜೀವನವನ್ನಲ್ಲ ಆದರೆ ನಿತ್ಯತ್ವದ ಜೀವನವನ್ನು, ಮರಣವಿಲ್ಲದ ಜೀವನ, ಅಮರತ್ವವುಳ್ಳ ಜೀವನ.

ಸುವಾರ್ತೆಯನ್ನು ಉಳಿಸುವುದಕ್ಕೆ ದೇವರು ಮೂಲವಾಗಿದ್ದಾನೆ, ಆತನು ಅದನ್ನು ಯೋಜಿಸಿ ಸಮಯಕ್ಕೂ ಮತ್ತು ಇತಿಹಾಸಕ್ಕೂ ಮೊದಲೇ ನಮಗೆ ಯೇಸು ಕ್ರಿಸ್ತನ ಮೂಲಕ ಕೊಟ್ಟನು. ನಾವು ಜನಿಸುವುದಕ್ಕೆ ಮುಂಚೆ ಮತ್ತು ನಾವು ಯಾವುದೇ ಪುಣ್ಯಕ್ರಿಯೆಗಳನ್ನು ಮಾಡುವುದಕ್ಕೆ ಮುಂಚೆನೇ ದೇವರ ಕೃಪೆಯು ನಮಗೆ ಕೊಡಲ್ಪಟ್ಟಿತು. ನಮ್ಮ ರಕ್ಷಣೆಯ ಸಂಪನ್ಮೂಲವು ನಮ್ಮ ಪುಣ್ಯಕ್ರಿಯೆಗಳಿಂದಲ್ಲ ಆದರೆ ದೇವರಿಂದಲೂ ಮತ್ತು ರಕ್ಷಣೆಯ ಕಾರ್ಯವನ್ನು ಮಾಡಿದ ಯೇಸು ಕ್ರಿಸ್ತನಿಂದಲೇ ಉಂಟಾಗಿದೆ.

ಚರ್ಚಿಸಿರಿ

- ಯೇಸುವಿನ ಜಯದ ಮೂಲಕ ಮರಣಕ್ಕೆ ಏನಾಯಿತು ಎಂಬುದನ್ನು ವಿವರಿಸಿರಿ.
- ಜನರು ಇನ್ನೂ ಯಾಕೆ ಸಾಯುತ್ತಾರೆ? ಸಾವಿನ ಕುರಿತು ಭಯಭ್ರಾಂತನಾಗಿ ಚಿಂತೆಗೆ ಒಳಗಾಗಿರುವ ವ್ಯಕ್ತಿಗೆ ನೀವು ಹೇಗೆ ಸಂತೈಸಿ ಸಲಹೆಯನ್ನು ನೀಡುವಿರಿ?

3. ಸುವಾರ್ತೆಗೆ ನಮ್ಮ ಕರ್ತವ್ಯಗಳು

ವಿಶ್ವಾಸಿಗಳಾಗಿರುವ ನಮಗೆ ಸುವಾರ್ತೆಯ ಕರ್ತವ್ಯಗಳುಂಟು. ಸಹಜವಾಗಿ, ಸುವಾರ್ತೆಗೆ ಒಬ್ಬ ವ್ಯಕ್ತಿಯ ಮೊದಲ ಕರ್ತವ್ಯದ ಕುರಿತು ನೀವು ಪೌಲನಿಗೆ ಕೇಳಿದ್ದರೆ, ಅವರು ಅದನ್ನು ಸ್ವೀಕರಿಸುವುದು ಮತ್ತು ಅದರ ಮೂಲಕ ಬದುಕುವುದು ಎಂದು ಸ್ವಭಾವಿಕವಾಗಿ ಹೇಳುತ್ತಿದ್ದರು. ಆದರೆ 1:11-18 ರಲ್ಲಿ ಪೌಲನ ಗಮನವು ನಂಬಿಕೆಯಲ್ಲಿ ಇಲ್ಲದವರ ಕುರಿತಲ್ಲ ಆದರೆ ಸುವಾರ್ತೆಯನ್ನು ಸ್ವೀಕರಿಸಿದ ನಮ್ಮ ಕುರಿತದ್ದಾಗಿದೆ. ಸುವಾರ್ತೆ ಕ್ರೈಸ್ತರಾದ ನಮ್ಮ ಮೂರು ಕರ್ತವ್ಯಗಳನ್ನು ಗುರುತಿಸಬಹುದಾಗಿದೆ:

ಅ. ಸುವಾರ್ತೆಯನ್ನು ತಿಳಿಸುವುದು ನಮ್ಮ ಕರ್ತವ್ಯವಾಗಿದೆ, 1:11

ಇಲ್ಲಿ ಪೌಲನು ತನ್ನನ್ನು ತಾನೇ ಒಂದು ಉದಾಹರಣೆಯನ್ನಾಗಿ ಮಾಡಿಕೊಳ್ಳುತ್ತಿದ್ದಾನೆ. ಆತನು ಸುವಾರ್ತೆಯನ್ನು ಸಾರುವುದಕ್ಕಾಗಿ ಮತ್ತು ಬೋಧಿಸುವುದಕ್ಕಾಗಿ ನೇಮಿಸಲ್ಪಟ್ಟವನಾಗಿದ್ದನು. ಅದೇ ರೀತಿಯಾಗಿ ದೇವರು ನಮ್ಮ ಜೀವಿತದಲ್ಲೂ ಹಾಗೂ ಇನ್ನೂ ಅಧಿಕವಾಗಿ ಪ್ರಪಂಚಕ್ಕಾಗಿಯೂ ಮತ್ತು ಪ್ರತಿಯೊಬ್ಬ ವ್ಯಕ್ತಿಗಳಿಗಾಗಿಯೂ ಏನನ್ನು ಮಾಡಿದ್ದಾನೆ ಎಂಬುದರ ಕುರಿತು ನಾವು ಸಾಕ್ಷೀಕರಿಸುವಂತವರಾಗಿರಬೇಕು.

ಆ. ಸುವಾರ್ತೆಗಾಗಿ ಶ್ರಮೆಯನ್ನು ಅನುಭವಿಸುವುದು ನಮ್ಮ ಕರ್ತವ್ಯವಾಗಿದೆ, 1:12

ಈಗಾಗಲೇ ವ. 8 ರಲ್ಲಿ ಪೌಲನು ಸುವಾರ್ತೆಗಾಗಿ ಶ್ರಮೆಯ ಪಾಲನ್ನು ತೆಗೆದುಕೊಳ್ಳುವಂತೆ ತಿಮೊಥೆಗೆ ಹೇಳಿದ್ದನು ಮತ್ತು ಎರಡನೇಯ ಅಧ್ಯಾಯದಲ್ಲಿ ಶ್ರಮೆಯ ಕುರಿತು ಇನ್ನೂ ಹೆಚ್ಚು ಆಳವಾಗಿ ಬರೆಯುತ್ತಾನೆ.

ಇ. ಸುವಾರ್ತೆಯನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ, 1:12-18

ಸುವಾರ್ತೆಯು ದೇವರಿಂದ ಕೊಡಲ್ಪಟ್ಟ ಶುದ್ಧವಾದ ಉಡುಗೊರೆಯಾಗಿದೆ ಮತ್ತು ಉತ್ತಮವಾದ ನಿಧಿಯಾಗಿದೆ (ವ. 14). ಸತ್ಯವಾದ ಸುವಾರ್ತೆಯನ್ನು ಬೋಧಿಸುವಂತಹದ್ದು ಒಳ್ಳೆಯ ಮತ್ತು ಆರೋಗ್ಯಕರ ವಿಷಯವಾಗಿದೆ. ಪೌಲನು ತಿಮೊಥೆಗೆ ಸತ್ಯವಾದ ಸುವಾರ್ತೆಯನ್ನು ಬಿಟ್ಟು ಹೋಗಬಾರದೆಂದು ಹೇಳುತ್ತಾನೆ. ಸುವಾರ್ತೆಯನ್ನು ಸಾರುವಂತಹದ್ದು ಕ್ರಿಸ್ತನಲ್ಲಿರುವ ಪ್ರೀತಿ ಮತ್ತು ನಂಬಿಕೆಯನ್ನು ತೋರಿಸುವಂತಹದ್ದಾಗಿದೆ.

ತಿಮೊಥೆಯು ಸುವಾರ್ತೆಯನ್ನು ಕಾಯುವಂತವನಾಗಿರಬೇಕು. ಸುಳ್ಳುಬೋಧಕರು ಶುದ್ಧವಾದ ಸುವಾರ್ತೆಯನ್ನು ಕಲುಷಿತಗೊಳಿಸಲು ಮತ್ತು ಭ್ರಷ್ಟಗೊಳಿಸಲು ಸಿದ್ಧರಿದ್ದಾರೆ ಮತ್ತು ಸಭೆಯಲ್ಲಿ ಕೊಡಲ್ಪಟ್ಟಿರುವ ಅಮೂಲ್ಯವಾದ ಶುದ್ಧ ಉಡುಗೊರೆಯನ್ನು ದೋಚುವಂತವರಾಗಿದ್ದಾರೆ.

ಆಸ್ಯ ಸೀಮೆಯಲ್ಲಿ ಏನೋ ಸಂಭವಿಸಿದೆ ಎಂಬುದಾಗಿ ಪೌಲನು ಸೂಚಿಸುತ್ತಿದ್ದಾನೆ, ಎಲ್ಲರು ಅವರ ವಿರುದ್ಧವಾಗಿ ತಿರುಗಿಕೊಳ್ಳುವಂತೆ ಏನು ಉಂಟಾಯಿತೆಂಬುದು ನಮಗೆ ತಿಳಿದಿಲ್ಲ. ಆದರೆ ತಿಮೊಥೆಯು ಸುವಾರ್ತೆಗೆ ಕಾವಲುಗಾರನಾಗುವಂತೆ ಹೇಳುವ ಕಾರ್ಯವು ವಿಷಯದ ಗಂಭೀರತೆಯನ್ನು ಬಹಿರಂಗಪಡಿಸುತ್ತದೆ.

ಸುವಾರ್ತೆಗೆ ಕಾವಲುಗಾರನಾಗಿರುವಂತಹ ಮಹತ್ತರವಾದ ಕಾರ್ಯದಲ್ಲಿ ತಿಮೊಥೆಯು ಒಂಟಿಗನಲ್ಲ. ಆತನು ತನ್ನಲ್ಲಿ ವಾಸಿಸುವ ಮತ್ತು ತನ್ನ ಮೂಲಕ ಕಾರ್ಯವನ್ನು ಮಾಡುವ ಪವಿತ್ರಾತ್ಮನ ಪ್ರಸನ್ನತೆಯನ್ನು ಆತುಕೊಳ್ಳುವಂತವನಾಗಿರಬೇಕು (ವ. 14). ಈ ಕಾರ್ಯವು ತಿಮೊಥೆಗೆ ಪ್ರಬಲವಾದ ಮತ್ತು ಅಸಾಧ್ಯವಾಗಿ ಕಾಣಲ್ಪಡಬಹುದು, ಆದರೆ ದೇವರು ಆತನ ಪರವಾಗಿ ನಿಂತಿದ್ದಾನೆ ಮತ್ತು ಅವನನ್ನು ಉತ್ತೇಜಿಸುತ್ತಾನೆ. ದೇವರೇ ಸುವಾರ್ತೆಗೆ ಅಂತಿಮವಾಗಿ ಜವಬ್ದಾರನಾಗಿರುತ್ತಾನೆ. ಆತನೇ ಅದರ ಸರ್ವಶ್ರೇಷ್ಠ ರಕ್ಷಕನಾಗಿದ್ದಾನೆ ಮತ್ತು ಕ್ರೈಸ್ತ ವಿಶ್ವಾಸಿಗಳು ಆತನ ಸಹಾಯಕರುಗಳಾಗಿದ್ದಾರೆ. ಸಭೆಗೆ ಆತನು ನೀಡಿದ ಸತ್ಯವನ್ನು ಆತನು ಕಾಪಾಡುವವನಾಗಿರುತ್ತಾನೆ.

ಅಧ್ಯಾಯ 2: ಸುವಾರ್ತೆಗಾಗಿ ಶ್ರಮೆಯನ್ನು ಅನುಭವಿಸಲು ಅಪ್ಪಣೆಯನ್ನು ಕೊಡುವುದು

1. ಬಲಶಾಲಿಯಾಗಿದ್ದು ಸುವಾರ್ತೆಯ ಸತ್ಯವನ್ನು ಕಾಪಾಡುವುದು !!

ಅಸ್ಯ ಸೀಮೆಯ ಕ್ರೈಸ್ತ ವಿಶ್ವಾಸಿಗಳ ಮಧ್ಯದಲ್ಲಿರುವ ಹಿಂಜಾರಿರುವವರ ಕುರಿತ ಪೌಲನ ಕಾಳಜಿಯೊಂದಿಗೆ ಮೊದಲನೇಯ ಅಧ್ಯಾಯವು ಕೊನೆಗೊಳ್ಳುತ್ತದೆ. ಆದ್ದರಿಂದ ಪೌಲನು ಅಧ್ಯಾಯ 2ನ್ನು ತಿಮೊಥೆಯು ಕ್ರಿಸ್ತನಲ್ಲಿ ದೃಢವಾಗಿದ್ದು ಸಾಮಾನ್ಯವಾಗಿರುವ ಕ್ರಿಸ್ತ ನಂಬಿಕೆಯಲ್ಲಿ ದೃಢವಿಲ್ಲದ ಪ್ರವೃತ್ತಿಯ ವಿರುದ್ಧ ನಿಂತುಕೊಳ್ಳುವ ಒತ್ತಾಯದ ಮುಖಾಂತರ ಪ್ರಾರಂಭಿಸುತ್ತಾನೆ. ತಿಮೊಥೆಯು ಕ್ರಿಸ್ತನಲ್ಲಿ ದೃಢವಾಗಿರಬೇಕೆಂದು ಮತ್ತು ಸೇವೆಗಾಗಿ ತನ್ನ ಸಂಪನ್ಮೂಲಗಳನ್ನು ತಾನೇ ಸ್ವಂತ ತನ್ನ ಪ್ರಯತ್ನದಲ್ಲಿ ಹೊಂದಿಕೊಳ್ಳುವುದಲ್ಲ, ಆದರೆ ಕ್ರಿಸ್ತನ ಕೃಪೆಯಿಂದ ಹೊಂದಿಕೊಳ್ಳಬೇಕೆಂಬುದನ್ನು ನಿರೀಕ್ಷಿಸಲಾಗಿರುವುದನ್ನು ಗಮನಿಸಿ.

ತಿಮೊಥೆಯು ಸತ್ಯವನ್ನು ಸಂರಕ್ಷಿಸುವುದಕ್ಕಾಗಿ ಮತ್ತು ಸುವಾರ್ತೆಯನ್ನು ಕಾಪಾಡಲು ಹಾಗೂ ಅದನ್ನು ಮುಂದಿನ ಪೀಳಿಗೆಗೆ ರವಾನಿಸುವುದಕ್ಕಾಗಿ ಕರೆಯಲ್ಪಟ್ಟಿದ್ದಾನೆ. ಪೌಲನು ಈ ಹಾದು ಹೋಗುವಿಕೆಯನ್ನು ನಾಲ್ಕು ಹಂತಗಳಲ್ಲಿ ವಿವರಿಸುತ್ತಾನೆ:

1. ಸತ್ಯವು ಕ್ರಿಸ್ತನಿಂದ ಪೌಲನಿಗೆ ಒಪ್ಪಿಸಲ್ಪಟ್ಟಿದೆ (1:12)
2. ಪೌಲನು ಸ್ವೀಕರಿಸಿದ ಈ ಸತ್ಯವನ್ನು ಅವನು ತಿಮೊಥೆಗೆ ಒಪ್ಪಿಸಿದನು (1:14)
3. ತಿಮೊಥೆಯು ತನ್ನ ಸರದಿಯಲ್ಲಿ ಈ ಸತ್ಯವನ್ನು ವಿಶ್ವಾಸಾರ್ಹ ಜನರಿಗೆ ಒಪ್ಪಿಸುತ್ತಾನೆ (2:2)
4. ಈ ವಿಶ್ವಾಸಾರ್ಹ ಜನರು ನಂತರದಲ್ಲಿ ಇತರರಿಗೆ ಕಲಿಸುವಂತವರಾಗಿರುತ್ತಾರೆ (2:2)

ಚರ್ಚಿಸಿರಿ

ಗುಂಪಿನಲ್ಲಿ ಸತ್ಯವನ್ನು ಹಸ್ತಾಂತರಿಸುವ ನಾಲ್ಕು ಹಂತಗಳನ್ನು ಪುನರಾವರ್ತಿಸಿರಿ. ಇಂದು ಸಹ ಇದು ಕಾರ್ಯ ಮಾಡುವುದನ್ನು ನೀವು ನೋಡಬಹುದೋ? ನೀವು ಮತ್ತು ನಾನು ಈ ರೀತಿಯ ತರಬೇತಿಯಲ್ಲಿ ಹೇಗೆ ಬದುಕಬಹುದು?

2. ಕ್ರೈಸ್ತ ಸೇವೆಯ ಕುರಿತ ಮೂರು ರೂಪಾಲಂಕಾರಗಳು

ಅಧ್ಯಾಯ 2ರ ಉಳಿದ ಭಾಗದಲ್ಲಿ ತಿಮೊಥೆಯನ್ನು ಯಾವ ಸೇವೆಗೆ ಕರೆಯಲಾಗಿದೆ ಎಂಬುದನ್ನು ವಿವರಿಸಲು ಪೌಲನು ಆರು ರೂಪಾಲಂಕಾರಗಳನ್ನು ಬಳಸುತ್ತಾನೆ. ಆತನ ಇತರೆ ಪತ್ರಿಕೆಗಳಲ್ಲಿ ಬಳಸಿರುವ ಆತನ ನೆಚ್ಚಿನ ಮೂರು ಚಿತ್ರಣಗಳೊಂದಿಗೆ ಪ್ರಾರಂಭಿಸುತ್ತಾನೆ.

ರೂಪಾಲಂಕಾರ 1: ಸಮರ್ಪಿಸಲ್ಪಟ್ಟ ಸೈನಿಕ (2:3-4)

ಪೌಲನು ರೋಮ್ ಸಾಮ್ರಾಜ್ಯದಲ್ಲಿ ತನ್ನ ದೈನಂದಿನ ಜೀವಿತದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಾಗಲೂ ಮತ್ತು ಸೆರೆಮನೆ ವಾಸದಲ್ಲೂ ಅನೇಕ ಸೈನಿಕರನ್ನು ನೋಡಿದವನಾಗಿದ್ದನು. ಒಬ್ಬ ಕ್ರೈಸ್ತ ಸೇವಕನು ಸೈನಿಕನ ಜೀವನದಿಂದ ಏನನ್ನು ಕಲಿಯಬಹುದು?



- ಕರ್ತವ್ಯದಲ್ಲಿರುವ ಸೈನಿಕನು ಸುರಕ್ಷಿತ ವಾಗಿರುವುದಕ್ಕಾಗಲಿ ಅಥವಾ ಸುಲಭವಾದ ಸಮಯವನ್ನು ಕಳೆಯುವುದಕ್ಕಾಗಲಿ ಬಯಸುವುದಿಲ್ಲ. ಅವರು ತಮ್ಮ ಕರ್ತವ್ಯದ ನಿಮಿತ್ತವಾಗಿ ಅಪಾಯಗಳನ್ನು ಮತ್ತು ಕಠಿಣತೆಗಳನ್ನು ಎದುರಿಸುವವರಾಗಿರುತ್ತಾರೆ. ಅದೇ ರೀತಿಯಾಗಿ ಕ್ರೈಸ್ತ ವಿಶ್ವಾಸಿಗಳು ಸುಲುಭವಾದ ಜೀವನವನ್ನು ನಿರೀಕ್ಷಿಸಲಾರರು, ಆದರೆ ಅವರು ಸುವಾರ್ತೆಗೆ ಪ್ರಾಮಾಣಿಕರಾಗಿ ಇರುವುದಾದರೆ

ಅವರು ವಿರೋಧ ಮತ್ತು ಕಠಿಣ ಸಮಯವನ್ನು ಹಾದು ಹೋಗಬೇಕಾಗುವುದು.

- ಸೈನಿಕನು ತನ್ನ ಮುಂದಿರುವ ಕಾರ್ಯದ ಮೇಲೆ ಗಮನವನ್ನು ಹರಿಸಬೇಕೆ ಹೊರತು ಲೋಕದ ವ್ಯವಹಾರಗಳಲ್ಲಾಗಲಿ ಅಥವಾ ನಾಗರೀಕ ವ್ಯವಹಾರಗಳಲ್ಲಾಗಲಿ ಸಿಕ್ಕಿಹಾಕಿಕೊಳ್ಳಬಾರದು. ಅದರಂತೆ ಕ್ರೈಸ್ತ ವಿಶ್ವಾಸಿಗಳು ಲೋಕದ ಕಾರ್ಯಗಳಲ್ಲಿ ಸಿಕ್ಕಿಹಾಕಿಕೊಳ್ಳಬಾರದು. ಇದರಿಂದ ಕರ್ತನ ಸೇವೆಯನ್ನು ನಾವು ನಿರ್ಲಕ್ಷಿಸುವಂತವರಾಗಿರುತ್ತೇವೆ. ಖಂಡಿತವಾಗಿ, ನಾವು ಸಮಾಜದಲ್ಲೂ ಮತ್ತು ನಮ್ಮ ಕೆಲಸ, ಕುಟುಂಬಗಳಲ್ಲಿರುವ ಜವಬ್ದಾರಿಗಳನ್ನು ನಿಭಾಯಿಸಬಾರದೆಂಬುದಾಗಿ ಇದರರ್ಥವಲ್ಲ. ನಾವು ನಮ್ಮ ಕುಟುಂಬಗಳ ಅಗತ್ಯತೆಯನ್ನು ಪೂರೈಸಬೇಕು ಮತ್ತು ನಮ್ಮ ಸಾಮಾಜಿಕ ಜವಾಬ್ದಾರಿಗಳನ್ನು ಸಹ ನಾವು ನಿಭಾಯಿಸುವಂತವರಾಗಿರಬೇಕು. ಇವುಗಳನ್ನೇ ನೆಪಮಾಡಿಕೊಂಡು ನಾವು ದೇವರ ಸೇವೆಯನ್ನು ಮಾಡದೆ ಇರಬಾರದು. ನಮ್ಮ ಎಲ್ಲಾ ಕಾರ್ಯಗಳಲ್ಲಿ ನಾವು ಕರ್ತನನ್ನು ಆಧಾರಮಾಡಿಕೊಂಡು ನಂಬಿಗಸ್ತರಾಗಿ ಆತನನ್ನು ಸೇವಿಸುವಂತವರಾಗಿರಬೇಕು.

ರೂಪಾಲಂಕಾರ 2: ನಿಯಮಗಳನ್ನು ಪಾಲಿಸುವ ಕ್ರೀಡಾಪಟು (2:5)

ಗ್ರೀಕ್ ಅಥ್ಲೇಟಿಕ್ ಆಟಗಳು (ಇಂದಿನ ಒಲಂಪಿಕ್ ಕ್ರೀಡಾಕೂಟದ ಪೂರ್ವಧಿಕಾರಿ) ಸಾಮ್ರಾಜ್ಯದಾಧ್ಯಂತ ಬಹಳ ಪ್ರಸಿದ್ಧವಾಗಿದ್ದವು. ಪ್ರತಿಯೊಂದು ಕ್ರೀಡೆಯು ಅದರ ನಿಯಮಗಳನ್ನು ಹೊಂದಿರುತ್ತವೆ ಮತ್ತು ಪ್ರತಿಯೊಂದು ಕ್ರೀಡೆಯು ಬಹುಮಾನಗಳನ್ನು ಹೊಂದಿರುತ್ತವೆ. ಒಬ್ಬ ಕ್ರೈಸ್ತ ವಿಶ್ವಾಸಿಯು ಅಥ್ಲೇಟಿಕ್ ಕ್ರೀಡಾಪಟುವಿನ ಜೀವನದಿಂದ ಏನನ್ನು ಕಲಿಯಬಹುದು?

- ಕ್ರೀಡಾಪಟುಗಳು ನಿಯಮಗಳನ್ನು ಅನುಸರಿಸಬೇಕು, ಇಲ್ಲದಿದ್ದರೆ ಅವರನ್ನು ಅನರ್ಹಗೊಳಿಸಲಾಗುವುದು ಮತ್ತು ಯಾವುದೇ ಬಹುಮಾನವನ್ನು ಅವರು ಪಡೆಯಲು ಅರ್ಹರಾಗುವುದಿಲ್ಲ. ಕ್ರೈಸ್ತ ವಿಶ್ವಾಸಿಗಳು ಸಹ ಅನುಸರಿಸಲು ನಿಯಮಗಳಿವೆ. ನಾವು ರಕ್ಷಿಸಲ್ಪಡುವ ಕಾರ್ಯದಲ್ಲಿ ಧರ್ಮಶಾಸ್ತ್ರದಿಂದ ಮುಕ್ತರಾಗಿದ್ದೇವೆ, ಆದರೆ ದೇವರು ತನ್ನ ಜನರು ತನ್ನ ನೈತಿಕ ನಿಯಮಗಳನ್ನು ಪಾಲಿಸುತ್ತಾ ದೈವಿಕ ಸ್ವಭಾವದಲ್ಲಿ ಜೀವಿಸಬೇಕೆಂದು ನಿರೀಕ್ಷಿಸುತ್ತಾನೆ.
- ಕ್ರೀಡಾಪಟುಗಳು ಪರಿಶ್ರಮಪಡಬೇಕು. ಅವರು ಒಂದು ವೇಳೆ ಪಂದ್ಯದ ಮಧ್ಯದಲ್ಲಿ ಬಿಟ್ಟುಬಿಡುವುದಾದರೆ ಯಾವುದೇ ಬಹುಮಾನವನ್ನು ಸ್ವೀಕರಿಸಲು ಆಗುವುದಿಲ್ಲ. ನಂಬಿಕೆಯನ್ನು ಇಟ್ಟುಕೊಂಡು ತಾನು ಸಾಗಿ ತನ್ನ ಜೀವಿತದ ಓಟವನ್ನು ಸಂಪೂರ್ಣಗೊಳಿಸಿದ ವಿಶ್ವಾಸಿಯ ಜೀವಿತದ ಉದಾಹರಣೆಯಾಗಿ ಪೌಲನು ತನ್ನನ್ನೇ ಉಪಯೋಗಿಸಿಕೊಳ್ಳುತ್ತಾನೆ.

ರೂಪಾಲಂಕಾರ 3: ಕಷ್ಟಪಟ್ಟು ದುಡಿಯುವ ರೈತ (2:6)

ಒಬ್ಬ ರೈತನ ಜೀವಿತದಿಂದ ಒಬ್ಬ ಕ್ರೈಸ್ತ ಸೇವಕನು ಏನನ್ನು ಕಲಿಯುತ್ತಾನೆ?



- ಒಬ್ಬ ಕ್ರೀಡಾಪಟು ಹೇಗೆ ನ್ಯಾಯಯುತವಾಗಿ ಆಡಬೇಕೋ ಹಾಗೆಯೇ ಒಬ್ಬ ರೈತನೂ ಸಹ ಕಷ್ಟಪಟ್ಟು ದುಡಿಯತಕ್ಕದ್ದು. ಉತ್ತಮ ಕೃಷಿಗೆ ಕಠಿಣ ಪರಿಶ್ರಮದ ಅಗತ್ಯತೆ ಇದೆ. ಯಶಸ್ವಿಯುಳ್ಳ ಕೃಷಿಯು ಕೌಶಲ್ಯವನ್ನು ಆಧಾರಗೊಂಡಿದೆ. ಹಾಗೆಯೇ ಹೆಚ್ಚು ಪರಿಶ್ರಮದ ಅಗತ್ಯತೆಯು ಸಹ ಹೆಚ್ಚಾಗಿರುತ್ತದೆ. ಸೈನಿಕ ಅಥವಾ ಕ್ರೀಡಾಪಟುಗಳ ಜೀವನಕ್ಕಿಂತ ಒಬ್ಬ ರೈತನ ಜೀವಿತವು ಉತ್ಸಾಹ, ಮೆಚ್ಚುಗೆ, ಪ್ರೋತ್ಸಾಹಗಳ ವಿಷಯದಲ್ಲಿ ಭಿನ್ನವಾಗಿರುತ್ತದೆ.
- ಕಷ್ಟಪಟ್ಟು ದುಡಿಯುವ ರೈತನು ಉತ್ತಮವಾದ ಬೆಳೆಯನ್ನು ಹೊಂದುತ್ತಾನೆ. ಕ್ರೈಸ್ತೀಯ ಜೀವತಗಳಲ್ಲಿ ಬರುವ ಹೋರಾಟಗಳಲ್ಲಿ ನಾವು ಸೋತುಹೋಗದೆ ಮುಂದೆ ಸಾಗುವುದಾದರೆ ನಾವು ಸುಗ್ಗಿಯ ಸಮಯದಲ್ಲಿ ಕೊಯ್ಲು ಮಾಡುತ್ತೇವೆ (ಗಲಾ. 6:9).

ಚರ್ಚಿಸಿರಿ

- ಕ್ರೈಸ್ತ ಸೈನಿಕನಾಗಿ ನಿಮಗೆ ಅಡ್ಡಿಯಾಗಬಹುದಾದ ವಿಷಯಗಳ ಬಗ್ಗೆ ನೀವು ಯೋಚಿಸಬಹುದೇ? ಅವು ಪಾಪಗಳಾಗಿರಕ್ಕಿಲ್ಲ ಆದರೆ ಒಬ್ಬ ವಿಶ್ವಾಸಿಯನ್ನು ಸಿಕ್ಕಿಹಾಕಿಕೊಳ್ಳುವ ಪ್ರಪಂಚದ ಕಾರ್ಯಗಳಾಗಿರಬಹುದು. ಅವುಗಳಲ್ಲಿ ಬದಲಾವಣೆಯನ್ನು ತರಲು ನೀವು ಏನು ಮಾಡಬಹುದು?
- ಯಾವ ವಿಧದಲ್ಲಿ ಕ್ರೈಸ್ತೀಯ ಜೀವಿತವು ಕಠಿಣವಾಗಿರಬಹುದು?
- ನಾವು ಯಾವ ರೀತಿಯ ಸುಗ್ಗಿಯನ್ನು ಕೊಯ್ಯುತ್ತೇವೆ?

ಹೀಗೆ ನಾವು ಒಬ್ಬ ವಿಶ್ವಾಸಿಯ ಕರ್ತವ್ಯದ ಕುರಿತು ಪೌಲನ ಮೊದಲ ಮೂರು ರೂಪಾಲಂಕಾರಗಳನ್ನು ನೋಡಿದ್ದೇವೆ. ಸಮರ್ಪಣಾ ಸೈನಿಕ, ಉತ್ತಮ ಕ್ರೀಡೆಯ ನಿಯಮಗಳನ್ನು ಪಾಲಿಸುವ ಕ್ರೀಡಾಪಟು, ಶ್ರಮಪಟ್ಟು ಕೆಲಸ ಮಾಡುವ ರೈತ: ಇವುಗಳು ತಿಮೊಥೆ ಮತ್ತು ಆತನ ನಂತರದ ವಿಶ್ವಾಸಾರ್ಹ ಜನರಲ್ಲಿರುವ ಪೂರ್ಣ ಶ್ರದ್ಧತೆಯನ್ನು ವಿವರಿಸುತ್ತವೆ. ಈ ಗುಣಲಕ್ಷಣಗಳಿಲ್ಲದೆ ನಾವು ಉತ್ತಮ ಫಲಿತಾಂಶವನ್ನು ನಿರೀಕ್ಷಿಸಲಾಗುವುದಿಲ್ಲ: ಸಮರ್ಪಣೆಯಿಲ್ಲದ ಸೈನಿಕನಿಗೆ ಯಾವುದೇ ಜಯವಿಲ್ಲ, ನಿಯಮಗಳನ್ನು ಪಾಲಿಸದೆ ಇರುವ ಕ್ರೀಡಾಪಟುವಿಗೆ ಯಾವುದೇ ಬಹುಮಾನವಿಲ್ಲ ಮತ್ತು ಸೋಮಾರಿಯಾದ ರೈತನಿಗೆ ಸುಗ್ಗಿಯಿಲ್ಲ.

3. ಅನುಭವ (2:8)

2:7-13 ರಲ್ಲಿ ಪೌಲನು ಸಂಕಟ ಮತ್ತು ಶ್ರಮೆಯ ವಿಷಯದ ಮೇಲೆ ಮುಂದುವರಿದರೂ ರೂಪಾಲಂಕಾರಗಳಿಂದ ಸ್ವಲ್ಪ ವಿರಾಮವನ್ನು ತೆಗೆದುಕೊಳ್ಳುತ್ತಾ, ರೂಪಾಲಂಕಾರಗಳನ್ನು ಬಳಸುವ ಬದಲಾಗಿ ಈಗ ತನ್ನ ಜೀವಿತದ ಅನುಭವವನ್ನು ವಿವರಿಸುತ್ತಿದ್ದಾನೆ.

ಅ. ಕ್ರಿಸ್ತನ ಅನುಭವ (2:8)

ತಿಮೊಥೆಯು ತನ್ನ ಜೀವಿತದಲ್ಲಿ ಕ್ರಿಸ್ತ ಯೇಸುವನ್ನು ಸ್ಮರಿಸುವಂತೆ ಪೌಲನು ಉತ್ತೇಜಿಸುತ್ತಿದ್ದಾನೆ. ಯಾಕೆ ಆತನು ಹೀಗೆ ಮಾಡಬೇಕು? ಯಾಕೆಂದರೆ ತಿಮೊಥೆಯು ಕಾಪಾಡಬೇಕಾದ ಸುವಾರ್ತೆಗೆ ಕ್ರಿಸ್ತನು ಒಳ್ಳೆಯ ನಿಧಿಯಾಗಿದ್ದಾನೆ (1:14). ಯೇಸುವನ್ನು ಸತ್ತವರೊಳಗಿಂದ ಎದ್ದುಬಂದವನು ಮತ್ತು ದಾವೀದನ ಸಂತತಿಯಿಂದ ಬಂದವನೆಂದು ನೆನಪಿಸಿಕೊಳ್ಳಬೇಕು.

ಯೇಸು ಸತ್ತವರೊಳಗಿಂದ ಎದ್ದುಬಂದವನು:

- ಈ ಪದವಿನ್ಯಾಸವು ಯೇಸುವಿನ ದೈವಿಕತ್ವವನ್ನು ಸೂಚಿಸುತ್ತದೆ.
- ಆತನು ನಮಗಾಗಿ ಏನು ಮಾಡಿದನೆಂಬುದನ್ನು ಇದು ತೋರಿಸುತ್ತದೆ: ಆತನು ನಮ್ಮ ಪಾಪಗಳಿಗಾಗಿ ಸತ್ತನು ಮತ್ತು ಮರಣದ ಮೇಲೆ ಜಯವನ್ನು ಸಾಧಿಸಿದನು.
- ಇದು ಆತನು ದೀನತೆಯಿಂದ ಸತ್ತನು ಮತ್ತು ಸತ್ತವರೊಳಗಿಂದ ಎದ್ದು ಬಂದವನು ಈಗ ಉನ್ನತದಲ್ಲಿದ್ದಾನೆಂದು ಸಾರುತ್ತದೆ.

ಯೇಸು ದಾವೀದನ ಸಂತತಿಯಿಂದ ಬಂದವನು:

- ಇದು ಯೇಸುವಿನ ಮಾನವೀಯತೆಯನ್ನು ಸೂಚಿಸುತ್ತದೆ.
- ಮಹಾನ್ ರಾಜ ದಾವೀದನ ಮಗನಾಗಿ ಯೇಸು ತನ್ನ ರಾಜ್ಯವನ್ನು ಸ್ಥಾಪಿಸಿದ್ದಾನೆಂದು ಅವರು ಸೂಚಿಸುತ್ತಾರೆ.
- ಪುರಾತನ ರಾಜನ ವಂಶಸ್ಥನಾಗಿ ದೀನತೆಯಲ್ಲಿ ಜನಿಸಿದವನು ಈಗ ವೈಭವದಿಂದ ಆಳುತ್ತಿದ್ದಾನೆಂದು ಅವರು ಸೂಚಿಸುತ್ತಾರೆ.

ಈ ಎರಡು ಪದ ಸಮುಚ್ಚಯವು ಒಟ್ಟಾಗಿ ಕ್ರಿಸ್ತನನ್ನು ರಕ್ಷಕನು ಮತ್ತು ರಾಜನು ಎಂಬುದಾಗಿ ವಿವರಿಸುತ್ತವೆ. ಆದರೆ ಅವು ಯೇಸುವಿನ ಅವಮಾನ ಮತ್ತು ಉನ್ನತಿಯನ್ನು ಸಹ ಸೂಚಿಸುತ್ತವೆ. ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಈ ರೀತಿಯಾಗಿ ಹೇಳುತ್ತಿರುವಂತೆ ಕಾಣಿಸುತ್ತದೆ: ನಿಮ್ಮ ಸೇವೆಯಲ್ಲಿ ನೋವು, ಕಠಿಣ ಪರಿಶ್ರಮ, ಅವಮಾನ, ಸಂಕಟ ಅಥವಾ ಮರಣವನ್ನು ತಪ್ಪಿಸಿಕೊಳ್ಳುವ ಶೋಧನೆಗೆ ನೀವು ಒಳಗಾದಾಗ, ನೀವು ಯೇಸು ಕ್ರಿಸ್ತನನ್ನು ನೆನಪಿಸಿಕೊಂಡ ದೃಢವಾಗಿ ನಿಲ್ಲಬೇಕು.

ಆ. ಅಪೊಸ್ತಲನಾದ ಪೌಲನ ಅನುಭವ (2:9-10)

ಪೌಲನು ಸುವಾರ್ತೆಗಾಗಿ ಶ್ರಮೆಯನ್ನು ಅನುಭವಿಸುತ್ತಿದ್ದಾನೆ ಮತ್ತು ಅಪರಾಧಿಯಂತೆ ಸರಪಳಿಯಲ್ಲಿ ಬಂಧಿಸಲ್ಪಟ್ಟಿದ್ದಾನೆ. "ಅಪರಾಧಿ" ಎಂಬ ಗ್ರೀಕ್ ಪದವು ಹೊಸ ಒಡಂಬಡಿಕೆಯಲ್ಲಿ ಇನ್ನೊಂದು ಸ್ಥಳದಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿದೆ, ಅದು ಯೇಸುವಿನೊಂದಿಗೆ ಕ್ರೂಜೆಗೆ ಏರಿಸಲ್ಪಟ್ಟ ಕಳ್ಳರ ಕುರಿತು ತಿಳಿಸುವಾಗ (ಲೂಕ. 23:32-33). ಆದರೆ ಈ ಅಪರಾಧಿಗಳಂತೆ ಪೌಲನು ಅಲ್ಲ ಆತನು ಮುಗ್ಧನು ಮತ್ತು ರೋಮ್ ಪ್ರಜೆಯು ಆಗಿದ್ದಾನೆ. ಪೌಲನು ಸರಪಳಿಯಿಂದ ಬಂಧಿಸಲ್ಪಟ್ಟಿರಬಹುದು ಆದರೆ ದೇವರ ವಾಕ್ಯವು ಬಂಧನದಲ್ಲಿಲ್ಲ. ತಿಮೊಥೆಯ ಹಾಗೆ ಇತರರು ದೇವರ ವಾಕ್ಯವನ್ನು ಮುಂದುವರಿಸಿದ್ದಾರೆ. ಪೌಲನು ಹೇಳುವುದೇನೆಂದರೆ ತನ್ನ ಶ್ರಮೆಯ ಮೂಲಕ ಅನೇಕರು ರಕ್ಷಣೆಯನ್ನು ಹೊಂದುವವರಾಗಿದ್ದಾರೆ. ಆದ್ದದರಿಂದ ಸುವಾರ್ತೆಯನ್ನು ಸಾರುವುದು ಮತ್ತು ಸುವಾರ್ತೆಗಾಗಿ ಶ್ರಮೆಯನ್ನು ಅನುಭವಿಸುವಂತಹದ್ದು ಎರಡು ಜನರನ್ನು ಕ್ರಿಸ್ತನ ಕಡೆಗೆ ನಡೆಸುತ್ತದೆ.

ಇ. ನಮ್ಮ ಸಾಮಾನ್ಯ ಕ್ರೈಸ್ತೀಯ ಅನುಭವಗಳು (2:11-13)

ಈ ವಾಕ್ಯಭಾಗಗಳಲ್ಲಿ ಪೌಲನು ಶಬ್ದಗಳಿಂದಲೂ ಮತ್ತು ಪದವಿನ್ಯಾಸಗಳಿಂದಲೂ ನುಡಿಯುತ್ತಿದ್ದಾನೆ.

"ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು;

ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು".

ವ. 11 ಸತ್ಯವಾಗಿ ಇರುವ ಮತ್ತು ಸಹಿಸಿಕೊಳ್ಳುವ ವಿಶ್ವಾಸಿಗಳಿಗೆ ಸಂಬಂಧಿಸಿದ್ದಾಗಿದೆ. ಕ್ರೈಸ್ತೀಯ ಜೀವಿತವು ಸಾಯುವ ಮತ್ತು ಸಹಿಸಿಕೊಳ್ಳುವ ಜೀವನವಾಗಿದೆ. ನಾವು ಪಾಪಕ್ಕಾಗಿ ಸಾಯುತ್ತೇವೆ, ಆದರೆ ಸ್ವಯಂ ಮತ್ತು ಸುರಕ್ಷತತೆಗಾಗಿಯೂ ಸಹ ಸಾಯುತ್ತೇವೆ. ಭೂಲೋಕದಲ್ಲಿ ನಾವು ಕ್ರಿಸ್ತನೊಂದಿಗೆ ಮರಣವನ್ನು ಹಂಚಿಕೊಂಡಾಗ ನಾವು ಸ್ವರ್ಗದಲ್ಲಿಯೂ ಸಹ ಆತನೊಂದಿಗೆ ಜೀವನವನ್ನು ಹಂಚಿಕೊಳ್ಳುತ್ತೇವೆ. ನಾವು ಆತನೊಂದಿಗೆ ಆತನ ನೋವುಗಳನ್ನು ಹಂಚಿಕೊಂಡಾಗ ಮತ್ತು ಸಹಿಸಿಕೊಂಡಾಗ ಮಾತ್ರ ಆತನ ನಿತ್ಯತ್ವದ ಆಳ್ವಿಕೆಯನ್ನು ನಾವು ಸಹ ಹಂಚಿಕೊಳ್ಳುವವರಾಗಿದ್ದೇವೆ. ಯಾಕೆಂದರೆ ಜೀವದ ಮಾರ್ಗವು ಮರಣವಾಗಿದೆ ಮತ್ತು ಮಹಿಮೆಯುಳ್ಳ ಜೀವಿತದ ಮಾರ್ಗವು ಶ್ರಮೆಯಾಗಿದೆ (ರೋಮಾ. 8:17, 2 ಕೊರಿ. 4:17).

"ನಾವು ಯೇಸುವಿನವರಲ್ಲವೆಂದು ಹೇಳಿದರೆ ಆತನು ನಮ್ಮನ್ನು ತನ್ನವರಲ್ಲವೆಂದು ಹೇಳುವನು.

ನಾವು ಅಪನಂಬಿಗಸ್ತರಾಗಿದ್ದರೂ ಆತನು ನಂಬಿಗಸ್ತನಾಗಿಯೇ ಇರುವನು; ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಏನೂ ಮಾಡಲಾರನು".

ವ. 12-13 ಸುಳ್ಳು ಮತ್ತು ನಂಬಿಕೆಯಿಲ್ಲದವರಿಗೆ ಸಂಬಂಧಿಸಿವೆ. ಸ್ವತಃ ಯೇಸು ಹೇಳಿದ್ದೇನೆಂದರೆ ಭೂಲೋಕದಲ್ಲಿ ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವವನನ್ನು ಯೇಸು ಸಹ ಪರಲೋಕದಲ್ಲಿ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವನು ಎಂಬುದಾಗಿ (ಮತ್ತಾಯ. 10:33). ಮತ್ತು ನಾವು ಒಂದು ವೇಳೆ ನಂಬಿಸ್ಥರಾಗಿರದಿದ್ದರೆ ಆತನು ನಮಗೆ ನಂಬಿಗಸ್ತನಾಗಿಯೇ ಇರುವನು. ಹಾಗೆಯೇ ಆತನು ತನ್ನ ಮಾತುಗಳಲ್ಲಿ ನಂಬಿಗಸ್ತನಾಗಿಯೇ ಇರುವನು. ಆತನು ತನ್ನನ್ನು ತಾನು ನಿರಾಕರಿಸುವುದಿಲ್ಲ. ದೇವರ

ನಂಬಿಗಸ್ತಿಕೆ ಎಂದರೆ ಆತನು ತನ್ನ ಬೆದರಿಕೆಗಳನ್ನು ಹಾಗೂ ತನ್ನ ವಾಗ್ದಾನಗಳನ್ನು ನೆರವೇರಿಸುವುದರಲ್ಲಿ ನಂಬಿಗಸ್ತನಾಗಿದ್ದಾನೆ. ಆತನು ತನ್ನನ್ನು ಮತ್ತು ತನ್ನ ಮಾತುಗಳನ್ನು ನಿರಾಕರಿಸಲು ಸಾಧ್ಯವಿಲ್ಲ.

ಇಲ್ಲಿಯವರೆಗೆ ಈ ಅಧ್ಯಾಯದಲ್ಲಿ ಪೌಲನು ತಿಮೊಥೆಯನಿಗೆ ಕ್ರೈಸ್ತೀಯ ಜೀವಿತ ಮತ್ತು ಸೇವೆಯ ಕುರಿತು ಒಂದು ಪ್ರಾಮುಖ್ಯವಾದ ಪಾಠವನ್ನು ನೀಡಿದ್ದಾನೆ. ಸೈನಿಕ, ಕ್ರೀಡಾಪಟು ಮತ್ತು ರೈತನ ರೂಪಾಲಂಕಾರಗಳ ಮೂಲಕ ಮತ್ತು ಕ್ರಿಸ್ತನ ಅನುಭವಗಳ ಮೂಲಕ, ಸ್ವತಃ ಪೌಲನ ಮತ್ತು ಪ್ರತಿಯೊಬ್ಬ ನಂಬಿಕೆಯುಳ್ಳ ವಿಶ್ವಾಸಿಗಳ ಅನುಭವಗಳ ಮೂಲಕ ನೋವಿನಿಂದ ಆಶೀರ್ವಾದವು ಬರುತ್ತದೆಂದು ಪೌಲನು ತೋರಿಸಿದ್ದಾನೆ, ಈ ಒಂದು ಫಲಿತಾಂಶವು ಕಠಿಣ ಪರಿಶ್ರಮದಿಂದ ಬರುತ್ತದೆ, ಆ ಜೀವನವು ಸಾವಿನಿಂದ ಬರುತ್ತದೆ ಮತ್ತು ಶ್ರಮೆಯ ಮೂಲಕ ಮಹಿಮೆಯು ಬರುತ್ತದೆ. ಕ್ರೈಸ್ತೀಯ ಜೀವಿತ ಮತ್ತು ಸೇವೆಯನ್ನು ಪೌಲನು ಹೀಗೆ ವಿವರಿಸಿದ್ದಾನೆ.

ಚರ್ಚಿಸಿರಿ

- ಕ್ರಿಸ್ತನನ್ನು, ಪೌಲನನ್ನು ಮತ್ತು ನಿಮ್ಮನ್ನು ಪರಿಗಣಿಸಿಕೊಳ್ಳಿ. ಅವರ ಜೀವಿತಗಳಲ್ಲಿ ಮತ್ತು ನಿಮ್ಮ ಸ್ವಂತ ಜೀವಿತದಲ್ಲಿ ಯಾವ ಶ್ರಮೆಯನ್ನು ನೀವು ನೋಡಬಹುದು?
- ಅವರ ಜೀವಿತಗಳಲ್ಲಿ ಮತ್ತು ನಿಮ್ಮ ಜೀವಿತಗಳಲ್ಲಿ (ನಿಮಗೆ ತಿಳಿದಿರುವಂತೆ) ಶ್ರಮೆಯು ಯಾವುದರ ಕಡೆಗೆ ನಡೆಸಿತು?

4. ಕ್ರೈಸ್ತೀಯ ಸೇವೆಯ ಕುರಿತ ಇನ್ನೂ ಮೂರು ರೂಪಾಲಂಕಾರಗಳು

ಅಧ್ಯಾಯ 2ರ ಎರಡನೇಯ ಭಾಗದಲ್ಲಿ ಪೌಲನು ತಿಮೊಥೆಯನಿಗೆ ಹೇಗೆ ತನ್ನ ಸೇವೆಯನ್ನು ನಿರ್ವಹಿಸಬೇಕೆಂಬುದನ್ನು ಕಲಿಸುವುದನ್ನು ಮುಂದುವರೆಸುವಾಗ ಹೊಸ ಮೂರು ರೂಪಾಲಂಕಾರಗಳನ್ನು ಉಪಯೋಗಿಸುತ್ತಿದ್ದಾನೆ.

ರೂಪಾಲಂಕಾರ 4: ನಾಚಿಕೆಪಡದ ಕೆಲಸಗಾರ (2:14-19)

ಪೌಲನು ಒಳ್ಳೆಯ ಕೆಲಸಗಾರರು ಮತ್ತು ಕೆಟ್ಟ ಕೆಲಸಗಾರರ ಉದಾಹರಣೆಗಳನ್ನು ನೀಡುತ್ತಿದ್ದಾನೆ. ಪೌಲನು ಸತ್ಯದ ವಾಕ್ಯವನ್ನು ನಿರ್ವಹಿಸುವವರನ್ನು "ಕೆಲಸಗಾರ"ರೆಂದು ಉಲ್ಲೇಖಿಸುತ್ತಿದ್ದಾನೆ. ಕೆಲಸಗಾರರು ದೇವರ ವಾಕ್ಯವನ್ನು ನಿರ್ವಹಿಸುವ ರೀತಿಯು ಅವರು ಒಳ್ಳೆಯ ಅಥವಾ ಕೆಟ್ಟ ಕೆಲಸಗಾರರೆಂಬುದನ್ನು ತೋರಿಸುತ್ತದೆ. ತಿಮೊಥೆಯು ಒಳ್ಳೆಯ ಕೆಲಸಗಾರನಾಗಬೇಕೆಂಬುದನ್ನು ಪೌಲನು ಬಯಸುತ್ತಿದ್ದಾನೆ, ಯಾಕೆಂದರೆ ಅವನು ಸತ್ಯದ ವಾಕ್ಯವನ್ನು ಇತರರಿಗೆ ಕಲಿಸುವವನಾಗಿರುತ್ತಾನೆ. ಆತನು ದ್ವೈವಿಕತ್ವವಿಲ್ಲದ ಮಾತುಗಳಿಂದ ಇದನ್ನು ದರ್ಬಲಗೊಳಿಸಬಾರದು. ಹುಮೆನಾಯನೂ ಮತ್ತು ಫಿಲೇತನೂ ಇವರು ಸತ್ಯದಿಂದ ದೂರಹೋಗಿ ಕೆಟ್ಟ ಕೆಲಸಗಾರರಿಗೆ ಉದಾಹರಣೆಗಳಾಗಿದ್ದಾರೆ, ಅವರು ಸುವಾರ್ತೆಯನ್ನು ತಮ್ಮದೆಯಾದ ಸ್ವಂತ ಆಲೋಚನೆಗಳಿಂದ ಬೋಧಿಸುವವರಾಗಿದ್ದು ಮತ್ತು ಹಾಗೆ ಮಾಡುವುದರ ಮೂಲಕ ಜನರನ್ನು ದಾರಿತಪ್ಪಿಸುವವರಾಗಿದ್ದರು.

ರೂಪಾಲಂಕಾರ 5: ಶುದ್ಧವಾದ ಪಾತ್ರೆ (2:19-22)

ಪೌಲನು ಒಂದು ದೊಡ್ಡ ಮನೆಯ ಚಿತ್ರಣವನ್ನು ನೀಡುತ್ತಿದ್ದಾನೆ, ಅಲ್ಲಿ ಅನೇಕ ವಿಭಿನ್ನವಾದ ಪಾತ್ರೆಗಳಿವೆ, ಕೆಲವು ಪಾತ್ರೆಗಳು ಉತ್ತಮವಾದ ಕಾರ್ಯಗಳಿಗೂ ಮತ್ತೇ ಕೆಲವು ಹೀನವಾದ ಬಳಕೆಗೆ ಬರುವಂತವುಗಳಾಗಿವೆ. ಕೊಳಕಾದ ಪಾತ್ರೆಗಳನ್ನು ಆಹಾರ ಅಥವಾ ನೀರಿಗಾಗಿ ಬಳಸಿದರೆ ಜನರು ಅನಾರೋಗ್ಯಕ್ಕೆ ಒಳಗಾಗುತ್ತಾರೆ. ನಾಯಕನು ಒಂದು ಪಾತ್ರೆ ಇದ್ದಂತೆ. ದೇವರ ರಾಜ್ಯದಲ್ಲಿ ಸತ್ಯವಾದ ಮತ್ತು ಗೌರವಾನ್ವಿತ ಸಿದ್ಧಾಂತವನ್ನು ಬೋಧಿಸುವ ಉತ್ತಮ ಶಿಕ್ಷಕರು ಇರುತ್ತಾರೆ ಮತ್ತು ದೇವರ ಮನೆಯಲ್ಲಿ ಸುಳ್ಳನ್ನು ಮತ್ತು ಹೊಲಸನ್ನು ತರುವ ಸುಳ್ಳುಬೋಧಕರು ಇರುತ್ತಾರೆ. ದೇವರ ವಾಕ್ಯವನ್ನು ಬೋಧಿಸುವ ಒಬ್ಬ ನಾಯಕ (ದೇವರ ಪಾತ್ರೆ)ನು ಶುದ್ಧನಾಗಿರಬೇಕು, ಇದರಿಂದ ದೇವರ ಮನೆಯಲ್ಲಿರುವ ಜನರು ಆತ್ಮೀಕವಾಗಿ ಬೆಳೆಯುತ್ತಾ ಸುಧಾರಣೆಗೆ ಬರುವವರಾಗಿರುತ್ತಾರೆ. ದೇವರ ಸೇವಕನಿಗೆ ಶುದ್ಧತೆ ಅತ್ಯಗತ್ಯ. ವ. 22ರಲ್ಲಿ ಪೌಲನು ತಿಮೊಥೆಗೆ ಶುದ್ಧಹೃದಯವನ್ನು ಹೊಂದಿರುವುದರ ಕುರಿತು ನೆನಪಿಸುತ್ತಾನೆ.

ರೂಪಾಲಂಕಾರ 6: ಕರ್ತನ ಸೇವಕನು (2:23-26)

ದೇವರನ್ನು ಸೇವಿಸುವವನಿಗೆ ಯೋಗ್ಯವಾದ ವರ್ತನೆ ಮತ್ತು ನಡುವಳಿಕೆಯನ್ನು ವಿವರಿಸಲು ಪೌಲನು ಸೇವಕ ಅಥವಾ ಗುಲಾಮನ ರೂಪಾಲಂಕಾರವನ್ನು ಬಳಸುತ್ತಿದ್ದಾನೆ.

ಚರ್ಚಿಸಿರಿ

2 ತಿಮೊಥೆ 2:23-26ನ್ನು ಓದಿರಿ ಮತ್ತು ಸೇವಕನ ಗುಣಲಕ್ಷಣಗಳನ್ನು ಅಭ್ಯಾಸಿಸಿರಿ.

- ಇಂದು ದೇವರ ರಾಜ್ಯದ ಕೆಲಸಗಾರರಲ್ಲಿ ಈ ಎಲ್ಲಾ ಅಥವಾ ಕೆಲವು ಗುಣಲಕ್ಷಣಗಳನ್ನು ನೀವು ಕಾಣಬಹುದೇ? ಅವರು ಹೇಗೆ ಕಾಣುತ್ತಾರೆ ಅಥವಾ ಕಾಣುವುದಿಲ್ಲ?
- ನಿಮ್ಮಲ್ಲಿ ಈ ಗುಣಲಕ್ಷಣಗಳನ್ನು ನೀವು ನೋಡಬಹುದೇ?
- ನೀವು ದೇವರಿಂದ ರೂಪಿಸಲ್ಪಡಲು ಈ ಯಾವ ಗುಣಲಕ್ಷಣಗಳಲ್ಲಿ ಕಾರ್ಯ ಮಾಡುವ ಅಗತ್ಯತೆ ಇದೆ?

ಅಧ್ಯಾಯ 2ರಲ್ಲಿ ಪೌಲನು ನಮಗೆ ಒಬ್ಬ ಆದರ್ಶ ಕ್ರೈಸ್ತೀಯ ಕೆಲಸಗಾರನ ಚಿತ್ರಣವನ್ನು ನೀಡುತ್ತಿದ್ದಾನೆ. ಒಬ್ಬ ಸೈನಿಕನಂತೆ, ಕ್ರೀಡಾಪಟುವಿನಂತೆ ಮತ್ತು ಕೃಷಿಕನಂತೆ ಕಾರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ವ್ಯಕ್ತಿಗಳು. ಇದು ಜೀವನದಲ್ಲಿ ಪ್ರಾಮಾಣಿಕ ಮತ್ತು ಸತ್ಯ ಮತ್ತು ನಾಚಿಕೆಯಿಲ್ಲದ ಕೆಲಸಗಾರನಂತೆ ಕೆಲಸ ಮಾಡುವ ವ್ಯಕ್ತಿ. ಇದು ಶುದ್ಧವಾದ ಪಾತ್ರೆಯಂತೆ ನೀತಿ ಮತ್ತು ನಡುವಳಿಕೆ ಮತ್ತು ಚಾರಿತ್ರ್ಯದಲ್ಲಿ ಶುದ್ಧವಾದ ಜೀವನವನ್ನು ನಡೆಸುವ ವ್ಯಕ್ತಿ. ಇದು ಒಬ್ಬ ಸೇವಕನಂತೆ ವಿನಯ ಮತ್ತು ದಯೆ ಇರುವ ವ್ಯಕ್ತಿ.

ಇದು ತುಂಬಾ ಸವಾಲಿನ ಬೋಧನೆ. ಇದು ನಮಗೆ ಸುಲಭವಾಗಿ ಹೋರಾಟ ಮತ್ತು ಹೊರೆಯಾಗಬಹುದು. ಆದರೆ ಈ ಅಧ್ಯಾಯದಲ್ಲಿ ಪೌಲನ ಮೊದಲ ಉಪದೇಶವನ್ನು ನೆನಪಿಸಿಕೊಳ್ಳಿರಿ. *"ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗು"* (2:1). ನಾವು ಇದನ್ನು ನಮ್ಮ ಸ್ವಂತ ಶಕ್ತಿಯಿಂದ ಸಾಧಿಸಲು ಸಾಧ್ಯವಿಲ್ಲ, ಆದರೆ ಆತನಲ್ಲಿ ಮಾತ್ರ ಸಾಧಿಸಬಹುದಾಗಿದೆ.

ಪ್ರಾರ್ಥನೆ

ಈ ರೀತಿಯ ಜೀವನವನ್ನು ನಡೆಸಲು ಶಕ್ತಿ ಮತ್ತು ಮಾರ್ಗದರ್ಶನಕ್ಕಾಗಿ ದೇವರನ್ನು ಕೇಳುವ ಪ್ರಾರ್ಥನೆಯಲ್ಲಿ ಸಮಯವನ್ನು ತೆಗೆದುಕೊಳ್ಳಿ. ಇದರಿಂದ ನೀವು ಇತರರನ್ನು ದೇವರಿಗೆ ಮೆಚ್ಚುವ ರೀತಿಯಲ್ಲಿ ನಡೆಸಬಹುದು.

ಅಧ್ಯಾಯ 3: ಸುವಾರ್ತೆಯಲ್ಲಿ ಉಳಿಯಲು ಅಪ್ಪಣೆ

ಪೌಲನು ಸೆರೆಮನೆಯಲ್ಲಿದ್ದು, ಸುವಾರ್ತೆ ಮತ್ತು ಅದರ ಭವಿಷ್ಯದ ಮೇಲೆ ಕೇಂದ್ರೀಕರಿಸಿದ್ದಾನೆ. ಈ ಅಧ್ಯಾಯದಲ್ಲಿ ಅವನು ತಿಮೊಥೆಯನಿಗೆ ಸತ್ಯದಲ್ಲಿ ದೃಢವಾಗಿ ನಿಲ್ಲಲು, ನಂಬಿಗಸ್ತನಾಗಿರಲು ಮತ್ತು ಕೆಟ್ಟ ಸಮಯದ ಹೊರತಾಗಿಯೂ ಒಳ್ಳೆಯ ಕೆಲಸವನ್ನು ಮುಂದುವರಿಸಲು ಪ್ರೋತ್ಸಾಹಿಸುತ್ತಾನೆ.

ಕೊನೆಯ ದಿನಗಳು ಭಯಾನಕ ಸಮಯಗಳು. ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದು. ತಿಮೊಥೆ ಅಥವಾ ನಾವುಗಳು ಅವರು ಸ್ವಲ್ಪ ಸಮಯ ಇಲ್ಲಿ ಇಲ್ಲದೆ ಇರುವ ನಿಮಿತ್ತ ಈ ಚಂಡಮಾರುತವನ್ನು ಹಾದು ಹೋಗುವುದು ಅವಶ್ಯವಾಗಿದೆ. ಯೇಸು ಕ್ರಿಸ್ತನು ಹಿಂದಿರುಗುವ ತನಕ ಕೊನೆಯ ದಿನಗಳು ನಮಗೆ ತೊಂದರೆಯನ್ನುಂಟು ಮಾಡುತ್ತವೆ. ಪಂಚಾಶತ್ತಮದ ಮೊದಲ ದಿನದಂದು ಪೇತ್ರನು ಆಡಿದ ಮಾತುಗಳನ್ನು ನಾವು ಓದುವಾಗ (ಅಪೊ.ಕೃತ್ಯ. 2:14-17) ಕೊನೆಯ ದಿನಗಳು ಯೇಸು ಕ್ರಿಸ್ತನ ಮೊದಲ ಬರುವಿಕೆ ಮತ್ತು ಪವಿತ್ರಾತ್ಮನ ಹೊರಸುರುಸುವಿಕೆಯೊಂದಿಗೆ ಪ್ರಾರಂಭವಾಯಿತೆಂದು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ, ಪರಿಣಾಮವಾಗಿ ಈ ಅಧ್ಯಾಯದಲ್ಲಿ ಮುಂದಿನ ವಿವರಣೆಯು ಪ್ರಸ್ತುತ ಸಮಯದ ವಿವರಣೆಯಾಗಿದೆ. ಇದು ಭವಿಷ್ಯದ ಬಗ್ಗೆ ಅಲ್ಲ. ಈಗಲೇ ಕೊನೆಯ ದಿನಗಳಾಗಿವೆ.

ಈ ದಿನಗಳು ಭಯಾನಕ ಮತ್ತು ದುಃಖಕರವಾಗಿವೆ. ಕೊನೆಯ ದಿನಗಳನ್ನು ವಿವರಿಸಲು ಪೌಲನು ಬಳಸುವ ಗ್ರೀಕ್ ಪದವು ಮತ್ತೊಮ್ಮೆ ಹೊಸ ಒಡಂಬಡಿಕೆಯ ಮತ್ತಾಯ. 8:28 ರಲ್ಲಿ ಕಂಡುಬರುತ್ತದೆ. ಅಲ್ಲಿ ಇಬ್ಬರು ದೆವ್ವ ಹಿಡಿದ ಪುರುಷರನ್ನು ಅನಾಗರಿಕ ಮತ್ತು ಉಗ್ರರಂತೆ ಚಿತ್ರಿಸಲಾಗಿದೆ. ಈ ಕೊನೆಯ ದಿನಗಳಲ್ಲಿ ಸಭೆಯು ನಿರೀಕ್ಷಿಸಬಹುದಾದ ಶ್ರಮೆಯ ಪರಿಕಲ್ಪನೆಗಳನ್ನು ನಮಗೆ ನೀಡುತ್ತದೆ.

ಸಭೆಗೆ ಜನರು ಕೆಟ್ಟ ಸಮಯವನ್ನುಂಟು ಮಾಡುತ್ತಾರೆ. ಜನರು ದೇವರಿಗೆ ಪ್ರತಿಕೂಲರಾಗುತ್ತಾರೆ ಮತ್ತು ತಮ್ಮ ಬಗ್ಗೆ ಮಾತ್ರ ಕಾಳಜಿ ವಹಿಸಿಕೊಳ್ಳುವವರಾಗಿರುತ್ತಾರೆ.

1. ಕಡೇ ದಿವಸಗಳ ಜನರನ್ನು ಪೌಲನು ಹೇಗೆ ನಿರೂಪಿಸುತ್ತಾನೆ?

ಅ. ಅವರ ನೈತಿಕ ಮಾರ್ಗ (3:2-4)

ನಾವು ಪ್ರತಿ ಪದಕ್ಕೆ ವಿವರಣೆಯನ್ನು ನೀಡುವುದಿಲ್ಲ, ಆದರೆ ಪೌಲನು ನೀಡುತ್ತಿರುವ ಕೆಟ್ಟ ನಡವಳಿಕೆಯ ಪಟ್ಟಿಯು ದೇವರಿಲ್ಲದ ಮತ್ತು ಸ್ವಯಂ ಕೇಂದ್ರಿತ ಜೀವನದ ಅನಿವಾರ್ಯತೆಯ ಪರಿಣಾಮವಾಗಿದೆ. ಕೊನೆಯ ದಿನಗಳಲ್ಲಿ ಸಭೆಗೆ ತೊಂದರೆಯನ್ನುಂಟು ಮಾಡುವ ಮೂಲವೇನೆಂದರೆ ಜನರು ಸ್ವಯಂ ಪ್ರೇಮಿಗಳಾಗಿರುವ ವಿಚಾರವಾಗಿದೆ.

ಆ. ಅವರ ಧಾರ್ಮಿಕ ಆಚರಣೆ (3:5)

ಈ ಜನರು ತೋರಿಕೆಯ ಧಾರ್ಮಿಕ ಕಾರ್ಯಗಳನ್ನು ಹೊಂದಿರಬಹುದು. ಸಭಾಇತಿಹಾಸ ಮತ್ತು ಕ್ರೈಸ್ತೀಯ ಜಗತ್ತು ತಿಳಿಸುವುದೇನೆಂದರೆ ಇಂದು ಸಭೆಯು ಹೆಚ್ಚಾಗಿ ಧರ್ಮದ ಬಾಹ್ಯ ತೋರಿಕೆಯನ್ನು ಹೊಂದಿರುವ ಜನರಿಂದಲೂ ಮತ್ತು ನಿಜವಾಗಿಯೂ ಭ್ರಷ್ಟ ಹಾಗೂ ದೇವರಿಲ್ಲದ ಜನರಿಂದ ಪ್ರಭಾವಿತವಾಗಿದೆ ಎಂದು ಬಹಿರಂಗಪಡಿಸುತ್ತವೆ. ಯೇಸು ಪರಿಸಾಯರಲ್ಲಿ ಈ ರೀತಿಯ ಜನರನ್ನು ಎದುರಿಸಿದನು (ಮತ್ತಾಯ. 23:28). ಪೌಲನು ಸಹ ಕ್ರೈಸ್ತರು ಎಂದು ತೋರುವ ಜನರನ್ನು ತಿಳಿದಿದ್ದನು, ಆದರೆ ಇದು ಅವರ ಆಂತರ್ಯದ ನೈಜತೆಯನ್ನು ಪ್ರತಿಬಿಂಬಿಸದೆ ಹೊರಗಿನ ಸಂಗತಿಯನ್ನು ಮಾತ್ರ ತೋರಿಸುವಂತಹದ್ದಾಗಿತ್ತು. ಅವರು ದೇವರ ಶಕ್ತಿಯನ್ನು ಅಲ್ಲಗಳೆದರು. ನಾವು ಸಹ ತಿಮೊಥೆಯಂತೆ ಇದ್ದು ಅಂತಹ ಜನರಿಂದ ದೂರವಿರಬೇಕು!

ಇ. ಅವರ ಧಾರ್ಮಿಕತೆಯ ಉತ್ಸಾಹ (3:6-9)

ಈ ವರ್ಗದ ಜನರ ಕುರಿತು ಇರುವ ಭಯಾನಕ ವಿಷಯವೇನೆಂದರೆ ಅವರು ಇತರರನ್ನು ದಾರಿ ತಪ್ಪಿಸಲು ಮತ್ತು ಮೋಸಗೊಳಿಸಲು ಪ್ರಯತ್ನಿಸುತ್ತಿರುತ್ತಾರೆ. ಅವರು ದುರ್ಬಲರು ಮತ್ತು ಪಾಪದಲ್ಲಿ

ಜೀವಿಸುವವರನ್ನು ಮತ್ತು ತಮ್ಮನ್ನು ರಕ್ಷಿಸಿಕೊಳ್ಳಲು ಸುಲಭವಾಗಿ ತೋರಿಬರುವವುಗಳನ್ನು ಹಿಂಬಾಲಿಸುವವರನ್ನು ಗುರಿಯಾಗಿಟ್ಟುಕೊಳ್ಳುತ್ತಾರೆ. ಹಳೇ ಒಡಂಬಡಿಕೆಯ ವಾಕ್ಯಭಾಗದಲ್ಲಿ ಕಂಡುಬರುವ ಯನ್ನ ಮತ್ತು ಯಂಬ್ರರನ್ನು ಪೌಲನು ಉಲ್ಲೇಖಿಸುತ್ತಿದ್ದಾನೆ. ಇವರು ಫರೋಹನ ಆಸ್ಥಾನದಲ್ಲಿ ಮುಖ್ಯ ಮಂತ್ರಗಾರರಾಗಿದ್ದು, ಅವರು ಕೊನೆಯ ದಿನಗಳಲ್ಲಿ ಪೌಲ, ತಿಮೊಥೆ ಮತ್ತು ಇತರೆ ದೇವರ ಸೇವಕರುಗಳು ಬೋಧಿಸಿದ ಸತ್ಯವನ್ನು ವಿರೋಧಿಸಿದಂತೆ ಮೋಶೆಯನ್ನು ವಿರೋಧಿಸಿದರು. ಆದ್ದದರಿಂದ ಪೌಲನು ಕೊನೆಯ ದಿನದ ಜನರನ್ನು ಮತ್ತು ಸಮಯವನ್ನು ಹೀಗೆ ವಿವರಿಸುತ್ತಾನೆ.

2. ತಿಮೊಥೆಯನಿಗೆ ಪೌಲನು ನೀಡುತ್ತಿರುವ ಅಪ್ಪಣೆ

ಆದರೆ ಪೌಲನು ತಿಮೊಥೆಯನಿಗೆ ಕೊನೆಯ ದಿನಗಳ ಜನರ ಮನಸ್ಥಿತಿಯ ಸೊಂಕಿಗೆ ಒಳಗಾಗಬಾರದೆಂದು ಎಚ್ಚರಿಸುತ್ತಿದ್ದಾನೆ. ಬದಲಾಗಿ ತಿಮೊಥೆಯು ಜಗತ್ತು ಅದರ ಸ್ವಾರ್ಥದ ವಿರುದ್ಧವಾಗಿ ಧೈರ್ಯದಿಂದಲೂ ಮತ್ತು ಬಲದಿಂದಲೂ ನಿಂತುಕೊಳ್ಳಬೇಕು. ಅಧ್ಯಾಯದ ಕೊನೆಯಲ್ಲಿ (3:10-15) ಪೌಲನು ತಾನು ಪ್ರಾರಂಭಿಸಿದ್ದನ್ನು ಮುಂದುವರಿಸಿಕೊಂಡು ತನ್ನನ್ನು ಮಾದರಿಯನ್ನಾಗಿರಿಸಿಕೊಳ್ಳಲು ತಿಮೊಥೆಯನ್ನು ಪ್ರೋತ್ಸಾಯಿಸುತ್ತಿದ್ದಾನೆ.

ಪೌಲನು ದೇವರ ಭಯವಿಲ್ಲದ ಮತ್ತು ಸ್ವಾರ್ಥದಲ್ಲಿ ಜೀವಿಸುವ ಜನರ ಜೀವಿತವನ್ನು ತನ್ನ ಮತ್ತು ತಿಮೊಥೆಯ ಜೀವಿತದೊಂದಿಗೆ ಹೋಲಿಸಿ ವ್ಯತ್ಯಾಸವನ್ನು ತಿಳಿಸುತ್ತಿದ್ದಾನೆ. ಅವರು ವಿಭಿನ್ನವಾಗಿರಲು ಕರೆಯಲ್ಪಟ್ಟವರಾಗಿದ್ದಾರೆ. ಇದೇ ರೀತಿಯಾಗಿ ನಂಬಿಕೆಯಲ್ಲಿರುವ ಜನರು ಈ ಲೋಕದ ಜನರಿಂದ ವ್ಯತ್ಯಾಸವಾಗಿರಲು ಕರೆಯಲ್ಪಟ್ಟವರಾಗಿದ್ದಾರೆ.

ಪ್ರಾಯಶಃ ತಿಮೊಥೆಯು ಪೌಲನನ್ನು ಲುಸ್ತ್ರದಲ್ಲಿ ಮೊದಲನೇಯ ಬಾರಿಗೆ ಭೇಟಿಯಾಗಿದ್ದನು, ಆ ಪಟ್ಟಣದಲ್ಲಿ ಪೌಲನು ಹಿಂಸೆಗೆ ಒಳಗಾಗಿ ಬಹಳ ಶ್ರಮೆಯನ್ನು ಅನುಭವಿಸಿದ್ದನು. ಈ ವಿಧದ ಕ್ರೈಸ್ತತ್ವವು ತಿಮೊಥೆಯನ್ನು ಕ್ರಿಸ್ತನ ಕಾರ್ಯಕ್ಕಾಗಿ ತಾನು ಬದ್ಧನಾಗಿರುವಲ್ಲಿ ನಿರ್ಧರಿಸುವುದಕ್ಕೆ ಸಹಕಾರಿಯಾಗಿದೆ. ಇಲ್ಲಿ ಪೌಲನು ಬರೆಯುವುದೇನೆಂದರೆ ಯಾರೆಲ್ಲಾ ದೈವಿಕ ಜೀವಿತದಲ್ಲಿ ಜೀವಿಸಲು ನಿರ್ಧರಿಸುತ್ತಾರೋ ಅವರೆಲ್ಲರು ಶ್ರಮೆಯನ್ನು ಹಾದುಹೋಗಬೇಕೆಂದು ತಿಳಿಸುತ್ತಿದ್ದಾನೆ. ಲೌಕಿಕ ಜೀವನವನ್ನು ನಡೆಸುವವರಿಗೆ ದೈವಿಕ ಜೀವನವು ತೊಂದರೆ ಮತ್ತು ಭಯವನ್ನುಂಟು ಮಾಡುತ್ತದೆ. ಯೇಸು ಹೇಳಿದ್ದೇನೆಂದರೆ, "ಲೋಕವು ನಿಮ್ಮ ಮೇಲೆ ದ್ವೇಷಮಾಡುವುದಾದರೆ ಅದು ಮೊದಲು ನನ್ನ ಮೇಲೆ ದ್ವೇಷಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ. ದಣಿಗಿಂತ ಆಳು ದೊಡ್ಡವನಲ್ಲವೆಂಬುದಾಗಿ ನಾನು ನಿಮಗೆ ಹೇಳಿದ ಮಾತನ್ನು ಜ್ಞಾಪಕ ಮಾಡಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆಪಡಿಸುವರು; ಅವರು ನನ್ನ ಮಾತನ್ನು ಕೈಗೊಂಡು ನಡೆದರೆ ನಿಮ್ಮ ಮಾತನ್ನು ಸಹ ಕೈಕೊಂಡು ನಡೆಯುವರು" (ಯೋಹಾನ 15:18-20).

ವಿಶ್ವಾಸಿಗಳಾದ ನಾವು ಪ್ರಪಂಚದಲ್ಲಿರಲು ಕರೆಯಲ್ಪಟ್ಟವರಾಗಿದ್ದೇವೆ ಹೊರತು ಪ್ರಾಪಂಚಿಕರಾಗಿ ಜೀವಿಸಲು ಕರೆಯಲ್ಪಟ್ಟಿಲ್ಲ ಎಂಬುದನ್ನು ಅರಿತುಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದಾಗಿದೆ. ಮತ್ತು ಅವರು ಹಿಂಸೆಗೆ ಒಳಗಾಗುವುದು ಜಗತ್ತಿನಲ್ಲಿಯೇ. ಕ್ರಿಸ್ತನಲ್ಲಿರುವವರು ಆದರೆ ಲೋಕದಲ್ಲಿರದವರು ಹಿಂಸೆಗೆ ಒಳಗಾಗುವುದಿಲ್ಲ ಯಾಕೆಂದರೆ ಅವರು ಲೌಕಿಕ ಜನರ ಸಂಪರ್ಕದಲ್ಲಿರದವರಾಗಿದ್ದಾರೆ. ಜಗತ್ತಿನಲ್ಲಿರುವವರು ಆದರೆ ಕ್ರಿಸ್ತನಲ್ಲಿ ಇರದವರು ಸಹ ಹಿಂಸೆಗೆ ಒಳಗಾಗುವುದಿಲ್ಲ ಯಾಕೆಂದರೆ ಅವರ ಉತ್ಸಾಹವಿಲ್ಲದ ಧಾರ್ಮಿಕತೆಯ ವಿಚಾರಕ್ಕೆ ಜಗತ್ತು ವಿರುದ್ಧವಾಗಿ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಜಗತ್ತಿನಲ್ಲಿ ಮತ್ತು ಕ್ರಿಸ್ತನಲ್ಲಿ ಏಕಕಾಲದಲ್ಲಿ ಜೀವಿಸುವವರು ಮಾತ್ರ ಹಿಂಸೆಗೆ ಗುರಿಯಾಗುತ್ತಾರೆ. ಯಾಕೆಂದರೆ ಅವರು ಕ್ರಿಸ್ತನಲ್ಲಿ ನಿಜವಾದ ಜೀವನವನ್ನು ಹೊಂದಿರುವವರಾಗಿರುತ್ತಾರೆ.

ತಿಮೊಥೆಯನಿಗೆ ಪೌಲನಂತಹ ತನ್ನ ಶಿಕ್ಷಕರ ಮೂಲಕ ಮತ್ತು ಬಾಲ್ಯದಿಂದಲೇ ಶಾಸ್ತ್ರಗಳ ಜ್ಞಾನದಿಂದ ಕಲಿತದ್ದನ್ನು ಹಿಡಿದಿಟ್ಟುಕೊಳ್ಳಲು ಹೇಳಲಾಯಿತು.

ಚರ್ಚಿಸಿರಿ

2 ತಿಮೊಥೆ 3:14-17 ಅನ್ನು ಓದಿರಿ.

- ದೇವರ ವಾಕ್ಯವು ದೇವರ ಉಸಿರು ಎಂದು ಬರೆಯಲಾಗಿದೆ. ಇದರ ಅರ್ಥವು ಏನಾಗಿರಬಹುದೆಂದು ನೀವು ಆಲೋಚಿಸುವಿರಿ?
- ದೇವರ ವಾಕ್ಯವು ಉಪಯುಕ್ತವಾದದ್ದೆಂದು ಬರೆಯಲಾಗಿದೆ. ಇದು ಯಾವ ರೀತಿಯಲ್ಲಿ ಉಪಯುಕ್ತವಾಗಿದೆ?
- ನಿಮ್ಮ ಸ್ವಂತ ಜೀವನದಲ್ಲಿ ದೇವರ ವಾಕ್ಯವು ಯಾವ ರೀತಿಯಲ್ಲಿ ಉಪಯುಕ್ತವಾಗಿದೆ ಎಂದು ನೀವು ಕಂಡುಕೊಂಡಿದ್ದೀರಿ? ಉದಾಹರಣೆಗಳನ್ನು ನೀಡಿರಿ.

ಅಧ್ಯಾಯ 4: ಸುವಾರ್ತೆಯನ್ನು ಸಾರುವ ಅಪ್ಪಣೆ

1. ನಾಲ್ಕು ಎಚ್ಚರಿಕೆಗಳು

ಸುಳ್ಳುಬೋಧನೆಯಿಂದ ಸುವಾರ್ತೆಯನ್ನು ರಕ್ಷಿಸುವಂತೆ ಮತ್ತು ಅದಕ್ಕಾಗಿ ಶ್ರಮೆಯನ್ನು ಅನುಭವಿಸುವಂತೆ ಪೌಲನು ತಿಮೊಥೆಯನಿಗೆ ಈ ಮೊದಲೇ ಸಲಹೆಯನ್ನು ನೀಡಿದ್ದನು. ಈ ಅಧ್ಯಾಯದಲ್ಲಿ ಪೌಲನು ತಿಮೊಥೆಯನಿಗೆ ಸುವಾರ್ತೆಯನ್ನು ಸಾರಲು ಪ್ರೋತ್ಸಾಯಿಸುತ್ತಾನೆ ಮತ್ತು ಪ್ರೇರೇಪಿಸುತ್ತಾನೆ: *"ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು"* (4:2).

ಅ. ಸಿದ್ಧರಾಗಿರಿ



ಯಾವುದೇ ಪರಿಸ್ಥಿತಿಯಲ್ಲಿಯೂ ತಿಮೊಥೆಯು ಬೋಧಿಸಲು ಸಿದ್ಧನಾಗಿರಬೇಕು. ಸುವಾರ್ತೆಯ ಸಂದೇಶವು ತುರ್ತಾಗಿದೆ ಮತ್ತು ದೇವರ ಕೆಲಸಗಾರರು ಅದನ್ನು ಸಾರುವುದಕ್ಕಾಗಿ ಯಾವಾಗಲೂ ಸಿದ್ಧರಾಗಿರಬೇಕು. ಸಕಾಲದಲ್ಲಿಯೂ ಮತ್ತು ಸಕಾಲವಿಲ್ಲದೆ ಇದ್ದಾಗ್ಯೂ ಬೋಧಿಸುವಂತಹದ್ದು ಕೇಳುಗನಿಗಿಂತ ಸಾರುವವನೊಂದಿಗೆ ಹೆಚ್ಚು ಸಂಬಂಧವನ್ನು ಹೊಂದಿದೆ. ನಾವು ಸುವಾರ್ತೆಯನ್ನು ಜನರ ಮೇಲೆ ಒತ್ತಾಯಿಸಬಾರದು ಅಥವಾ ಅವರಿಗೆ ಅರಿವು ಇಲ್ಲದೆ ಇರಬಾರದು. ಆದರೆ ನಮಗೆ

ಅನುಕೂಲಕರವಾದ ಸಮಯಗಳಲ್ಲೂ ಹಾಗೂ ಅನಾನುಕೂಲಕರವಾದ ಸಮಯಗಳಲ್ಲೂ ನಾವು ಎಲ್ಲಾ ಸಮಯಗಳಲ್ಲೂ ಕಾರ್ಯಪ್ರವೃತ್ತರಾಗಿರಬೇಕು.

ಆ. ಸಂಬಂಧಿತರಾಗಿರಿ

ದೇವರ ವಾಕ್ಯವನ್ನು ಕೇಳುವವರು ದೇವರ ವಾಕ್ಯಕ್ಕೆ ತಮ್ಮ ಹೃದಯವನ್ನು ತೆರೆದು ಕೊಡುವ ರೀತಿಯಲ್ಲಿ ವಾಕ್ಯವನ್ನು ಬೋಧಿಸುವ ಬೋಧಕನು ಸೂಕ್ಷ್ಮವಾಗಿರಬೇಕು. ಅವರಿಗೆ ಸಂದೇಹವಿದೆಯೇ? ಅಥವಾ ಅವರಿಗೆ ಕಲಿಸುವ ಅಗತ್ಯತೆಯಿದೆಯೇ? ಅಥವಾ ಅವರು ಸುಳ್ಳುಬೋಧನೆಗೆ ಕಿವಿಗೊಟ್ಟಿದ್ದಾರೆಯೇ? ಮತ್ತು ಅವರನ್ನು ಸರಿಪಡಿಸಬೇಕೆ? ಅಥವಾ ಅವರು ಪಾಪವನ್ನು ಮಾಡಿದ್ದಾರೆಯೇ? ಮತ್ತು ಅವರನ್ನು ಖಂಡಿಸುವ ಅಗತ್ಯತೆವಿದೆಯೇ? ಅಥವಾ ಅವರು ಭಯಬ್ರಾಂತರಾಗಿದ್ದಾರೆಯೇ? ಮತ್ತು ಚಿಂತೆಗೆ ಒಳಗಾಗಿದ್ದಾರೆಯೇ? ಮತ್ತು ಅವರನ್ನು ಪ್ರೋತ್ಸಾಹಿಸುವ ಅಗತ್ಯತೆಯಿದೆಯೇ?

ಇ. ತಾಳ್ಮೆಯಿಂದಿರಿ

ಪವಿತ್ರಾತ್ಮನು ಜನರ ಜೀವಿತಗಳಲ್ಲಿ ಕಾರ್ಯಮಾಡಲು ನಾವು ಸ್ಥಳವನು ಮತ್ತು ಸಮಯವನ್ನು ನೀಡಬೇಕು. ಸುವಾರ್ತೆಯನ್ನು ಯಾರ ಮೇಲೂ ಬಲವಂತವಾಗಿ ಹೇರಬಾರದು, ಬದಲಾಗಿ ಅವರಿಗೆ ಬೇಕಾದಷ್ಟು ಸಮಯವನ್ನು ನಾವು ನೀಡಬೇಕು.

ಈ. ದೇವರ ವಾಕ್ಯದೊಂದಿಗೆ ಜಾಗರೂಕರಾಗಿರಿ

ನಿಮ್ಮ ಬೋಧನೆಯು ದೇವರ ವಾಕ್ಯದ ಮೇಲೆ ಕೇಂದ್ರೀಕೃತವಾಗಿರುವ ಎಚ್ಚರಿಕೆಯ ಸೂಚನೆಯಾಗಿದ್ದು ಅದು ಸತ್ಯವೇದವನ್ನು ಮತ್ತು ಅದರ ಸತ್ಯವನ್ನೊಳಗೊಂಡಿರಬೇಕು. ಒಬ್ಬ ಬೋಧಕನು ತನ್ನ ಸ್ವಂತ ಆಲೋಚನೆಗಳನ್ನು ತಿಳಿಸುವ ಅಗತ್ಯತೆಯಿರುವುದಿಲ್ಲ. ಹಾಗೆ ಮಾಡುವುದು ಒಂದು ಸುಳ್ಳುಬೋಧನೆಯಾಗಿದೆ. ಇದೇ ರೀತಿಯಾಗಿ ಉಪದೇಶವನ್ನು ಮಾಡತಕ್ಕದ್ದು.

2. ಸುವಾರ್ತೆಯನ್ನು ಸಾರಲು ಮೂರು ಕಾರಣಗಳು

ತಿಮೊಥೆಯು ಮತ್ತು ನಾವುಗಳು ಸುವಾರ್ತೆಯನ್ನು ಸಾರಲು ಪೌಲನು ಮೂರು ಕಾರಣಗಳನ್ನು ನೀಡುತ್ತಿದ್ದಾನೆ.

ಕಾರಣ 1: ಕ್ರಿಸ್ತನ ಆಗಮನ (4:1)

ಪೌಲನು ಯೇಸು ಕ್ರಿಸ್ತನ ಎರಡನೇಯ ಬರೋಣವನ್ನು ದೃಢವಾಗಿ ನಂಬುತ್ತಾನೆ. ಈ ಅಂಶದ ಕುರಿತು ಅನೇಕ ವರ್ಷಗಳ ಹಿಂದೆ ಪೌಲನು ಥೆಸಲೋನಿಕ ಸಭೆಗೆ ಬರೆದ ಪತ್ರದಲ್ಲಿ ಬಹಳ ಉತ್ಸಾಹದಿಂದ ಬರೆದಿದ್ದಾನೆ. ಈಗ ತನ್ನ ಸೇವೆಯ ಕೊನೆಯಲ್ಲಿ ತಾನು ಸಾಯುತ್ತೇನೆ ಎಂಬುದಾಗಿ ತಿಳಿದಿದ್ದರೂ ಅದರ ಮಧ್ಯದಲ್ಲಿ ತನ್ನ ರಾಜನು ಮತ್ತು ಯಜಮಾನನಾದ ಕರ್ತನ ಹಿಂದಿರುಗುವಿಕೆಯನ್ನು ಎದುರು ನೋಡುತ್ತಿದ್ದಾನೆ.

ಯೇಸು ಕ್ರಿಸ್ತನು ಸತ್ತವರಿಗೂ ಮತ್ತು ಜೀವಂತವಾಗಿರುವವರಿಗೂ ನ್ಯಾಯ ತೀರಿಸುವುದಕ್ಕಾಗಿ ಹಾಗೂ ತನ್ನ ರಾಜ್ಯವನ್ನು ಆಳುವುದಕ್ಕಾಗಿ ಅತೀ ಶೀಘ್ರದಲ್ಲಿ ಬರುತ್ತಿರುವುದರಿಂದ ನಾವು ಸುವಾರ್ತೆಯನ್ನು ಸಾರುವವರಾಗಿರಬೇಕು.

ಕಾರಣ 2: ಪ್ರಸ್ತುತ ಪರಿಸ್ಥಿತಿ (4:3-5)

ಲೋಕದ ಜನರು ಸತ್ಯವನ್ನು ಸಹಿಸಲಾರರು. ಅವರು ಸರಿಯಾದ ಬೋಧನೆಯನ್ನು ಕೇಳುವುದನ್ನು ನಿಲ್ಲಿಸಿದ್ದಾರೆ ಮತ್ತು ಅವರು ತಮ್ಮ ಸ್ವಂತ ಆಸೆಗಳ ಕುರಿತು ಮಾತ್ರ ಕಾಳಜಿವಹಿಸುವವರಾಗಿರುತ್ತಾರೆ. ಅವರು ತಮಗೆ ಸರಿತೋಚುವ ರೀತಿಯಲ್ಲಿ ಮಾತನಾಡುವ ಬೋಧಕರುಗಳ ಉಪದೇಶವನ್ನು ಕೇಳುವವರಾಗಿರುತ್ತಾರೆ.

ಸುವಾರ್ತೆಯನ್ನು ಸಾರಬೇಕು ಯಾಕೆಂದರೆ ಅದು ಸತ್ಯವಾಗಿದೆ ಮತ್ತು ತಿಮೊಥೆಯು ಅದರಲ್ಲಿ ದೃಢವಾಗಿ ನಿಲ್ಲಬೇಕು. ಜನರು ವಿಚಿತ್ರವಾದ ಮತ್ತು ಸುಳ್ಳಾದ ಬೋಧನೆಗಳಲ್ಲಿ ಆಸಕ್ತರಾಗಿರುತ್ತಾರೆ, ಆದರೆ ತಿಮೊಥೆಯು ಸ್ವಸ್ಥಚಿತ್ತವುಳ್ಳವನಾಗಿ ಸತ್ಯದಲ್ಲಿ ನೆಲೆಗೊಳ್ಳತಕ್ಕದ್ದು. ಜನರು ಸತ್ಯವನ್ನು ಕೇಳಲು ಬಯಸುವುದಿಲ್ಲ ಮತ್ತು ಅದು ತಿಮೊಥೆಯನಿಗೆ ಕಷ್ಟಕರವಾಗಿರುತ್ತದೆ. ಆದರೆ ತಿಮೊಥೆಯು ಶ್ರಮೆಯನ್ನು ತಾಳಿಕೊಳ್ಳುವುದು ಅವಶ್ಯವಾಗಿದೆ. ಜನರು ಸುವಾರ್ತೆಯ ಕುರಿತು ಅಜ್ಞಾನವುಳ್ಳವರಾಗಿರುತ್ತಾರೆ, ಅದಕ್ಕಾಗಿ ತಿಮೊಥೆಯು ಸುವಾರ್ತೆಯ ಕೆಲಸವನ್ನು ಮುಂದುವರಿಸತಕ್ಕದ್ದು. ಜನರು ತಿಮೊಥೆಯ ಸೇವೆ ಮತ್ತು ಉಪದೇಶದ ಕುರಿತು ವಿರೋಧಿಸುವವರಾಗಿರುತ್ತಾರೆ, ಆದರೆ ತಿಮೊಥೆಯು ತನ್ನ ಸೇವೆ ಮತ್ತು ಕರೆಯುವಿಕೆಯ ಕಾರ್ಯವನ್ನು ಪೂರೈಸುವವನಾಗಿರಬೇಕು.

ಕಾರಣ 3: ಪೌಲನ ಸ್ವಂತ ಪರಿಸ್ಥಿತಿ (4:6-8)

ಅಪೊಸ್ತಲನಾದ ಪೌಲನು ತನ್ನ ನಂಬಿಕೆಯ ಕುಮಾರನಾದ ತಿಮೊಥೆಯು ತನ್ನಿಂದ ನಂಬಿಕೆಯ ಕಾರ್ಯಗಳನ್ನು ತೆಗೆದುಕೊಳ್ಳುವಲ್ಲಿ ಪ್ರೋತ್ಸಾಹಿಸುವುದನ್ನು ನಾವು ಬಹುತೇಕವಾಗಿ ಕೇಳಬಹುದಾಗಿದೆ. ಈಗ ಪೌಲನು ತನ್ನ ಓಟವನ್ನು ಕೊನೆಗಾಣಿಸಿದ್ದಾನೆ, ಆದ್ದದರಿಂದ ಅದನ್ನು ಮುಂದುವರಿಸುವುದು ತಿಮೊಥೆಯನ ಜವಬ್ದಾರಿಯಾಗಿದೆ. ಪುನಃ ಪೌಲನು ಇದನ್ನು ರೂಪಾಲಂಕಾರದ ಮೂಲಕವಾಗಿ ವಿವರಿಸುತ್ತಿದ್ದಾನೆ: ಅವನು ಹೋರಾಟಗಾರನಂತೆ, ಓಟಗಾರನಂತೆ ಮತ್ತು ನಂಬಿಕೆಯ ನಿಧಿಯನ್ನು ನಿಷ್ಠೆಯಿಂದ ಕಾಪಾಡುವ ವ್ಯಕ್ತಿಯಂತೆ ಇದ್ದನು. ಈಗ ಅವನು ತನ್ನ ಬಹುಮಾನವನ್ನು ಸ್ವೀಕರಿಸುವ ಸಮಯ ಬಂದಿದೆ: ನೀತಿಯ ನ್ಯಾಯಾಧಿಪತಿಯಾದ ಯೇಸು ಕ್ರಿಸ್ತನಿಂದ ಅವನಿಗೆ ನೀಡಲ್ಪಡುವ ನೀತಿಯ ಜಯಮಾಲೆಯನ್ನು ಹೊಂದಲಿಕ್ಕಿದ್ದಾನೆ. ರೋಮ್‌ನ ಚಕ್ರವರ್ತಿಯಾದ ನೀರೋ ಪೌಲನನ್ನು ಮರಣದಂಡನೆಗೆ ವಿಧಿಸಬಹುದು, ಆದರೆ ಅದು ಅಂತ್ಯವಲ್ಲ. ನೀತಿವಂತ ನ್ಯಾಯಾಧಿಪತಿಯಾಧ ಯೇಸುವಿನ ಮುಂದೆ ಪೌಲನನ್ನು ನೀತಿವಂತನೆಂದು ಘೋಷಿಸಲಾಗುವುದು.

ಎಲ್ಲಾ ತಲೆಮಾರುಗಳಿಗೆ ಸುವಾರ್ತೆಯು ಸಾರಲ್ಪಡಬೇಕು. ಹಳೆಯ ಸಂತತಿಯು ಶಕ್ತಿಯನ್ನು ಕಳೆದುಕೊಂಡು ಮರಣದ ಕಡೆಗೆ ಸಾಗುತ್ತಿರುವಾಗ ಯುವ ಪೀಳಿಗೆಯ ಜನರು ಕರೆಗೆ ಹೆಗಲನ್ನು ನೀಡತಕ್ಕದ್ದು.

ಚರ್ಚಿಸಿರಿ

- ಸುವಾರ್ತೆಯನ್ನು ಸಾರಲು ಕ್ರಿಸ್ತನ ಬರುವಿಕೆ ಯಾಕೆ ಒಂದು ಕಾರಣವಾಗಿದೆ? ಕ್ರಿಸ್ತನ ಬರೋಣದ ಕುರಿತು ನೀವು ಆಗಾಗ್ಗೆ ಆಲೋಚಿಸುತ್ತೀರೋ? ನೀವು ಅದಕ್ಕಾಗಿ ಹಂಬಲಿಸುತ್ತಿದ್ದೀರಾ?
- ಇಂದಿನ ಪರಿಸ್ಥಿತಿಯು ಸುವಾರ್ತೆಯನ್ನು ಸಾರಲು ಯಾಕೆ ಕಾರಣವಾಗಿದೆ? ಜನರು ಸತ್ಯವನ್ನು ಕೇಳದೆ ಸುಳ್ಳುಬೋಧನೆಯನ್ನು ಹಿಂಬಾಲಿಸುತ್ತಾ ಇತರರ ಧರ್ಮಗಳಿಗೆ ಆಧ್ಯತೆಯನ್ನು ನೀಡುವುದನ್ನು ನೀವು ಅನುಭವಿಸಿದ್ದೀರಾ? ಈ ಸತ್ಯವನ್ನು ಎದುರಿಸುವುದು ನಿಮಗೆ ಸುಲಭವೋ ಅಥವಾ ಕಠಿಣವಾಗಿದೆಯೋ? ನಮ್ಮ ಕರೆಯಲ್ಲಿ ನಾವು ಒಬ್ಬರಿಗೊಬ್ಬರು ಸತತವಾಗಿ ಹೇಗೆ ಸಹಾಯ ಮಾಡಬಹುದಾಗಿದೆ?
- ನಾವು ಸುವಾರ್ತೆಯನ್ನು ಸಾರಲು ಹಳೇಯ ಪೀಳಿಗೆಯ ವಿಶ್ವಾಸಿಗಳು ಯಾಕೆ ಕಾರಣರಾಗಿದ್ದಾರೆ? ನಿಮ್ಮ ನಂಬಿಕೆಯಲ್ಲಿ ನೀವು ಹಳೇಯ ಪೀಳಿಗೆಯ ಮಾದರಿಯನ್ನು ಹೊಂದಿದ್ದೀರಾ? ನಿಮ್ಮ ಸಭೆಯಲ್ಲಿರುವ ಹಳೇಯ ಪೀಳಿಗೆಯು ಸೇವೆ ಮಾಡಲು ನಿಮ್ಮನ್ನು ನಂಬುತ್ತಾರೆ ಎಂದು ನೀವು ಭಾವಿಸುತ್ತೀರೋ ಅಥವಾ ಅವರು ನಿಮಗೆ ಅಡ್ಡಿಯಾಗುತ್ತಿದ್ದಾರೆಂದು ನೀವು ಅನುಭವಿಸುತ್ತಿದ್ದೀರೋ?

3. ಪೌಲನು ತನ್ನ ಹೃದಯದಿಂದ ಹಂಚಿಕೊಳ್ಳುತ್ತಾನೆ

ಈಗ ನಾವು ಪತ್ರಿಕೆಯ ಮುಕ್ತಾಯವನ್ನು ತಲುಪಿದ್ದೇವೆ. ಕೊನೆಯ ವಾಕ್ಯಗಳಲ್ಲಿ (4:9-22) ಪೌಲನು ತನ್ನ ಸ್ವಂತ ಪರಿಸ್ಥಿತಿಯನ್ನು ತಿಳಿಸುತ್ತಾ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾ ತನ್ನ ಹೃದಯದಿಂದ ಎಲ್ಲವನ್ನು ಹಂಚಿಕೊಳ್ಳುತ್ತಿದ್ದಾನೆ. ಈ ಪ್ರಬಲ ಅಪೊಸ್ತಲನು ಮತ್ತು ದೇವರು ಮನುಷ್ಯನು ತನ್ನದೆ ಆದ ದುರ್ಬಲತೆಯನ್ನು ಮತ್ತು ಪ್ರತ್ಯೇಕತೆ ಹಾಗೂ ಒಂಟಿತನದ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾನೆ. ಯಾಕೆ?

ಅ. ಆತನು ಒಂಟಿತನ ಮತ್ತು ನಿರ್ಜನತೆಯನ್ನು ಅನುಭವಿಸುತ್ತಿದ್ದಾನೆ (4:9-13; 19-21)

ಪೌಲನಿಗೆ ಸ್ನೇಹಿತರು ಮತ್ತು ನಿಕಟ ಸಂಬಂಧಿಗಳಿದ್ದರೆಂಬುದನ್ನು ನಾವು ಈ ವಾಕ್ಯಭಾಗದಿಂದ ಕಂಡುಕೊಳ್ಳುತ್ತೇವೆ. ಅವನಿಗೆ ಮುಖ್ಯವಾಧ ಅನೇಕ ಜನರುಗಳನ್ನು ಅವರ ಹೆಸರುಗಳಿಂದ ಉಲ್ಲೇಖಿಸಲಾಗಿದೆ, ಲೂಕನು ಸಹ ಆತನೊಂದಿಗೆ ರೋಮ್‌ನಲ್ಲಿದ್ದಾನೆ. ಪೌಲನು ಇತರರಿಂದ ಕೈಬಿಡಲ್ಪಟ್ಟವನಾಗಿ ಮತ್ತು ಅವರ ಅನ್ಯೋನ್ಯತೆಯನ್ನು ಕಳೆದುಕೊಂಡ ಅನುಭವವನ್ನು ಅನುಭವಿಸುತ್ತಿದ್ದಾನೆ. ಆತನು ಅಂತಹ ನಾಲ್ಕು ಜನರನ್ನು ಉಲ್ಲೇಖಿಸುತ್ತಿದ್ದಾನೆ. ಅವರುಗಳೆಂದರೆ: ದೇಮನು, ಕ್ರೆಸ್ಕನು, ತೀತನು ಮತ್ತು ತುಖಿಕನು. ಆತನು ಅವರೊಂದಿಗೆ ನಿಕಟವಾಗಿ ಕೆಲಸವನ್ನು ಮಾಡಿದವನು ಮತ್ತು ಅವರನ್ನು ನಂಬಿದವನಾಗಿದ್ದನು. ನಿಸ್ಸಂದೇಹವಾಗಿ ದೇಮನು ಇಹಲೋಕವನ್ನು ಪ್ರೀತಿಸಿ ಸೇವೆಯನ್ನು ತೊರೆದ ವಿಚಾರವು ಪೌಲನಲ್ಲಿ ಬಹಳ ವ್ಯಸನವನ್ನುಂಟುಮಾಡಿದೆ. ಇತರೆ ಮೂರು ಜನರು ಸೇವೆಯ ನಿಮಿತ್ತ ಆತನನ್ನು ಬಿಟ್ಟುಹೋಗಿದ್ದಾರೆ, ಅವರು ಹೋಗಿರುವಂತಹದ್ದು ನ್ಯಾಯಸಮ್ಮತವಾಗಿದ್ದರೂ ಪೌಲನು ಅವರಿಗಾಗಿ ಹಾತೊರೆಯುತ್ತಿದ್ದಾನೆ.

ಪೌಲನು ತನ್ನ ಒಂಟಿತನದಲ್ಲಿ ತಿಮೊಥೆಯನಿಗೆ ಮೂರು ಸಂಗತಿಗಳನ್ನು ಕೇಳುತ್ತಿದ್ದಾನೆ:

1. ಅವನಿಗೆ ಸಹವಾಸದಲ್ಲಿಟ್ಟುಕೊಳ್ಳಲು ಜನರು: ಪೌಲನು ತಿಮೊಥೆಯ ಅನ್ಯೋನ್ಯತೆಯನ್ನು ಕಳೆದುಕೊಂಡಿದ್ದಾನೆ. ಈಗ ಆತನು ತಿಮೊಥೆಯ ಸ್ನೇಹ ಮತ್ತು ಉಪಸ್ಥಿತಿಯನ್ನು ಬಯಸುತ್ತಿದ್ದಾನೆ. ಮನುಷ್ಯರಾದ ನಾವು ಒಡನಾಟಕ್ಕಾಗಿ ಸೃಷ್ಟಿಸಲ್ಪಟ್ಟವರಾಗಿದ್ದೇವೆ. ಮನುಷ್ಯನು ಒಂಟಿಯಾಗಿರುವುದು ಒಳ್ಳೆಯದಲ್ಲ.
2. ತಣ್ಣಗಿರುವ ಸೆರೆಮನೆಯಲ್ಲಿ ಬೆಚ್ಚಗಿನ ಬಟ್ಟೆಗಳು: ಚಳಿಗಾಲವು ಸಮೀಪಿಸುತ್ತಿರುವದರಿಂದ ಪೌಲನಿಗೆ ಬೆಚ್ಚಗಿರುವ ಬಟ್ಟೆಗಳ ಅವಶ್ಯಕತೆಯಿದೆ.
3. ಓದಲು ಪುಸ್ತಕಗಳು: ಪೌಲನು ಲಿಖಿತ ಪತ್ರಗಳನ್ನು ಹೊಂದಿರುವಂತೆ ಕಾಣುತ್ತದೆ. ಆತನು ಪತ್ರಗಳ ಮುಖಾಂತರ ಸಭೆಗಳೊಂದಿಗೆ ಸಂಪರ್ಕವನ್ನು ಹೊಂದಿದ್ದಾನೆ. ಪ್ರಾಯಶಃ ಆತನ ಬಳಿಯಲ್ಲಿ ತನ್ನ ಪತ್ರಗಳ ಪ್ರತಿಗಳನ್ನು ಹೊಂದಿರಬಹುದು. ಬಹುಶಃ ಆತನು ಹಳೇ ಒಡಂಬಡಿಕೆಯ ಪ್ರತಿಯನ್ನು ಸಹ ಹೊಂದಿದವನಾಗಿದ್ದಾನೆ. ಖಂಡಿತವಾಗಿ ಪೌಲನು ತನ್ನ ಸೆರೆಮನೆಯ ವಾಸದಲ್ಲಿ ಕರ್ತನೊಂದಿಗೆ ನಿಕಟ ಸಂಬಂಧವನ್ನು ಮತ್ತು ಸಹಾಯವನ್ನು ಹೊಂದಿದವನಾಗಿದ್ದಾನೆ. ಇನ್ನೂ ಆತನ ಮೂಲಭೂತ ಅಗತ್ಯತೆಗಳನ್ನು ಗಮನಿಸುವುದು ನಮಗೆ ಪ್ರಾಮುಖ್ಯವಾದದ್ದಾಗಿದೆ. ಅಂತಹ ಅಗತ್ಯತೆಗಳನ್ನು ನಾವು ತಿರಸ್ಕರಿಸಬಾರದು. ನಾವು ಒಂಟಿಗರಾಗಿರುವಾಗ ನಮಗೆ ಸ್ನೇಹಿತರು ಬೇಕು.

ನಾವು ಚಳಿಯಲ್ಲಿರುವಾಗ ನಮಗೆ ಬಟ್ಟೆ ಬೇಕು. ನಾವು ಬೇಸರಿಕೆಯಲ್ಲಿರುವಾಗ ನಮ್ಮ ಮನಸ್ಸಿಗೆ ಸವಾಲನ್ನು ಹಾಕಿ ನಮ್ಮನ್ನು ಮಾನಸಿಕವಾಗಿ ಸದೃಢರನ್ನಾಗಿ ಇಡಲು ನಮಗೆ ಪುಸ್ತಕಗಳು ಅಥವಾ ಇತರೆ ವಸ್ತುಗಳು ಬೇಕಾಗುತ್ತವೆ.

ಆ. ಆತನು ಕಂಚುಗಾರನಾದ ಅಲೆಕ್ಸಾಂದ್ರನಿಂದ ವಿರೋಧವನ್ನು ಎದುರಿಸಿದವನಾಗಿದ್ದನು (4:14-15)

ಕಂಚುಗಾರನಾದ ಅಲೆಕ್ಸಾಂದ್ರನ ಕುರಿತು ನಮಗೆ ಹೆಚ್ಚಿನ ಮಾಹಿತಿ ತಿಳಿದಿಲ್ಲ. ಅಲೆಕ್ಸಾಂಡರ್ ಎಂಬುದು ಸಾಮಾನ್ಯ ಗ್ರೀಕ್ ಮತ್ತು ರೋಮನ್ ಹೆಸರು. ಆದ್ದರಿಂದ ಅವನು 1 ತಿಮೊಥೆ 1:20 ಮತ್ತು ಅಪೊ.ಕೃತ್ಯ. 19:33 ರಲ್ಲಿ ಉಲ್ಲೇಖಿಸಲ್ಪಟ್ಟ ಅಲೆಕ್ಸಾಂದ್ರನು ಆಗಿರಲಿಕ್ಕಿಲ್ಲ. ಬಹುಶಃ ಪೌಲನ ಬಂಧನ ಮತ್ತು ಸೆರೆಮನೆ ವಾಸಕ್ಕೆ ಕಾರಣರಾದವರು ಇವರೆ ಎಂಬುದನ್ನು ಆತನು ತಿಳಿಸಿದ್ದನು. ಆದರೆ ಪಠ್ಯದಿಂದ ತಿಳಿಯುವ ವಿಷಯವೇನೆಂದರೆ, ಅಲೆಕ್ಸಾಂದ್ರನು ಪೌಲನ ಸಂದೇಶವನ್ನು ವಿರೋಧಿಸಿದನು ಮತ್ತು ಆತನಿಗೆ ಅನೇಕ ತೊಂದರೆಗಳನ್ನುಂಟು ಮಾಡಿದನು ಎಂಬುದು.

ಇ. ಆತನು ತನ್ನ ಮೊದಲನೇಯ ವಿಚಾರಣೆಯಲ್ಲಿ ಯಾವುದೇ ಬೆಂಬಲವನ್ನು ಪಡೆಯಲಿಲ್ಲ (4:16-18)

ರೋಮನ್ ಕಾನೂನಿನ ಪ್ರಕಾರ ಆರೋಪಿಗೆ ಒಬ್ಬ ವಕೀಲನನ್ನು ಮತ್ತು ಸಾಕ್ಷಿಯನ್ನು ಹೊಂದಲು ಅನುಮತಿಸಲಾಗಿತ್ತು. ಆದರೆ ಪೌಲನು ತನ್ನ ಪ್ರಕರಣದ ವಿಚಾರಣೆಗಾಗಿ ನ್ಯಾಯಾಲಯದಲ್ಲಿದ್ದಾಗ, ಔಪಚಾರಿಕ ವಿಚಾರಣೆಗೆ, ಮುಂಚಿನ ವಿಚಾರಣೆಗೆ ಪೌಲನ ಬೆಂಬಲಕ್ಕಾಗಿ ಯಾರು ಬರಲಿಲ್ಲ. ಕೆಲವು ಸತ್ಯವೇದ ಶಾಸ್ತ್ರಜ್ಞರು ಪೌಲನ ಪರಿಸ್ಥಿತಿಯನ್ನು ಶಿಷ್ಯರಿಂದ ತೊರೆಯಲ್ಪಟ್ಟು ಒಬ್ಬಂಟಿಗನಾಗಿ ಗೆತ್ಸೇಮನೆಯ ತೋಟದಲ್ಲಿ ಯೇಸು ಪ್ರಾರ್ಥಿಸಿದ ಪ್ರಾರ್ಥನೆಗೆ ಹೋಲಿಸಿದ್ದಾರೆ (ಮಾರ್ಕ 14:50). ಆದರೆ ಪೌಲನು ಒಬ್ಬಂಟಿಯಾಗಿರಲಿಲ್ಲ. ಕರ್ತನು ಆತನನ್ನು ಬಲಪಡಿಸಿ ತನ್ನ ಕೃಪೆಯನ್ನು ಅನುಗ್ರಹಿಸಿದಾತನಾಗಿದ್ದನು.

ಇಲ್ಲಿ ಪೌಲನು ತಿಮೊಥೆಯನಿಗೆ ಸುವಾರ್ತೆಯನ್ನು ಸಾರುವುದರ ಒಳ್ಳೆಯ ಮಾದರಿಯನ್ನು ತೋರಿಸುತ್ತಿದ್ದಾನೆ. ಮರಣದಂಡನೆಯ ಸಂಭವವನ್ನು ಎದುರಿಸುತ್ತಿರುವ ನಿಜವಾದ ಅಪಾಯದ ಹೊರತಾಗಿಯೂ ಮತ್ತು ಒಳ್ಳೆಯ ಕಾರಣಗಳ ಹೊರತಾಗಿಯೂ ಪೌಲನು ಸ್ವಯಂ ಕರುಣೆಯಿಂದ ಹೊರಬರುತ್ತಿಲ್ಲ. ಆತನು ತನ್ನ ಸಂರಕ್ಷಣೆಗೆ ಸಾಕ್ಷಿಯಾಗಿರದೆ ಕ್ರಿಸ್ತನಿಗಾಗಿ ಸಾಕ್ಷಿಯಾಗಿದ್ದಾನೆ. ಆತನು ತನ್ನ ಸ್ವಂತ ಕಾರಣಕ್ಕಾಗಿ ಅಲ್ಲ ಆದರೆ ಯೇಸುವಿನ ಕಾರಣಕ್ಕೆ ಸಮರ್ಥಿಸಿಕೊಳ್ಳುತ್ತಿದ್ದಾನೆ. ಇದು ಪೌಲನ ಜೀವಿತದಲ್ಲಿ ಸುವಾರ್ತೆಯನ್ನು ಸಾರುವಂತಹದ್ದು ಅನುಕೂಲ ಮತ್ತು ಅನಾನುಕೂಲವಾದ ಸಮಯದಲ್ಲಿಯೂ ಎಂಬುದನ್ನು ವಿವರಿಸುತ್ತದೆ (4:2). ಆದರೂ ಪೌಲನು ಎದ್ದುನಿಂತು ಧೈರ್ಯದಿಂದ ಸುವಾರ್ತೆಯನ್ನು ಸಾರಿದನು. "ಆದರೆ ಕರ್ತನು ನನ್ನ ಬಳಿಯಲ್ಲಿ ನಿಂತು ನನ್ನನ್ನು ಬಲಪಡಿಸಿ ನನ್ನ ಮೂಲಕ ಸುವಾರ್ತೆಯು ಸಂಪೂರ್ಣವಾಗಿ ಸಾರಲ್ಪಡುವಂತೆಯೂ ಅನ್ಯಜನರೆಲ್ಲರೂ ಅದನ್ನು ಕೇಳುವಂತೆಯೂ ಮಾಡಿದನು (4:17).

ಚರ್ಚಿಸಿರಿ

- ಪೌಲನ ಪ್ರತ್ಯೇಕತೆಯ ಮನೋಭಾವನೆಗೆ ಯಾವ ಅಂಶಗಳು ಕಾರಣವಾಗಿವೆ?
- ಪೌಲನು ಇಲ್ಲಿ ಯಾವ ಮಾನವ ಅಗತ್ಯತೆಗಳನ್ನು ತೋರಿಸುತ್ತಿದ್ದಾನೆ?
- ಅವನ ಪರಿಸ್ಥಿತಿಯನ್ನು ನೀವು ಅರ್ಥಮಾಡಿಕೊಳ್ಳಬಹುದೇ? ನೀವು ಒಂಟಿತನವನ್ನು ಅನುಭವಿಸಿದ್ದೀರಾ? ನೀವು ಜನರಿಂದ ತೊರೆಯಲ್ಪಟ್ಟಿದ್ದೀರಾ? ನಿಮಗೆ ಪ್ರಾಯೋಗಿಕ ಸಹಾಯಕ ಅಗತ್ಯತೆವಿದೆಯೋ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

4. ಉಪಸಂಹಾರ

ಈ ಪತ್ರದಲ್ಲಿ ಪೌಲನು ತನ್ನ ನಂಬಿಕೆಯನ್ನು ಹಂಚಿಕೊಳ್ಳುತ್ತಾ ಸಭೆಗೆ ಕೊಡಲ್ಪಟ್ಟ ಸ್ವಸ್ಥಬೋಧನೆಯ ಸುವಾರ್ತೆಯನ್ನು ಕಾಯುವ ಮತ್ತು ಅದನ್ನು ಸಾರುತ್ತಾ ಅದಕ್ಕಾಗಿ ಶ್ರಮೆಯನ್ನು ಅನುಭವಿಸಲು ನಾವು ಸಿದ್ಧರಾಗಿರಬೇಕೆಂದು ತಿಳಿಸುತಿದ್ದಾನೆ.

ಅಪೊಸ್ತಲನಾದ ಪೌಲನ ಬರಹಗಳಲ್ಲಿ ಉಳಿದಿರುವ ಕೆಲವು ಅಂತಿಮ ವಾಕ್ಯಗಳನ್ನು ಓದುವುದರ ಮೂಲಕ ನಾವು ಈ ಧ್ಯಯನವನ್ನು ಕೊನೆಗಾಣಿಸೋಣ!

"ಕರ್ತನು ನಿನ್ನ ಆತ್ಮದ ಸಂಗಡ ಇರಲಿ" (2 ತಿಮೊಥೆ 4:22)

"ಯುಗಾಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೇನ್" (2 ತಿಮೊಥೆ. 4:18)

ಪ್ರಾರ್ಥನೆ

ಅಪೊಸ್ತಲನಾದ ಪೌಲನ ಜೀವನ ಮತ್ತು ಜ್ಞಾನಕ್ಕಾಗಿ ದೇವರಿಗೆ ಕೃತಜ್ಞತೆಗಳು

ಸುಳ್ಳುಬೋಧನೆಯಿಂದ ಸಭೆಯ ನಂಬಿಗಸ್ತಿಕೆಯಿಂದ ಸುವಾರ್ತೆಯನ್ನು ಕಾಪಾಡಬೇಕೆಂದು ಪ್ರಾರ್ಥಿಸಿರಿ.

ಸುವಾರ್ತೆಗಾಗಿ ಸಭೆಯು ಶ್ರಮೆಯನ್ನು ಅನುಭವಿಸಲು ಮತ್ತು ವಿರೋಧವನ್ನು ಎದುರಿಸಲು ಸಿದ್ಧವಾಗಿರಲು ಪ್ರಾರ್ಥಿಸಿರಿ.

ಈ ತೊಂದರೆಯ ಕೊನೆಯ ದಿನಗಳಲ್ಲಿ ಸಭೆಯು ಸುವಾರ್ತೆಯನ್ನು ಹಿಡಿದಿಟ್ಟುಕೊಳ್ಳುವಂತೆ ಪ್ರಾರ್ಥಿಸಿರಿ, ಇದರಿಂದ ಯೇಸುವು ಹಿಂದಿರುಗುವವರೆಗೂ ಸಭೆಯು ಸುವಾರ್ತೆಯನ್ನು ಸಾರುತ್ತದೆ ಮತ್ತು ಸ್ವಸ್ಥಬೋಧನೆಯನ್ನು ಬೋಧಿಸುತ್ತದೆ.



ಶಿಕ್ಷಕರ ಕೈಪಿಡಿ

ಸಾಮಾನ್ಯ ಸಲಹೆಗಳು

ಐದು ವಿದ್ಯಾರ್ಥಿಗಳ ಗುರಿಗಳು

1. ವಿದ್ಯಾರ್ಥಿಗಳು ತಮ್ಮ ಓದುವ ಮತ್ತು ಅರ್ಥಮಾಡಿಕೊಳ್ಳುವ ಕೌಶಲ್ಯವನ್ನು ಮತ್ತಷ್ಟು ಅಭಿವೃದ್ಧಿಪಡಿಸಬೇಕು.
2. ವಿದ್ಯಾರ್ಥಿಗಳು ತಾವು ಓದಿದ್ದನ್ನು ಯೋಚಿಸಲು ಮತ್ತು ಅವರು ಅರ್ಥಮಾಡಿಕೊಂಡ ವಿಷಯಗಳಿಂದ ತಿರ್ಮಾನಗಳನ್ನು ತೆಗೆದುಕೊಳ್ಳಲು ನಿರಂತರವಾಗಿ ಪ್ರೋತ್ಸಾಹಿಸಬೇಕು.
3. ವಿದ್ಯಾರ್ಥಿಗಳು ಸಭಾಪಾಲಕರ ಪತ್ರಿಕೆಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು.
4. ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡಿದ್ದನ್ನು ತಮ್ಮದೇ ಆದ ದಕ್ಷಿಣ ಭಾರತದ ಸಮಕಾಲೀನ ಪರಿಸ್ಥಿತಿಗೆ ಅನ್ವಯಿಸಿಕೊಳ್ಳಲು ಪ್ರೋತ್ಸಾಯಿಸುವುದು.
5. ಸಭಾಪಾಲಕರ ಪತ್ರಿಕೆಗಳ ಪಠ್ಯಗಳನ್ನು ವಿದ್ಯಾರ್ಥಿಗಳು ಮುಂಜಾನೆಯ ಧ್ಯಾನಕ್ಕಾಗಿ, ಸತ್ಯವೇದ ಅಧ್ಯಯನಕ್ಕಾಗಿ ಹಾಗೂ ಪ್ರಸಂಗಕ್ಕಾಗಿ ಉಪಯೋಗಿಸಿಕೊಳ್ಳುವಂತೆ ಉತ್ತೇಜಿಸುವುದು.

ಶಿಕ್ಷಕರಿಗೆ ಕೆಲವು ಸಾಮಾನ್ಯ ಸಲಹೆಗಳು

1. ಸಾಧ್ಯವಾದಷ್ಟು ಉಪನ್ಯಾಸ ಮತ್ತು ಬೋಧನೆಯನ್ನು ಕಡಿಮೆ ಮಾಡಿರಿ.
2. ಗುಂಪು ಚರ್ಚೆಯ ಆಧಾರಿತವಾಗಿರಲಿ ನಿಮ್ಮ ಬೋಧನಾ ಶೈಲಿ. ಈ ಪಠ್ಯಪುಸ್ತಕವು ತರಗತಿಯಲ್ಲಿನ ಚರ್ಚೆಯನ್ನು ಮತ್ತು ಆಲೋಚನೆ ಹಾಗೂ ಅನುಭವಗಳನ್ನು ಹಂಚಿಕೊಳ್ಳಲು ಅನುಮತಿಸುತ್ತದೆ.
3. ಎಲ್ಲಾ ವಿದ್ಯಾರ್ಥಿಗಳು ತರಗತಿಯಲ್ಲಿ ಸಕ್ರಿಯರಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳಿ. ಮೌನವಾಗಿರುವ, ನಾಚಿಕೆಪಡುವ ಅಥವಾ ದುರ್ಬಲ ವಿದ್ಯಾರ್ಥಿಗಳನ್ನು ಪ್ರೋತ್ಸಾಯಿಸಿ..
4. ವಿದ್ಯಾರ್ಥಿಗಳನ್ನು ಎಂದಿಗೂ ಅಪಹಾಸ್ಯಮಾಡಬೇಡಿ, ಅವರನ್ನು ಪ್ರೋತ್ಸಾಹಿಸಿರಿ.
5. ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಲಿಕ್ಕೆ ಪ್ರೋತ್ಸಾಹಿಸಿರಿ ಮತ್ತು ಅವೆಲ್ಲಕ್ಕೂ ನೀವೇ ಉತ್ತರಿಸಲು ಸಾಧ್ಯವಾಗದಿದ್ದರೆ ಮುಜುಗರಪಡಬೇಡಿ. ಯಾವುದೇ ಸತ್ಯವೇದ ಶಿಕ್ಷಕನ ಬಳಿಯಲ್ಲಿ ಎಲ್ಲಾ ಉತ್ತರಗಳು ಇರುವುದಿಲ್ಲ.
6. ಪೆದ್ದ ಅಥವಾ ಅಸಂಭದ್ದ ಪ್ರಶ್ನೆಗಳಿಂದ ವಿದ್ಯಾರ್ಥಿಗಳು ನಿಮ್ಮನ್ನು ಮತ್ತು ನಿಮ್ಮ ತರಗತಿಯನ್ನು ಅಡ್ಡದಾರಿ ಹಿಡಿಯಲು ಬಿಡಬೇಡಿ. ತರಗತಿಯ ಸಮಯ ಅಮೂಲ್ಯವಾಗಿದೆ ಮತ್ತು ವ್ಯರ್ಥಮಾಡಬಾರದು.

ಆಲೋಚನೆಯ ಸಲಹೆಗಳು

ಶಿಕ್ಷಕರುಗಳಾಗಿ ನೀವು ಬೋಧಿಸುವ ನಿಮ್ಮ ವಿಷಯಗಳನ್ನು ನೀವು ಸರಿಯಾಗಿ ತಿಳಿದುಕೊಳ್ಳುವುದು ಮುಖ್ಯವಾಗಿದೆ. ಈ ತರಗತಿಗಳನ್ನು ಪ್ರಾರಂಭಿಸುವುದಕ್ಕಿಂತ ಮೊದಲು ನೀವೇ ಸಭಾಪಾಲಕರ ಪತ್ರಿಕೆಗಳನ್ನು ಹಲವಾರುಬಾರಿ ಓದಿರಿ.

ಮೇಲಿರುವ ವಿದ್ಯಾರ್ಥಿಗಳ ಗುರಿಗಳ ಪಟ್ಟಿಯನ್ನು ವಿದ್ಯಾರ್ಥಿಗಳೊಂದಿಗೆ ಓದಿರಿ ಮತ್ತು ಈ ತರಗತಿಯಲ್ಲಿ ಅವರು ಏನನ್ನು ಕಲಿಯಲು ನಿರೀಕ್ಷಿಸಬಹುದು ಮತ್ತು ಈ ವಿಷಯಗಳ ಬಗ್ಗೆ ಅವರಿಗೆ ವಿವರವಾಗಿ ತಿಳಿಸಿರಿ.

ಪ್ರತೀಪಾಠ

ಪ್ರತೀಪಾಠಗಳ ಮುಂಚೆ ವಿಷಯ ವಸ್ತುಗಳನ್ನು ಎಚ್ಚರಿಕೆಯಿಂದ ಓದಿರಿ. ನೀವು ಮೊದಲು ವಿಷಯವಸ್ತುವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಚರ್ಚೆಯ ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ಅಧ್ಯಯನ ಮಾಡಿರಿ. ನಿಮಗೆ ಹೆಚ್ಚಿನ ಮಾಹಿತಿ ಬೇಕಾದರೆ ಅಥವಾ ಅಗತ್ಯವಿದ್ದರೆ ಗ್ರಂಥಾಲಯಗಳಲ್ಲಿ ಈ ವಿಷಯದ ಕುರಿತ ಅಧ್ಯಯನ ಪುಸ್ತಕಗಳನ್ನು ಹುಡುಕಿರಿ.

ಚರ್ಚೆಯ ಪ್ರಶ್ನೆಗಳು ಮತ್ತು ಉತ್ತರಕ್ಕಾಗಿ ಸಲಹೆಗಳು

ಈ ಪಠ್ಯಪುಸ್ತಕದಲ್ಲಿನ ಉತ್ತರಗಳು ಪೂರ್ಣವಾಗಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿರಿ. ಅವುಗಳು ನಿಮಗೆ ಸಹಾಯಮಾಡುವುದಕ್ಕಾಗಿ ಅಲ್ಲಿ ಕೊಡಲ್ಪಟ್ಟಿವೆ. ಆದರೆ ಸರಿಯಾದ ಉತ್ತರಗಳು ವಿಭಿನ್ನವಾದ ಶೈಲಿಯಲ್ಲಿ ವ್ಯಕ್ತಪಡಿಸಬಹುದು ಮತ್ತು ಹೆಚ್ಚುವರಿ ಅಂಶಗಳನ್ನು ಹೊಂದಿರುತ್ತವೆ. ಇದರರ್ಥ ವಿದ್ಯಾರ್ಥಿಗಳ ಉತ್ತರಗಳು ಸರಿಯಾಗಿರಬಹುದು. ಒಂದು ವೇಳೆ ಅವುಗಳು ಕೊಡಲ್ಪಟ್ಟ ಪುಸ್ತಕಗಳಲ್ಲಿ ಇರುವುದಕ್ಕಿಂತಲೂ ವ್ಯತ್ಯಾಸವಾಗಿರಬಹುದು. ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿಲ್ಲ, ಬದಲಾಗಿ ವಿದ್ಯಾರ್ಥಿಗಳು ಈ ಪ್ರಶ್ನೆಗಳ ಮತ್ತು ಸಮಸ್ಯೆಗಳ ಬಗ್ಗೆ ಪ್ರತಿಬಿಂಬಿಸುವಾಗ ತಮ್ಮದೇ ಆದ ಆಲೋಚನೆಗಳು, ಭಾವನೆಗಳು ಮತ್ತು ಅನುಭವಗಳನ್ನು ಬಳಸಬೇಕೆಂದು ನಿರೀಕ್ಷಿಸಲಾಗಿದೆ.

ಅಧ್ಯಯನದ ಮಾರ್ಗದರ್ಶಿ

ಈ ಪುಸ್ತಕದ ವಿಷಯವು ಕನಿಷ್ಠಪಕ್ಷ ಐದು ದಿನಗಳಲ್ಲಿ ಅಭ್ಯಾಸಿಸಬೇಕು, ಆದರೆ ಇದನ್ನು ಎಂಟು ದಿನಗಳವರೆಗೂ ಉಪಯೋಗಿಸಬಹುದು. ಈ ತರಗತಿಯನ್ನು ಈ ರೀತಿಯಾಗಿ ಯೋಜಿಸಬಹುದು:

ಮೊದಲನೇ ದಿನ

ಸಭಾಪಾಲಕರ ಪತ್ರಿಕೆಯ ಸಾರಾಂಶದೊಂದಿಗೆ ಈ ಕೋರ್ಸ್ ಅನ್ನು ಪ್ರಾರಂಭಿಸಿರಿ. ಇದು ಪತ್ರಿಕೆಯ ಹಿನ್ನಲೆ ಮತ್ತು ನೈಜತೆಯನ್ನು ನೀಡುತ್ತದೆ.

ಗ್ರಂಥಾಲಯದ ಕೆಲಸ

ವಿದ್ಯಾರ್ಥಿಗಳು ತಿಳಿಸಲ್ಪಟ್ಟ ಸತ್ಯಾಂಶಗಳನ್ನು ಪುನರ್‌ವರ್ತಿಸುತ್ತಾ ಮೊದಲನೇಯ ಮತ್ತು ಎರಡನೇಯ ತಿಮೊಥೆ ಹಾಗೂ ತೀತ ಪತ್ರಿಕೆಗಳನ್ನು ಸಂಪೂರ್ಣವಾಗಿ ಓದಬೇಕು. ಅವರು ಓದುತ್ತಿರುವಾಗ ಪ್ರಶ್ನೆಗಳನ್ನು ಹೊಂದಿದ್ದರೆ ಮುಂದಿನ ತರಗತಿಗಾಗಿ ಅವುಗಳನ್ನು ಬರೆದಿಟ್ಟುಕೊಳ್ಳಬೇಕು.

ಎರಡನೇ ದಿನ

ತರಗತಿಯಲ್ಲಿ ಮೊದಲನೇ ತಿಮೊಥೆಯನ್ನು ಗಟ್ಟಿಯಾಗಿ ಓದುವ ಮೂಲಕ ಈ ದಿನದ ತರಗತಿಯನ್ನು ಪ್ರಾರಂಭಿಸಿರಿ. ವಿದ್ಯಾರ್ಥಿಗಳು ಒಬ್ಬರಾದ ನಂತರ ಒಬ್ಬರು ಓದಲಿ. ತಿಮೊಥೆಯ ಪತ್ರಿಕೆಯ ಕುರಿತ ನೈಜತೆಯನ್ನು ಮತ್ತು ಆರು ಮುಖ್ಯ ಅಂಶಗಳ ರಚನೆಯನ್ನು ನೋಡಿರಿ. ಮೊದಲ ಮೂರು ಅಂಶಗಳನ್ನು ಚರ್ಚಿಸಿರಿ (ಸತ್ಯಬೋಧನೆ ಮತ್ತು ಸುಳ್ಳುಬೋಧಕರು, ಸಭೆಯ ಸಾರ್ವತ್ರಿಕ ಆರಾಧನೆ ಮತ್ತು ಸಭೆಯ ಹಿರಿಯರು ಮತ್ತು ನಾಯಕರುಗಳು) ಮತ್ತು ಚರ್ಚೆಯ ಪ್ರಶ್ನೆಗಳನ್ನು ಉಪಯೋಗಿಸಿರಿ.

ಮೂರನೇ ದಿನ

ಗ್ರಂಥಾಲಯ ಸಮಯದ ಪ್ರಶ್ನೆಯೊಂದಿಗೆ ಈ ದಿನವನ್ನು ಪ್ರಾರಂಭಿಸಿರಿ. ಮೊದಲನೇಯ ತಿಮೊಥೆಯ ಅಭ್ಯಾಸವನ್ನು ಮುಗಿಸಿರಿ. 1 ತಿಮೊಥೆ 6:11-16 ಅನ್ನು ಗ್ರಂಥಾಲಯ ಕೆಲಸಕ್ಕಾಗಿ ಉಳಿಸಿರಿ.

ಗ್ರಂಥಾಲಯ ಕೆಲಸ

ವಿದ್ಯಾರ್ಥಿಗಳು 1 ತಿಮೊಥೆ. 6:11-6 ಅನ್ನು ಓದುತ್ತಾರೆ ಮತ್ತು ವಿಷಯಾ ಆಧಾರಿತವಾದ ಪ್ರಶ್ನೆಗಳನ್ನು ಚರ್ಚಿಸಿರಿ.

ನಾಲ್ಕನೇ ದಿನ - ಏಕಾಂತತೆ

ಒಂದು ದಿನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ವಿದ್ಯಾರ್ಥಿಗಳು ಮೊದಲನೇಯ ತಿಮೊಥೆ ಪತ್ರವನ್ನು ಪ್ರತಿಬಿಂಬಿಸಲು ಸಮಯವನ್ನು ನೀಡಲಾಗುತ್ತದೆ. ಪ್ರಾಯಶಃ ಪ್ರತಿಭಾಗಕ್ಕೆ ನೀಡುವ ಸಮಯವು ಬದಲಾಗಬಹುದು. ಆದ್ದದರಿಂದ ಶಿಕ್ಷಕರು ಇದರ ಕುರಿತು ಜಾಗೃತೆಯಿಂದ ಇರಬೇಕು.

ಭಾಗ ಒಂದು

ಇಡೀ ತರಗತಿಯನ್ನು ಒಂದುಗೂಡಿಸಿರಿ. ಈ ವಾಕ್ಯಭಾಗವನ್ನು ನೆನಪಿಸಿಕೊಳ್ಳುತ್ತಾ ಪ್ರಾರ್ಥಿಸಿರಿ. ಈ ದಿನದಲ್ಲಿ ದೇವರು ನಿಮ್ಮನ್ನು ಮಾರ್ಗದರ್ಶಿಸಿ ನಡೆಸುವಂತೆ. 2:1-7 ರಲ್ಲಿರುವ ಪೌಲನ ಸಲಹೆಗಳನ್ನು ಹಿಂಬಾಲಿಸಿರಿ.

ಕರ್ನಾಟಕದಲ್ಲಿಯೂ ಮತ್ತು ಭಾರತದಲ್ಲಿ ಅಧಿಕಾರದಲ್ಲಿರುವ ಎಲ್ಲಾ ರಾಜಕೀಯ ನಾಯಕರುಗಳಿಗಾಗಿ ಪ್ರಾರ್ಥಿಸಿರಿ. ಅವರ ಹೆಸರುಗಳನ್ನು ಬೋರ್ಡ್ ಮೇಲೆ ಬರೆಯಿರಿ ಹಾಗೂ ಅವರು ದೇಶವನ್ನು ಮತ್ತು ಜನರನ್ನು ತಿಳುವಳಿಕೆ ಜ್ಞಾನದಿಂದ ಮುನ್ನಡೆಸುವಂತೆಯೂ ಹಾಗೂ ಅವರು ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿಯೂ ಮತ್ತು ಅವರ ಅರಸನನ್ನಾಗಿಯೂ ಅಂಗೀಕರಿಸಿಕೊಳ್ಳುವಂತೆ ಪ್ರಾರ್ಥಿಸಿರಿ.

ಭಾಗ ಎರಡು

ಎರಡು ಅಥವಾ ಮೂರು ಜನರ ಗುಂಪುಗಳು ಇರಲಿ. 1 ತಿಮೊಥೆ 4 ಅನ್ನು ಜೋರಾಗಿ ಮತ್ತು ನಿಧಾನವಾಗಿ ಒಟ್ಟಿಗೆ ಓದಿರಿ. ಸ್ವಲ್ಪಸಮಯದವರೆಗೂ ಪಠ್ಯಭಾಗವನ್ನು ಶಾಂತವಾಗಿ ಅಧ್ಯಯನ ಮಾಡಿರಿ ಮತ್ತು ನಂತರದಲ್ಲಿ ಚರ್ಚಿಸಿರಿ.

- ದೇವರ ಕುರಿತು ನಾವು ಏನನ್ನು ಕಲಿಯುತ್ತೇವೆ?
- ಮಾನವ ಕುಲದ ಕುರಿತು ನಾವು ಏನನ್ನು ಕಲಿಯುತ್ತೇವೆ?
- ಸಭೆಯಲ್ಲಿರುವ ಸುಳ್ಳುಬೋಧಕರ ಕುರಿತು ನಾವು ಏನನ್ನು ಕಲಿಯುತ್ತೇವೆ?
- ನಮ್ಮ ಸ್ವಂತ ಜೀವನ ಮತ್ತು ಉದಾಹರಣೆಗಳ ಕುರಿತು ನಾವು ಏನನ್ನು ಕಲಿಯುತ್ತೇವೆ?
- ಈ ಪಠ್ಯಭಾಗವನ್ನು ನೀವು ಓದಿದ ನಂತರ ನಿಮ್ಮ ಜೀವಿತದಲ್ಲಿ ನೀವು ಏನನ್ನು ಬದಲಾಯಿಸಿಕೊಳ್ಳಲು ಬಯಸುತ್ತೀರಿ?

ನೀವು ಪ್ರಸ್ತಾಪಿಸಿದ ವಿಷಯಗಳಿಗಾಗಿ ಒಟ್ಟಾಗಿ ಒಬ್ಬರಿಗೊಬ್ಬರು ಪ್ರಾರ್ಥಿಸಿರಿ. ಗುಂಪಿನಲ್ಲಿ ಇಡೀ ಪಠ್ಯವನ್ನು ಶಬ್ದವಾಗಿ ಓದುವುದರ ಮೂಲಕ ಮುಗಿಸಿರಿ.

ಭಾಗ ಮೂರು

ಪ್ರತೀ ವಿದ್ಯಾರ್ಥಿಯು 1 ತಿಮೊಥೆ 3:1-7 ಅನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುತ್ತಾನೆ. ನಿಮ್ಮ ವೈಯಕ್ತಿಕ ಜೀವಿತವನ್ನು ಪ್ರತಿಬಿಂಬಿಸಿರಿ. ನೀವು ನಿಮ್ಮ ಜೀವಿತಗಳಲ್ಲಿರುವ ಬಲವಾದ ಸಂಗತಿಗಳನ್ನು ಮತ್ತು ನೀವು ಬದಲಾಯಿಸಲು ಮತ್ತು ಬೆಳೆಯಲು ಅಗತ್ಯವಿರುವ ಸಂಗತಿಗಳನ್ನು ಬರೆಯಿರಿ. ನೀವು ವ್ಯಕ್ತಿಗತವಾಗಿ ದೇವರನ್ನು ಹುಡುಕಿರಿ. ಆತನ ಮಾರ್ಗದರ್ಶನಕ್ಕಾಗಿ ಕೇಳಿಕೊಳ್ಳಿರಿ. ನನ್ನ ಜೀವಿತವು ಹೇಗೆ ಬದಲಾಗಬೇಕು? ಮತ್ತು ದೇವರಿಗೆ ಮಹಿಮೆಪಡಿಸುವ ಜೀವನವನ್ನು ನಾನು ಹೇಗೆ ಜೀವಿಸಬೇಕೆಂಬುದನ್ನು ಕೇಳಿಕೊಳ್ಳಿರಿ?

ಭಾಗ ನಾಲ್ಕು

ಮತ್ತೇ ಇಡೀ ತರಗತಿಯನ್ನು ಒಟ್ಟುಗೂಡಿರಿ. 1 ತಿಮೊಥೆಯ ಅಧ್ಯಯನದ ಕೊನೆಯಲ್ಲಿ ಪೌಲನು ಶ್ರೀಮಂತಿಕೆಯನ್ನು ಮತ್ತು ಬಡತನವನ್ನು ಚರ್ಚಿಸುವ ಒಂದು ಭಾಗವಿದೆ. ಪಠ್ಯಪುಸ್ತಕದಲ್ಲಿ ಹಣದ ಕುರಿತು ಪೌಲನು ಏನು ಹೇಳುತ್ತಾನೆ ಎಂಬುದರ ಸಾರಾಂಶವಿದೆ:

- ಭೌತಿಕತೆಯ ವಿರುದ್ಧ ಪೌಲನು ಸರಳತೆಯ ಜೀವನ ಶೈಲಿಯನ್ನು ತಿಳಿಸುತ್ತಾನೆ.
- ವೈರಾಗ್ಯವಾದ ಜೀವಿತಕ್ಕೆ ಬದಲಾಗಿ ಆತನು ದೇವರ ಸೃಷ್ಟಿ ಮತ್ತು ಆತನ ಒದಗಿಸುವಿಕೆಗೆ ಕೃತಜ್ಞತೆ ಸಲ್ಲಿಸುತ್ತಿದ್ದಾನೆ.
- ದುರಾಶೆಯ ವಿರುದ್ಧ ಆತನು ನಮ್ಮಲ್ಲಿರುವುದರಲ್ಲಿ ತೃಪ್ತಿಯಿಂದ ಇರುವುದನ್ನು ತಿಳಿಸುತ್ತಿದ್ದಾನೆ.
- ಸ್ವಾರ್ಥದ ವಿರುದ್ಧ ಆತನು ದೇವರ ಸ್ವಾರೂಪ್ಯದಲ್ಲಿರುವ ಔದಾರ್ಯತೆಯನ್ನು ತಿಳಿಸುತ್ತಿದ್ದಾನೆ.

ಹಣ ಮತ್ತು ಸಂಪತ್ತಿನ ಕುರಿತು ನಾವು ತಪ್ಪಾದ ಅಭಿಪ್ರಾಯದಲ್ಲಿ ಜೀವಿಸದೆ ಈ ಮೇಲಿನ ಗುಣಲಕ್ಷಣಗಳ ಪ್ರಕಾರ ನಾವು ಜೀವಿಸಬೇಕೆಂದು ಸಭೆಯಾಗಿ ಪ್ರಾರ್ಥಿಸಿರಿ. ಈ ಒಂದು ಕ್ಷೇತ್ರದಲ್ಲಿರುವ ಸುಳ್ಳುಬೋಧನೆಯಿಂದ ಸಂರಕ್ಷಿಸಿಕೊಳ್ಳಲು ಮತ್ತು ಯಾವುದು ಸರಿ ಎಂದು ತಿಳಿಯುವ ವಿವೇಚನೆಗಾಗಿ ಪ್ರಾರ್ಥಿಸುವುದು.

ಹಂಚಿಕೊಳ್ಳುವುದರ ಮೂಲಕ ಈ ಸಮಯವನ್ನು ಕೊನೆಗೊಳಿಸಿರಿ: 1 ತಿಮೊಥೆ ಪತ್ರಿಕೆಯ ಅಭ್ಯಾಸದ ಸಮಯದಲ್ಲಿ ದೇವರು ನಿಮಗೆ ಏನನ್ನು ಕಲಿಸಿದನು? ಪ್ರಾರ್ಥನೆಯೊಂದಿಗೆ ಮುಕ್ತಾಯಗೊಳಿಸಿರಿ.

ಐದನೇ ದಿನ

ಇಡೀ ತರಗತಿಯನ್ನು ಒಟ್ಟಿಗೆ ಸೇರಿಸಿರಿ. ತೀತನ ಪತ್ರಿಕೆಯನ್ನು ಶಬ್ದವಾಗಿ ಓದಿಕೊಳ್ಳಿರಿ. ವಿದ್ಯಾರ್ಥಿಗಳು ಸರದಿಯ ಪ್ರಕಾರ ಓದಲಿ. ತೀತನ ಪತ್ರಿಕೆಯ ನೈಜ ಸಂಗತಿಯ ಕುರಿತು ಮತ್ತು ಪೌಲನ ಬೋಧನೆಯ ವಿಷಯವಸ್ತುವಿನ ಕುರಿತು ಅಭ್ಯಾಸಮಾಡಿರಿ. ಚರ್ಚೆಯ ಪ್ರಶ್ನೆಗಳನ್ನು ಉಪಯೋಗಿಸಿರಿ.

ಗ್ರಂಥಾಲಯ ಕೆಲಸ

2 ತಿಮೊಥೆಯ ಪತ್ರಿಕೆಯನ್ನು ಮತ್ತೊಮ್ಮೆ ಗುಂಪಿನಲ್ಲಿಯಾಗಲಿ ಅಥವಾ ಇಬ್ಬಿಬ್ಬರಾಗಿಯಾಗಲಿ ಓದಿರಿ ಮತ್ತು ಸುಳ್ಳುಬೋಧಕರ ಹಾಗೂ ಸತ್ಯಬೋಧಕರ ಮಧ್ಯದಲ್ಲಿರುವ ವ್ಯತ್ಯಾಸವನ್ನು ತಿಳಿಸಿರಿ. ನಿಮ್ಮ ಅಂಶಗಳನ್ನು ಬರೆಯಿರಿ.

ಆರನೇ ದಿನ

ಇಡೀ ತರಗತಿಯು ಒಟ್ಟಿಗೆ ಬರಲಿ. 2 ತಿಮೊಥೆಯನ್ನು ಶಬ್ದವಾಗಿ ಓದಿರಿ. ವಿದ್ಯಾರ್ಥಿಗಳು ಒಬ್ಬರಾದ ನಂತರ ಒಬ್ಬರು ಓದಲಿ. ಪತ್ರಿಕೆಯ ಮೊದಲ ಎರಡು ಭಾಗಗಳನ್ನು (ಸುವಾರ್ತೆಯನ್ನು ಸಾರುವುದು ಮತ್ತು ಸುವಾರ್ತೆಗಾಗಿ ಶ್ರಮೆಯನ್ನು ತಾಳಿಕೊಳ್ಳುವುದು) ಅಭ್ಯಾಸಿಸಿರಿ. ಚರ್ಚೆಯ ಪ್ರಶ್ನೆಗಳನ್ನು ಉಪಯೋಗಿಸಿರಿ. ಸೇವಕನ ಗುಣಗಳ ಕುರಿತಾದ ಕೊನೆಯ ಪ್ರಶ್ನೆಯನ್ನು ಗ್ರಂಥಾಲಯದ ಸಮಯಕ್ಕಾಗಿ ಉಳಿಸಿಕೊಳ್ಳಿರಿ.

ಗ್ರಂಥಾಲಯದ ಕೆಲಸ

2 ತಿಮೊಥೆ 2:23-26 ಅನ್ನು ಓದಿರಿ ಮತ್ತು ಸೇವಕನ ಗುಣಲಕ್ಷಣದ ಕುರಿತು ಅಭ್ಯಾಸಿಸಿರಿ. ಈ ಕೆಳಗಿನ ಪ್ರಶ್ನೆಗಳನ್ನು ನಿಮ್ಮ ಜೊತೆ ಸ್ನೇಹಿತರೊಂದಿಗೆ ಅಥವಾ ನೀವೊಬ್ಬರೇ ಸಮಾಲೋಚಿಸಿರಿ. ವಿಶೇಷವಾಗಿ ಮೊದಲ ಪ್ರಶ್ನೆಯ ಉತ್ತರಗಳನ್ನು ದಾಖಲಿಸಿಕೊಳ್ಳಿರಿ.

- ಇಂದು ದೇವರ ರಾಜ್ಯದ ಕೆಲಸಗಾರರಲ್ಲಿ ಈ ಎಲ್ಲಾ ಅಥವಾ ಕೆಲವು ಗುಣಲಕ್ಷಣಗಳನ್ನು ನೀವು ಕಾಣಬಹುದೇ? ಅವರು ಹೇಗೆ ಕಾಣುತ್ತಾರೆ ಅಥವಾ ಕಾಣುವುದಿಲ್ಲ?
- ನಿಮ್ಮಲ್ಲಿ ಈ ಗುಣಲಕ್ಷಣಗಳನ್ನು ನೀವು ನೋಡಬಹುದೇ?
- ಇದರಲ್ಲಿರುವ ಯಾವ ಗುಣಲಕ್ಷಣಗಳನ್ನು ನೀವು ದೇವರಿಂದ ರೂಪಿಸಲ್ಪಡಲು ನೀವು ಹೆಚ್ಚು ಕಾರ್ಯಮಾಡಬೇಕಾಗಿರುತ್ತದೆ?

ಏಳನೇ ದಿನ

ವಿದ್ಯಾರ್ಥಿಗಳು ಗ್ರಂಥಾಲಯದ ಸಮಯದಲ್ಲಿ ಮೊದಲ ಪ್ರಶ್ನೆಗೆ ಕಂಡುಕೊಂಡ ಉತ್ತರವನ್ನು ಹಂಚಿಕೊಳ್ಳುವವರಾಗಿರಲಿ. ಎರಡನೇಯ ಮತ್ತು ಮೂರನೇಯ ಪ್ರಶ್ನೆಗಳು ಅವರ ವೈಯಕ್ತಿಕ ಮತ್ತು ಅಭಿವೃದ್ಧಿಯ ಅಂಶ ಆಧಾರಿತವುಗಳಾಗಿದ್ದರಿಂದ ಅವುಗಳನ್ನು ತರಗತಿಯ ಸಂದರ್ಭದಲ್ಲಿ ಹಂಚಿಕೊಳ್ಳುವುದು ಅಗತ್ಯವಿರುವುದಿಲ್ಲ, ಅವುಗಳನ್ನು ವೈಯಕ್ತಿಕವಾಗಿಟ್ಟುಕೊಳ್ಳಲಿ. ಪತ್ರದ ಉಳಿದ ಎರಡು ಭಾಗಗಳನ್ನು ಅಭ್ಯಾಸಿಸಿರಿ (ಸುವಾರ್ತೆಯಲ್ಲಿ ನೆಲೆಗೊಳ್ಳುವುದು ಮತ್ತು ಸುವಾರ್ತೆಯನ್ನು ಸಾರಲಿಕ್ಕೆ ಅಪ್ಪಣೆ). ಚರ್ಚೆಯ ಪ್ರಶ್ನೆಗಳನ್ನು ಉಪಯೋಗಿಸಿರಿ.

ಗ್ರಂಥಾಲಯದ ಕೆಲಸ

"ಯಾಕೆ ದೇವರ ವಾಕ್ಯವನ್ನು ಸಾರಬೇಕು?" ಎಂದು ಕರೆಯಲ್ಪಡುವ ಸಂದೇಶವನ್ನು ಸಿದ್ಧಪಡಿಸಿರಿ. ಈ ಮೂರು ಕಾರಣಗಳು ನಿಮ್ಮ ಮುಖ್ಯ ಅಂಶವನ್ನಾಗಿ ಉಪಯೋಗಿಸಿರಿ.

1. ಬರುವ ಅರಸನು (4:1)
2. ಪ್ರಸ್ತುತ ಪರಿಸ್ಥಿತಿ (4:3-5)

3. ಪೌಲ ಮತ್ತು ತಿಮೊಥೆ – ಎರಡು ತಲೆಮಾರುಗಳು (4:6-8)

2 ತಿಮೊಥೆ 4:2 ರ ಆಧಾರದ ಮೇಲೆ ಈ ನಾಲ್ಕು ಉಪದೇಶಗಳನ್ನು ಬಳಸಿ (ಸಿದ್ಧರಾಗಿರಿ, ಸಂಬಂಧಿತರಾಗಿರಿ, ತಾಳ್ಮೆಯಿಂದಿರಿ, ದೇವರ ವಾಕ್ಯದೊಂದಿಗೆ ಜಾಗೃತರಾಗಿರಿ).

ಎಂಟನೇ ದಿನ - ಏಕಾಂತತೆ

ಏಕಾಂತತೆಯ ದಿನವನ್ನು ನಾಲ್ಕುಭಾಗಗಳಾಗಿ ವಿಂಗಡಿಸಲಾಗಿದೆ. ಅಲ್ಲಿ ವಿದ್ಯಾರ್ಥಿಗಳಿಗೆ ತೀತನು ಬರೆದ ಪತ್ರಿಕೆಯನ್ನು ಮತ್ತು ತಿಮೊಥೆಯನು ಬರೆದ ಎರಡನೇಯ ಪತ್ರಿಕೆಯನ್ನು ಪ್ರತಿಬಿಂಬಿಸಲು ಸಮಯವನ್ನು ನೀಡಲಾಗುತ್ತದೆ. ಪ್ರತೀ ಭಾಗಕ್ಕೆ ಬೇಕಾದ ಸಮಯವು ಬಹುಶಃ ಬದಲಾಗಬಹುದು. ಆದ್ದರಿಂದ ಶಿಕ್ಷಕರು ಇದರ ಕುರಿತು ಜಾಗೃತರಾಗಿರಬೇಕು.

ಭಾಗ ಒಂದು

ಇಡೀ ತರಗತಿಯನ್ನು ಒಟ್ಟಿಗೆ ಸೇರಿಸಿರಿ. ಈ ಪ್ರತಿಫಟನೆಯ ಮತ್ತು ಪ್ರಾರ್ಥನೆಯ ದಿನದಂದು ದೇವರು ನಿಮಗೆ ಮಾರ್ಗದರ್ಶನ ನೀಡಲೆಂದು ಪ್ರಾರ್ಥಿಸಿರಿ.

ತರಗತಿಯನ್ನು ಮೂರರಿಂದ ಐದು ವಿದ್ಯಾರ್ಥಿಗಳ ಗುಂಪುಗಳನ್ನಾಗಿ ವಿಂಗಡಿಸಿರಿ.

ಸುಳ್ಳುಬೋಧಕರ ವಿರುದ್ಧ ಬಳಸುವ ಎರಡು ಪೌಲನ ತಂತ್ರಗಳನ್ನು ನಾವು ತೀತನ ಪತ್ರಿಕೆಯ ಮೊದಲನೇಯ ಅಧ್ಯಾಯವನ್ನು ಅಭ್ಯಾಸಿಸುವಾಗ ಕಾಣಬಹುದಾಗಿದೆ:

1. ಸುಳ್ಳುಬೋಧಕರು ಹೆಚ್ಚಾದಂತೆ, ಪೌಲನು ಹೆಚ್ಚು ಉತ್ತಮ, ನಿಷ್ಠಾವಂತ ಮತ್ತು ಸತ್ಯಬೋಧಕರನ್ನು ನೇಮಿಸಬೇಕೆಂದು ಬಯಸಿದನು. ಅನೇಕ ಸುಳ್ಳುಬೋಧಕರು ಇದ್ದರೆ, ಇನ್ನೂ ಹೆಚ್ಚಿನವರಾಗಿ ಸತ್ಯಬೋಧಕರ ಅಗತ್ಯತೆ ಇದೆ. ಇದಕ್ಕಾಗಿಯೇ ಸಭೆಗಳು, ಸಭಾಚಟುವಟಿಕೆಗಳು ಮತ್ತು ಪಂಗಡಗಳು ಸತ್ಯವೇದದ ಅಧ್ಯಯನದ ಕಾಲೇಜ್‌ಗಳನ್ನು ಹೊಂದಿರುವುದು ಅತ್ಯಗತ್ಯವಾಗಿರುತ್ತದೆ. ಅಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಸಿದ್ಧಾಂತಗಳನ್ನು ಕಲಿಸಿಕೊಡಲಾಗುವುದು.
2. ಸಭೆಯ ನಾಯಕರುಗಳಾಗಿ ನೇಮಕಗೊಂಡವರ ಉನ್ನತವಾದ ಗುಣಮಟ್ಟವನ್ನು ಪೌಲನು ಬಯಸಿದನು. ಆದ್ದದ್ದರಿಂದ ನಮ್ಮ ನಾಯಕತ್ವವು ಉತ್ತಮ ಗುಣಮಟ್ಟದಿಂದ ಕೂಡಿರಬೇಕೆಂದು ಬಯಸೋಣ. ನಾಯಕರುಗಳು ಮತ್ತು ಸಭಾಪಾಲಕರುಗಳು ಕೊರತೆಯಿರುವಾಗ, ಅವರ ಮನೆಗಳಲ್ಲಾಗಲಿ ಅಥವಾ ಸಿದ್ಧಾಂತಗಳಲ್ಲಿ ಆಗಲಿ ಅವರು ನಿರ್ದೋಷಿಗಳಲ್ಲದಿದ್ದರೂ ಸಿದ್ಧರಿರುವ ಯಾರನ್ನಾದರೂ ನೇಮಿಸಲು ಸಭೆಯಾಗಲಿ ಅಥವಾ ಪಂಗಡಗಳಾಗಲಿ ಶೋಧನೆಗೆ ಒಳಗಾಗುತ್ತೇವೆ. ಬದಲಿಗೆ ನಮ್ಮ ಹಿರಿಯರನ್ನು ಮತ್ತು ನಾಯಕರುಗಳನ್ನು ಎಚ್ಚರಿಕೆಯಿಂದ ಆರಿಸೋಣ. ಒಳ್ಳೆಯ ನಾಯಕರು ಸಭೆಯನ್ನು ಆರೋಗ್ಯಕರವಾಗಿರಿಸುತ್ತಾರೆ.

ಗುಂಪುಗಳಲ್ಲಿ ಒಟ್ಟಿಗೆ ಪ್ರತಿಬಿಂಬಿಸಿರಿ

- ನಿಮಗೆ ಸುಳ್ಳುಬೋಧನೆಯ ಅನುಭವವಿದೆಯೇ? ಯಾವಾಗ ಮತ್ತು ಯಾವ ರೀತಿಯಲ್ಲಿ?
- ಎಲ್ಲಿ ಸುಳ್ಳುಬೋಧನೆಯನ್ನು ಕಲಿಸುತ್ತಾರೋ ಆ ಸಭೆಗೆ ಮತ್ತು ವಿಶ್ವಾಸಿಗಳಿಗೆ ಏನು ಸಂಭವಿಸುತ್ತದೆ?
- ಸುಳ್ಳುಬೋಧನೆಯನ್ನು ನಾವು ಹೇಗೆ ಕಂಡುಹಿಡಿಯಬಹುದು?
- ನಿಮ್ಮ ಸಭೆಯಲ್ಲಿ ನಾಯಕರು ನೇಮಕಗೊಂಡಾಗ ಉನ್ನತ ಗುಣಮಟ್ಟದ ಅಗತ್ಯತೆ ಇದೆ ಎಂದು ನೀವು ಭಾವಿಸುತ್ತೀರಾ? ಹೌದು ಅಥವಾ ಇಲ್ಲ ಎಂದು ಉತ್ತರಿಸಲು ನೀವು ಯಾವ ಕಾರಣಗಳನ್ನು ನೀಡುವಿರಿ?
- ನಿಮ್ಮ ಸಭೆಯಲ್ಲಿ ನಾಯಕತ್ವದ ಗುಣಮಟ್ಟವನ್ನು ಸುಧಾರಿಸಲು ಏನು ಮಾಡಬಹುದು? ನಿಮ್ಮ ಜೀವನದಲ್ಲಿಯೂ ಸಹ?

ದೇವರು ನಿಮ್ಮಲ್ಲಿ ಪ್ರತಿಯೊಬ್ಬರನ್ನು ತನ್ನ ನಾಯಕತ್ವದ ಕೌಶಲ್ಯದಿಂದ ಸಜ್ಜುಗೊಳಿಸುವುದನ್ನು ಮುಂದುವರಿಸಬೇಕೆಂದು ಮತ್ತು ಆತನ ಕೃಪೆಯಿಂದ ನೀವು ದೋಷರಹಿತರಾಗಿ ಜೀವಿಸುವಂತೆ ನಿಮ್ಮ ಗುಂಪುಗಳಲ್ಲಿ ಪ್ರಾರ್ಥಿಸಿರಿ.

ನಿಮ್ಮ ಸಭೆಗಳಿಗಾಗಿಯೂ ಮತ್ತು ಅದರ ನಾಯಕರುಗಳಿಗಾಗಿಯೂ ಪ್ರಾರ್ಥಿಸಿರಿ.

ಭಾಗ ಎರಡು

ವಿದ್ಯಾರ್ಥಿಗಳು ಪ್ರತ್ಯೇಕವಾಗಿರಲಿ: 2 ತಿಮೊಥೆ 2:3-10 ಅನ್ನು ನಿಮ್ಮ ಸ್ವಂತ ಜೀವಿತದ ಬೆಳಕಿನಲ್ಲಿ ವ್ಯಕ್ತಿಗತವಾಗಿ ಅಭ್ಯಾಸಿಸಿರಿ.

- ಕ್ರಿಸ್ತನಿಗಾಗಿ ಮತ್ತು ಸುವಾರ್ತೆಗಾಗಿ ನೀವು ಸುಲಭವಾಗಿ ಬಿಟ್ಟುಕೊಡುವ ವಿಷಯಗಳನ್ನು ಪಟ್ಟಿ ಮಾಡಿರಿ.
- ಕ್ರಿಸ್ತನಿಗಾಗಿ ಮತ್ತು ಸುವಾರ್ತೆಗಾಗಿ ಬಿಟ್ಟುಕೊಡಲು ನೀವು ಪರಿಶ್ರಮಪಡುವ ವಿಷಯಗಳ ಮತ್ತೊಂದು ಪಟ್ಟಿಯನ್ನು ಮಾಡಿರಿ.

ನಿಮ್ಮ ಹೋರಾಟಗಳ ವಿಷಯಗಳಲ್ಲಿ ದೇವರು ಸಹಾಯ ಮಾಡುವಂತೆ ಪ್ರಾರ್ಥನೆಯನ್ನು ಮಾಡಿರಿ. ನಿಮ್ಮಲ್ಲಿರುವ ನಂಬಿಕೆ, ಪರಿಶ್ರಮ ಮತ್ತು ಬದ್ಧತೆಯನ್ನು ಹೆಚ್ಚಿಸಲು ದೇವರಲ್ಲಿ ಕೇಳಿಕೊಳ್ಳಿರಿ. ನಿಮ್ಮನ್ನು ಆತನ ಸೇವಕನನ್ನಾಗಿ ಆರಿಸಿಕೊಂಡದ್ದಕ್ಕಾಗಿ ಆತನನ್ನು ಸ್ತುತಿಸಿರಿ.

ಭಾಗ ಮೂರು

ಯೇಸುವಿನ ಪುನರಾಗಮನವನ್ನು ಪೌಲನು ದೃಢವಾಗಿ ನಂಬುತ್ತಾನೆ. ಈಗಾಗಲೇ ಅನೇಕ ವರ್ಷಗಳ ಹಿಂದೆ ಥೆಸಲೋನಿಕದ ಸಭೆಗೆ ಬರೆದ ಪತ್ರಗಳಲ್ಲಿ ಪೌಲನು ಈ ವಿಷಯದ ಕುರಿತು ಉತ್ಸಾಹದಿಂದ ಬರೆದಿದ್ದನು. ಈಗ ತನ್ನ ಸೇವೆಯ ಅಂಚಿನಲ್ಲಿದ್ದು, ತನ್ನ ಯಜಮಾನನಾದ ಕರ್ತನು ಹಿಂತಿರುಗಿ ಬರುವುದನ್ನು ಎದುರು ನೋಡುತ್ತಾ ಇದ್ದಾನೆ, ಅದು ನೆರವೇರುವುದಕ್ಕಿಂತ ಮುಂಚೆ ತಾನು ಸಾಯುತ್ತೇನೆ ಎಂದು ತಿಳಿದಿದ್ದರೂ ಸಹ ಅವನ ನಿರೀಕ್ಷೆಯು ಬಲವಾಗಿತ್ತು.

ಸುವಾರ್ತೆಯನ್ನು ಸಾರಬೇಕು, ಯಾಕೆಂದರೆ ಯೇಸು ಕ್ರಿಸ್ತನು ಜೀವಿಸುವವರಿಗೂ ಮತ್ತು ಸತ್ತವರಿಗೂ ನ್ಯಾಯತೀರಿಸಲಿಕ್ಕೂ ಮತ್ತು ತನ್ನ ರಾಜ್ಯವನ್ನು ಆಳುವುದಕ್ಕೂ ಹಿಂತಿರುಗಿ ಬರಲಿಕ್ಕೆ ಇದ್ದಾನೆ. ನಿಮ್ಮ ಮೂರು – ಐದು ಜನರ ಗುಂಪಿಗೆ ಹಿಂತಿರುಗಿರಿ. ಪೌಲನು 2 ತಿಮೊಥೆ 4:1 ರಲ್ಲಿ ಯೇಸು ಕ್ರಿಸ್ತನ ಹಿಂತಿರುಗುವಿಕೆಯ ಕುರಿತು ಬರೆಯುತ್ತಿದ್ದಾನೆ. ಈ ಕೆಳಗಿನ ಪ್ರಶ್ನೆಗಳನ್ನು ಪ್ರತಿಬಿಂಬಿಸಿರಿ.

- ನಿಮ್ಮ ಸಭೆಯು ಯೇಸುವಿನ ಹಿಂತಿರುಗುವಿಕೆಗಾಗಿ ಹಾತೊರೆಯುತ್ತಾ ಕಾಯುತ್ತಿದೆಯೋ? ಈ ಒಂದು ಸತ್ಯವು ವಿಶ್ವಾಸಿಗಳಿಗೆ ನೈಜವಾಗಿದೆಯೋ? ನಿಮ್ಮ ಸಭೆಯ ದೈನಂದಿನ ಜೀವಿತದ ಮೇಲೆ ಈ ಸತ್ಯವು ಪರಿಣಾಮ ಬೀರುತ್ತದೆಯೋ?
- ಯೇಸು ಕ್ರಿಸ್ತನು ಹಿಂತಿರುಗುವಾಗ ಸಭೆಯು ಎಚ್ಚರದಿಂದ ಇರುವಂತೆ ನಾವು ಈ ವಿಷಯವನ್ನು ಹೇಗೆ ತುರ್ತಾಗಿ ಮಾಡಬಹುದು?
- ಯೇಸು ಕ್ರಿಸ್ತನ ಹಿಂತಿರುಗುವಿಕೆಗೆ ನೀವು ಹೇಗೆ ಸಿದ್ಧರಾಗಿದ್ದೀರಿ?

4:6-8 ಅನ್ನು ಓದಿರಿ. ಯೇಸುವಿನ ಹಿಂತಿರುಗುವಿಕೆಯ ವಿಷಯದಲ್ಲಿ ಸಂತೋಷದಿಂದಲೂ ಮತ್ತು ನಿರೀಕ್ಷೆಯಿಂದ ಇರುವ ಮನೋಭಾವಕ್ಕಾಗಿ ದೇವರಲ್ಲಿ ಕೇಳಿಕೊಳ್ಳಿರಿ. ಪೌಲನು ಸಿದ್ಧವಾಗಿದ್ದಂತೆಯೇ ನೀವೂ ಸಿದ್ಧರಾಗಿರಲು ಪ್ರಾರ್ಥಿಸಿರಿ. ಆತನ ಸುವಾರ್ತೆಯನ್ನು ಅನೇಕ ಜನರಿಗೆ ಉತ್ಸಾಹದಿಂದ ಹರಡಲು ಪ್ರಾರ್ಥಿಸಿರಿ.

ಭಾಗ ನಾಲ್ಕು

ದೇವರನ್ನು ಆರಾಧಿಸಲು ಮತ್ತು ಆತನ ಮಾತುಗಳಿಗಾಗಿ ಕೃತಜ್ಞತೆಯನ್ನು ಸಲ್ಲಿಸುವುದಕ್ಕಾಗಿ ಮತ್ತು ಏಕಾಂತತೆಗಾಗಿ ಇಡೀ ತರಗತಿಯು ಒಟ್ಟಾಗಿ ಬರಲಿ. ಈ ಸಭಾಪಾಲಕರ ಪತ್ರಿಕೆಯ ಅಭ್ಯಾಸದಿಂದ ನೀವು ಕಲಿತ ಅಂಶಗಳಿಗಾಗಿಯೂ ಮತ್ತು ನೀವು ಏಕಾಂತತೆಯಲ್ಲಿ ಇದ್ದಾಗ ಕಂಡುಕೊಂಡ ಸತ್ಯಾಂಶಗಳಿಗಾಗಿಯೂ

ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ. ಕೆಲವು ಸ್ತುತಿಯ ಪದಗಳನ್ನು ಹಾಡುವುದರ ಮೂಲಕ ಈ ಏಕಾಂತತೆಯನ್ನು ಕೊನೆಗೊಳಿಸಿರಿ.

ಪ್ರಶ್ನೆಗಳು ಮತ್ತು ಉತ್ತರಗಳು

ಮೊದಲನೇ ತಿಮೊಥೆ ಅಧ್ಯಾಯ 1 (ಸಿದ್ಧಾಂತ)

ಸುಳ್ಳುಬೋಧಕರ ವಿರುದ್ಧ ಸತ್ಯಸಿದ್ಧಾಂತ (1 ತಿಮೊ. 1:3-20)

ಚರ್ಚೆಯ ಪ್ರಶ್ನೆ

ತಮ್ಮನ್ನು ತಾವೇ ಕ್ರೈಸ್ತ ಜನರೆಂದು ಕರೆಯಿಸಲ್ಪಡುವ ಗುಂಪನ್ನು ನೋಡುವಾಗ ಗುಂಪಾಗಿ ಅಥವಾ ವ್ಯಕ್ತಿಗತವಾಗಿ ಅವರು ಆರೋಗ್ಯಕರವಾದ ಆತ್ಮೀಕತೆಯಲ್ಲಿ ಇಲ್ಲ ಎಂಬುದಾಗಿ ಹೇಳಲು ಯಾವ ಅಂಶವನ್ನು ನೀನು ಪರಿಗಣಿಸುತ್ತೀಯಾ?

ಉತ್ತರ

ಸೂಚನೆಗಳು ಹೀಗಿರಬಹುದು:

- ದೇವರ ವಾಕ್ಯವನ್ನು ಓದುವುದಕ್ಕಿಂತ ಮತ್ತು ಅದನ್ನು ಅಧ್ಯಯನ ಮಾಡುವುದಕ್ಕಿಂತ ಹೆಚ್ಚಾಗಿ ಊಹಾಪೋಹಗಳೇ ಇರುತ್ತವೆ.
- ಬೋಧನೆಯು ಪ್ರಕಟಣೆಗಳನ್ನು ನಂಬಿಕೆಗಳನ್ನು ಉಂಟುಮಾಡದೆ ಗೊಂದಲವನ್ನೇ ಸೃಷ್ಟಿಸುತ್ತದೆ.
- ಪ್ರೀತಿ ಮತ್ತು ಐಕ್ಯತೆಗೆ ಬದಲಾಗಿ ವಿವಾದಗಳು ಮತ್ತು ಭಿನ್ನಾಭಿಪ್ರಾಯಗಳು ಹೆಚ್ಚಾಗಿರುತ್ತದೆ.
- ವಿಶ್ವಾಸಿಗಳು ದೇವರ ಜ್ಞಾನ ಮತ್ತು ನಂಬಿಕೆಯಲ್ಲಿ ಬೆಳೆಯುವುದಿಲ್ಲ.
- ಬೋಧನೆಯು ಸತ್ಯವೇದದ ಕೇಂದ್ರ ಸಂದೇಶವಾದ ಸುವಾರ್ತೆಯ ಆಧಾರಿತವಾಗಿರುವುದಿಲ್ಲ.

ಓದಿರಿ ಮತ್ತು ಹೋಲಿಕೆಮಾಡಿರಿ

1:8-10 ರಲ್ಲಿ ಪೌಲನು ತಿಳಿಸುತ್ತಿರುವ ಪಾಪದ ಪಟ್ಟಿಯನ್ನು ಓದಿರಿ ಮತ್ತು ನಂತರದಲ್ಲಿ ವಿಮೋಚನ. 20:1-17 ನ್ನು ಹೋಲಿಸಿರಿ. ಪೌಲನ ಪಟ್ಟಿಯಲ್ಲಿ ನೀವು ಕಂಡುಹಿಡಿಯುವ ದಶಾಜ್ಞೆ ಯಾವುದಾಗಿದೆ?

ಉತ್ತರ

ಪೌಲನು ತಿಳಿಸುವ ಎಲ್ಲಾ ಪಾಪಗಳನ್ನು ದಶಾಜ್ಞೆಗಳಲ್ಲಿ ಸೇರಿಸಹುದು. ಇದು ಸುವಾರ್ತೆಯ ನೈತಿಕ ಮಾನದಂಡಗಳು ಧರ್ಮಶಾಸ್ತ್ರದದ ನೈತಿಕ ಮಾನದಂಡಕ್ಕಿಂತ ಭಿನ್ನವಾಗಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಆದರೆ ಕ್ರಿಸ್ತನಲ್ಲಿ ನಂಬಿಕೆಯಿಂದ ನೀತಿವಂತರಾಗಿ ಜೀವಿಸಲು ಪವಿತ್ರಾತ್ಮನ ಬಲದ ಮೂಲಕ ಅದು ಸಾಧ್ಯವಿದೆ.

ಚರ್ಚೆಯ ಪ್ರಶ್ನೆ

1:19 ಅನ್ನು ಪುನಃ ಓದಿರಿ. ಈ ವಾಕ್ಯಭಾಗದಲ್ಲಿ ತಿಮೊಥೆಯು ಎರಡು ಸಂಗತಿಗಳನ್ನು ಹಿಡಿದುಕೊಳ್ಳುವುದು ಒಳ್ಳೆಯದೆಂದು ಕಾಣುತ್ತೇವೆ, ಅವುಗಳು ಯಾವುವು? ಅವುಗಳನ್ನು ಹಿಡಿದುಕೊಳ್ಳುವುದು ಪ್ರಾಮುಖ್ಯವಾದದ್ದೆಂದು ನೀನು ಯಾಕೆ ಆಲೋಚಿಸುತ್ತೀಯಾ?

ಉತ್ತರ

ಅವನು ನಂಬಿಕೆ ಮತ್ತು ಶುದ್ಧ ಆತ್ಮಸಾಕ್ಷಿಯನ್ನು ಹಿಡಿದಿಟ್ಟುಕೊಳ್ಳಬೇಕು. ಇವೆರಡು ಒಟ್ಟಿಗೆ ಬೇಕು. ಇದೇ ವಾಕ್ಯಭಾಗದ ಕೊನೆಯಲ್ಲಿ ಪೌಲನು ಶುದ್ಧ ಆತ್ಮಸಾಕ್ಷಿಯನ್ನು ತಿರಸ್ಕರಿಸಿದ ನಿಮಿತ್ತ ನಂಬಿಕೆಯಲ್ಲಿ ಹಡಗು ಒಡೆದಂತಹ ನಷ್ಟವನ್ನು ಅನುಭವಿಸಿದ ವ್ಯಕ್ತಿಯ ಅನುಭವವನ್ನು ತಿಳಿಸುತ್ತಿದ್ದಾನೆ. ನಂಬಿಕೆ ಮತ್ತು ಕಾರ್ಯಗಳು, ಅಪರಾಧನಿರ್ಣಯ ಮತ್ತು ಆತ್ಮಸಾಕ್ಷಿ, ಬುದ್ಧಿಶಕ್ತಿ ಮತ್ತು ನೈತಿಕತೆ ಎಲ್ಲವೂ ನಿಕಟವಾದ ಸಂಬಂಧಗಳನ್ನು ಹೊಂದಿವೆ. ದೇವರ ಆಜ್ಞೆಗಳನ್ನು ಪಾಲಿಸುತ್ತಾ ದೇವರ ವಾಕ್ಯವನ್ನು ನಮ್ಮ ಜೀವಿತಗಳಲ್ಲಿ ಅಳವಡಿಸಿಕೊಂಡು ಜೀವಿಸುವಂತಹದ್ದು ನಮ್ಮ ನಂಬಿಕೆಯ ಅಭ್ಯಾಸಗಳಾಗಿರುತ್ತವೆ. ದೇವರಿಗೆ ವಿಧೇಯರಾಗಿ ಜೀವಿಸುವಂತಹದ್ದು ನಮ್ಮಲ್ಲಿ ನಂಬಿಕೆಯನ್ನು ಮತ್ತು ದೈರ್ಯವನ್ನು ಹುಟ್ಟಿಸುವಂತಹದ್ದಾಗಿರುತ್ತದೆ, ಆದ್ದರಿಂದ ಬಲವಾದ ನಂಬಿಕೆಯನ್ನು ಹೊಂದಿರುವಂತಹದ್ದು ಒಂದೇ ಸಾಕಾಗುವುದಿಲ್ಲ. ನಾವು ತಪ್ಪು ಮಾಡುವಾಗೆಲ್ಲ ನಮ್ಮ ಮನಸಾಕ್ಷಿಯನ್ನು ಹಾನಿಗೊಳಿಸುವುದರಿಂದ ನಮ್ಮ ಕಾರ್ಯಗಳು ನಮ್ಮಲ್ಲಿರುವ ನಂಬಿಕೆಯನ್ನು ಹಾಳುಮಾಡುತ್ತವೆ. ನಾವು ಸರಿಯಾದದ್ದನ್ನು ಮಾಡಿದಾಗ ನಮ್ಮ ಮನಸಾಕ್ಷಿಯು ಸ್ಪಷ್ಟವಾಗಿರುತ್ತದೆ ಮತ್ತು ನಾವು ಧೈರ್ಯದಿಂದ ದೇವರ ಬಳಿಗೆ ಬರಬಹುದು ಮತ್ತು ನಂಬಿಕೆಯಲ್ಲಿ ಬೆಳೆಯಬಹುದು. ನಂಬಿಕೆ ಮತ್ತು ಶುದ್ಧಮನಸಾಕ್ಷಿಯು ಒಟ್ಟಿಗೆ ಸಾಗುತ್ತವೆ.

ಚರ್ಚೆಯ ಪ್ರಶ್ನೆ

1 ತಿಮೊಥೆ 1:20 ಅನ್ನು ಓದಿರಿ. ಈ ವಾಕ್ಯಭಾಗವು ಇಂದಿನ ನಮ್ಮ ಸಭೆಗೆ ಹೇಗೆ ಅನ್ವಯಿಸಬಹುದು?

ಉತ್ತರ

ಇಂದಿಗೂ ಸಭೆಯಲ್ಲಿ ಸುಳ್ಳುಬೋಧಕರಿಗೆ ಸ್ಥಳವನ್ನು ನೀಡಬಾರದು ಮತ್ತು ಸಭೆಯ ಸಹಭಾಗಿತ್ವದಲ್ಲಿ ಅವರನ್ನು ಸೇರಲು ಅನುಮತಿಸಬಾರದು. ದೇವರ ವಾಕ್ಯವನ್ನು ನಮ್ಮ ಮಾನದಂಡವಾಗಿ ಬಳಸುವುದರ ಮೂಲಕ ನಾವು ಸುಳ್ಳುಬೋಧಕರನ್ನು ಗುರುತಿಸಬಹುದು. ಅವರನ್ನು ಗುರುತಿಸಿದ ನಂತರ ಅವರ ಸುಳ್ಳುಬೋಧನೆಯನ್ನು ನಿಲ್ಲಿಸಲು ಆದೇಶಿಸಬೇಕೆಂದು ಹೊಸ ಒಡಂಬಡಿಕೆಯು ತಿಳಿಸುತ್ತದೆ. ನಾವು ಅವರನ್ನು ಕ್ರಿಸ್ತನಲ್ಲಿ ಇನ್ನೂ ಸಹೋದರ ಸಹೋದರಿಯರಂತೆ ನೋಡಬೇಕು ಶತ್ರುಗಳಂತೆ ಅಲ್ಲ. ಒಂದು ವೇಳೆ ಅವರು ಬದಲಾಯಿಸಿಕೊಳ್ಳದೆ ಹಾಗೆಯೇ ಸುಳ್ಳುಬೋಧನೆಯಲ್ಲಿ ಮುಂದುವರೆದರೆ, ನಾವು ಇನ್ನು ಮುಂದೆ ಅವರೊಂದಿಗೆ ಸಹವಾಸಮಾಡಬಾರದು, ಆಗ ಅವರು ಒಂದು ವೇಳೆ ನಾಚಿಕೆಪಟ್ಟು ಪಶ್ಚಾತ್ತಾಪಕ್ಕೊಳಗಾಗಬಹುದು (ಮತ್ತಾಯ. 18:15, 2 ಥೆಸ. 3:14-15, 1 ತಿಮೊ. 1:3). ಮೊದಲ ಮತ್ತು ಎರಡನೇಯ ಎಚ್ಚರಿಕೆಯ ನಂತರವೂ ಅವರು ಮುಂದುವರಿದರೆ, ಅವರು ತಿರಸ್ಕರಿಸಲ್ಪಡುತ್ತಾರೆ (ಮತ್ತಾಯ. 18:15-17, ತೀತ. 3:10). ಒಂದು ವೇಳೆ ಅವರು ಭವಿಷ್ಯದಲ್ಲಿ ಪಶ್ಚಾತ್ತಾಪಪಟ್ಟು ದೇವರ ಮಾತಿಗೆ ವಿಧೇಯರಾಗಬಹುದು. ನಂತರ ನಾವು ಮತ್ತೇ ಅವರನ್ನು ನಮ್ಮ ಅನ್ಯೋನ್ಯತೆಯಲ್ಲಿ ಸೇರಿಸಿಕೊಳ್ಳಲು ಸಿದ್ಧರಾಗಿರಬೇಕು.

ಮೊದಲನೇ ತಿಮೊಥೆ ಅಧ್ಯಾಯ 2 (ಎಲ್ಲಾ ಜನರಿಗಾಗಿ ಪ್ರಾರ್ಥನೆ)

ಸಭೆಯ ಪ್ರಾರ್ಥನೆಯಲ್ಲಿ ಎಲ್ಲಾ ಜನರ ಕುರಿತು ಕಾಳಜಿಯು ಇರತಕ್ಕದ್ದು (1 ತಿಮೊ. 2:1-2)

ಚರ್ಚೆಯ ಪ್ರಶ್ನೆ

ಇಂತಹ ವಿಧವಾದ ಪ್ರಾರ್ಥನೆಗಳಲ್ಲಿ ನಾವು ಹೇಗೆ ಭಾಗವಹಿಸಬಹುದು? ವಿಶ್ವಕ್ಕಾಗಿ ನಾವು ಹೇಗೆ ಪ್ರಾರ್ಥಿಸಬೇಕು? ಏನನ್ನು ಪ್ರಾರ್ಥಿಸಬೇಕೆಂಬುದು ನಮಗೆ ಹೇಗೆ ಗೊತ್ತಾಗುತ್ತದೆ? ಉದಾಹರಣೆಗಳನ್ನು ನೀಡಿರಿ.

ಉತ್ತರ

ಇಲ್ಲಿ ಕೆಲವು ಸಲಹೆಗಳಿವೆ:

- ನಾವು ವಿಶ್ವದ ಭೂಪಟವನ್ನು ನೋಡಿ ದೇಶಗಳಿಗಾಗಿ ಪ್ರಾರ್ಥಿಸಬಹುದು.
- ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ನಾವು ಟಿ.ವಿ ಅಥವಾ ಇಂಟರ್ನೆಟ್‌ನಲ್ಲಿ ಸುದ್ದಿಗಳನ್ನು ನೋಡಬಹುದು ಅಥವಾ ಪತ್ರಿಕೆಗಳನ್ನು ಓದಬಹುದು. ಇದರಿಂದ ನಾವು ನಿರ್ದಿಷ್ಟ ಸಂದರ್ಭಗಳಿಗಾಗಿಯೂ ಪ್ರಾರ್ಥಿಸಬಹುದು.
- ಒಂದು ನಿರ್ದಿಷ್ಟ ಅವಧಿಯಲ್ಲಿ ನಮ್ಮ ಪ್ರಾರ್ಥನೆಗಳನ್ನು ಕೇಂದ್ರೀಕರಿಸಲು ನಾವು ಒಂದು ನಿರ್ದಿಷ್ಟ ಜನರ ಗುಂಪು ಅಥವಾ ದೇಶವನ್ನು ಆಯ್ಕೆಮಾಡಬಹುದು.
- ಜನಗುಂಪುಗಳು ಮತ್ತು ರಾಷ್ಟ್ರಗಳಿಗೆ ಪ್ರಾರ್ಥನೆ ಅಗತ್ಯಗಳ ಕುರಿತು ವಿಚಾರಗಳಿಗಾಗಿ ನಾವು ಅಪರೇಷನ್ ವರ್ಲ್ಡ್ (https://www.operationworld.org/) ಅಥವಾ ಓಪನ್ ಡೋರ್ಸ್ (https://www.opendoors.org/) ನಂತಹ ಕ್ರೈಸ್ತೀಯ ವೆಬ್‌ಸೈಟ್‌ಗಳನ್ನು ಬಳಸಬಹುದು.
- ನಾವು ಅನ್ಯಭಾಷೆಗಳಲ್ಲಿ ಪ್ರಾರ್ಥಿಸಬಹುದು ಮತ್ತು ರಾಷ್ಟ್ರಗಳಿಗಾಗಿ ಪ್ರಾರ್ಥಿಸಲು ದೇವರು ತನ್ನ ಮಾರ್ಗದರ್ಶನವನ್ನು ನೀಡುವಂತೆ ಆತನಲ್ಲಿ ಕೇಳಿಕೊಳ್ಳುವುದು.

ಮೊದಲನೇ ತಿಮೊಥೆ ಅಧ್ಯಾಯ 3 (ನಾಯಕರು ಮತ್ತು ಹಿರಿಯರು)

ಸಭೆಯ ನಾಯಕರು ಮತ್ತು ಹಿರಿಯರು (1 ತಿಮೊ. 3:1-16)

ಗುಂಪು ಚರ್ಚೆ

ಈ ಕೆಳಗಿನ ಕ್ಷೇತ್ರಗಳಲ್ಲಿ ವ್ಯಕ್ತಿಯ ಸೂಕ್ಷ್ಮತೆಯನ್ನು ನೀವು ಹೇಗೆ ಪರೀಕ್ಷಿಸಬಹುದು (ಪ್ರತಿ ಗುಂಪು ಎರಡು ಅಥವಾ ಮೂರು ಅಂಶಗಳನ್ನು ಚರ್ಚಿಸಲು ಆಯ್ಕೆಮಾಡಬಹುದು)?

ಅ. ದಾಂಪತ್ಯದಲ್ಲಿ ನಿಷ್ಠೆ

ಆ. ಸ್ವಯಂ ನಿಯಂತ್ರಣ

ಇ. ಆತಿಥ್ಯ

ಈ. ಬೋಧನಾ ಸಾಮಾರ್ಥ್ಯ

ಉ. ಕುಡಿಯುವ ಅಭ್ಯಾಸಗಳು

ಊ. ಉದ್ವೇಗ ಮತ್ತು ಮನೋಧರ್ಮ

ಋ. ಹಣದ ಕುರಿತು ಇರುವ ಮನೋಭಾವ

ಎ. ಅಗತ್ಯತೆಯಲ್ಲಿನ ಶಿಸ್ತು

ಏ. ಆತ್ಮೀಕತೆಯಲ್ಲಿ ಪರಿಪಕ್ವತೆ

ಐ. ಹೊರಗಿನವರಿಂದ ಇರುವ ಸಾಕ್ಷಿ

ಉತ್ತರ

ನಾವು ಒಬ್ಬ ವ್ಯಕ್ತಿಯನ್ನು ಹೆಚ್ಚು ತಿಳಿದುಕೊಂಡಂತೆ ಈ ಕ್ಷೇತ್ರಗಳಲ್ಲಿ ವ್ಯಕ್ತಿಯು ಹೇಗಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ನಂತರ ಆ ವ್ಯಕ್ತಿ ಅತಿಥಿ ಸತ್ಕಾರ ಮಾಡುವವನೇ, ಸ್ವಯಂ ನಿಯಂತ್ರಣ ಹೊಂದಿರುವವನೇ ಮತ್ತು ಆತ್ಮೀಕತೆಯಲ್ಲಿ ಪರಿಪಕ್ವತೆ ಹೊಂದಿದವನೇ ಎಂಬುದನ್ನು ತಿಳಿಯಬಹುದಾಗಿದೆ. ಮತ್ತು ಆ ವ್ಯಕ್ತಿಯ ಕುರಿತು ಈಗಾಗಲೇ ತಿಳಿದಿರುವವರ ಅಭಿಪ್ರಾಯವನ್ನು ಸಹ ನಾವು ಕೇಳಬಹುದಾಗಿದೆ. ಆ ವ್ಯಕ್ತಿಯು ಈ ಮೇಲಿನ ಕ್ಷೇತ್ರಗಳಲ್ಲಿ ಹೇಗಿದ್ದಾನೆ ಎಂಬುದನ್ನು ನಾವು ಅವರಿಗೆ ಕೇಳಬಹದಾಗಿದೆ.

ಗುಂಪು ಚರ್ಚೆ

ಪೌಲನು ಹಿರಿಯರನ್ನು ಮತ್ತು ಆತ್ಮೀಕತೆಯಲ್ಲಿ ಪ್ರಭುದ್ಧತೆಯನ್ನು ಹೊಂದಿದವರ ಕುರಿತು ಮಾತನಾಡುತ್ತಿದ್ದಾನೆ. ಸೇವೆಯಲ್ಲಿ ಇತ್ತೀಚಿಗೆ ವಿಶ್ವಾಸದಲ್ಲಿ ಬಂದಂತಹ ಜನರನ್ನು ಹಾಗೂ ಯೌವನಸ್ಥರನ್ನು ಆಯ್ಕೆ ಮಾಡುವುದರಲ್ಲಿ ಏನಾದರೂ ಸಮಸ್ಯೆ ಇದೆಯೋ? ಯೌವನಸ್ಥ ನಾಯಕರನ್ನು ಪ್ರೋತ್ಸಾಯಿಸಲು ಏನನ್ನು ಮಾಡಬಹುದು?

ಉತ್ತರ

ಯಾರಾದರೂ ವಯಸ್ಸಿನಲ್ಲಿಯೋ ಅಥವಾ ನಂಬಿಕೆಯಲ್ಲಿ ಚಿಕ್ಕವರಾಗಿದ್ದರೆ, ಅವರು ಅನೇಕ ಪರಿಸ್ಥಿತಿಗಳಲ್ಲಿ ಆಧ್ಯಾತ್ಮಿಕ ಪರಿಪಕ್ವತೆಯನ್ನು ಹೊಂದಿರುವುದಿಲ್ಲ. ಅವರಿಗೆ ಸಲಹೆಯನ್ನು ನೀಡುವುದು ಮತ್ತು ಆಧ್ಯಾತ್ಮಿಕ ಮಾರ್ಗದರ್ಶನ ನೀಡುವುದು ಬಹುಶಃ ಕಷ್ಟಕರವಾಗಿರುತ್ತದೆ. ಅವರು ತಮ್ಮನ್ನು ತಾವು ಬೆಳೆಸಿಕೊಳ್ಳತಕ್ಕದ್ದು. ಇದರಿಂದ ಅವರು ಕ್ರಿಸ್ತನಲ್ಲಿ ಆಳವಾಗಿ ಬೇರೂರಲಿಕ್ಕೆ ಸಾಧ್ಯವಾಗುವುದು. ಕ್ರಿಸ್ತನಲ್ಲಿ ಚೆನ್ನಾಗಿ ಬೇರೂರಿಲ್ಲದ ವ್ಯಕ್ತಿಯು ಶೋಧನೆಗೆ ಒಳಗಾಗುವುದು ಮತ್ತು ಹಿಂಜಾರುವುದು ಸುಲಭವಾಗಿರುತ್ತದೆ.

ಯುವನಾಯಕರಿಗೆ ಹಿರಿಯ ನಾಯಕರುಗಳ (ನಂಬಿಕೆಯಲ್ಲಿ ಹಿರಿಯ ವ್ಯಕ್ತಿಗಳು) ಸಲಹೆ ಮತ್ತು ಪ್ರೋತ್ಸಾಹವು ಅಗತ್ಯವಾಗಿರುತ್ತದೆ. ಅವರು ಯುವನಾಯಕರೊಂದಿಗೆ ಇದ್ದು ಅವರನ್ನು ಸೇವೆಯಲ್ಲಿ ಮಾರ್ಗದರ್ಶನ ಮಾಡಬೇಕು.

ಮೊದಲನೇ ತಿಮೊಥೆ ಅಧ್ಯಾಯ 4 ಮತ್ತು 5 (ಬೋಧನೆ)

ಸುಳ್ಳುಬೋಧಕರನ್ನು ಹೇಗೆ ಕಂಡುಹಿಡಿಯುವುದು (1 ತಿಮೊ. 4:1-10)

ಚರ್ಚೆಯ ಪ್ರಶ್ನೆ

ನಾವು ನಮ್ಮನ್ನು ದೈವಭಕ್ತಿಯಲ್ಲಿ ಹೇಗೆ ತರಬೇತಿಗೊಳಿಸಿಕೊಳ್ಳಬಹುದು? "ದೈವಭಕ್ತಿಯಲ್ಲಿ ತರಬೇತಿ"ಯ ಕುರಿತು ಯಾವುದಾದರೂ ಗ್ರಂಥಗಳು ನಿಮಗೆ ತಿಳಿದಿದೆಯೇ?

ಉತ್ತರ

ಪೌಲನು ಬರೆಯುವುದೇನೆಂದರೆ, ಪೌಷ್ಟಿಕ ಆಹಾರವು ನಮ್ಮ ದೈಹಿಕ ಬೆಳವಣಿಗೆ ಮತ್ತು ಆರೋಗ್ಯಕ್ಕೆ ಎಷ್ಟು ಒಳ್ಳೆಯದೋ ಅದೇ ರೀತಿ ಸ್ವಸ್ಥಬೋಧನೆಯು ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಆರೋಗ್ಯಕರವಾಗಿರುತ್ತದೆ (ವಚನ 6). ದೇವರಿಲ್ಲದ ಪುರಾಣಗಳು ಮತ್ತು ಇತರ ಅಸಂಬದ್ಧತೆಗಳೊಂದಿಗೆ ನಾವು ಯಾವುದೇ ಸಂಬಂಧವನ್ನು ಹೊಂದಿರಬಾರದು, ಯಾಕೆಂದರೆ ನಮ್ಮ ದೇಹದ ಆರೋಗ್ಯವನ್ನು ಕೆಡಿಸುವ ಆಹಾರ ಪದಾರ್ಥಗಳ ಹಾಗೆ ಇಂತಹ ಬೋಧನೆಗಳು ನಮ್ಮ ಆತ್ಮೀಕ ಜೀವನದ ಬೆಳವಣಿಗೆ ಕುಂಠಿತಗೊಳಿಸುತ್ತವೆ. ದೇವರ ವಾಕ್ಯವು (ಮತ್ತು ದೇವರ ವಾಕ್ಯ ಆಧಾರಿತ ಸ್ವಸ್ಥಬೋಧನೆಯು) ನಮ್ಮ ಆತ್ಮೀಕ ಜೀವಿತದ ಬೆಳವಣಿಗೆಗೆ ಉತ್ತಮ ಆಹಾರವಾಗಿದೆ.

ಇದಲ್ಲದೆ, ನಮ್ಮ ದೈಹಿಕ ಆರೋಗ್ಯಕ್ಕೂ ವ್ಯಾಯಾಮ ಮತ್ತು ದೈಹಿಕ ಚಟುವಟಿಕೆಗಳು ಒಳ್ಳೆಯವುಗಳಾಗಿವೆ. ಅದೇ ರೀತಿಯಲ್ಲಿ ನಮ್ಮ ಆತ್ಮೀಕ ಆರೋಗ್ಯ ಮತ್ತು ಆತ್ಮೀಕ ಬೆಳವಣಿಗೆಗೆ "ಆತ್ಮೀಕ ವ್ಯಾಯಾಮವು" ಬಹಳ ಪ್ರಾಮುಖ್ಯವಾದದ್ದು. ದೇವರ ವಾಕ್ಯವನ್ನು ಕೇಳಿ ಅದಕ್ಕೆ ವಿಧೇಯರಾಗಿ ಜೀವಿಸುವುದೇ ನಮ್ಮ ಆತ್ಮೀಕ ವ್ಯಾಯಾಮವಾಗಿದೆ.

ವಾಕ್ಯಗಳು: ಯೋಹಾನ. 17:7; ರೋಮಾ. 12:1-2; ಗಲಾತ್ಯ. 5:22; ಫಿಲಿಪ್ಪ. 2:12-13; 1 ತಿಮೊಥೆ. 5:11-12

ಸತ್ಯಬೋಧನೆಯನ್ನು ಹೇಗೆ ಉತ್ತೇಜಿಸುವುದು (1 ತಿಮೊ. 4:11-5:2)

ಚರ್ಚೆಯ ಪ್ರಶ್ನೆ

ಅನೇಕ ಯೌವನಸ್ಥ ನಾಯಕರುಗಳು ತಮ್ಮ ಹಿರಿಯ ನಾಯಕರುಗಳು ತಮ್ಮನ್ನು ಕೀಳಾಗಿ ನೋಡುತ್ತಾರೆ ಮತ್ತು ಪ್ರೋತ್ಸಾಯಿಸುವುದಿಲ್ಲ, ಅವರ ಯೌವನದ ತಪ್ಪುಗಳನ್ನು ಎತ್ತಿಹಿಡಿಯುತ್ತಾರೆಂಬ ದೂರನ್ನು ಹೇಳುತ್ತಾರೆ. ಈ ಒಂದು ಕ್ಷೇತ್ರದಲ್ಲಿ ನಿಮಗೆ ಯಾವ ಅನುಭವವಿದೆ?

ಉತ್ತರ

(ವಿದ್ಯಾರ್ಥಿಗಳು ತಮ್ಮದೇ ಆದ ಉತ್ತರಗಳನ್ನು ಮತ್ತು ಆಲೋಚನೆಗಳನ್ನು ಹೊಂದಿರುತ್ತಾರೆ.)

ಚರ್ಚೆಯ ಪ್ರಶ್ನೆ

ನಮ್ಮ ಅಧ್ಯಯನದಲ್ಲಿ ಸ್ವಸ್ಥಬೋಧನೆಯನ್ನು ಹೇಗೆ ಉತ್ತೇಜಿಸುವುದು ಎಂಬುದರ ಕುರಿತು ನಾವು ಈ ಕೆಳಗಿನ ಆರು ಅಂಶಗಳನ್ನು ಕಂಡುಕೊಂಡಿದ್ದೇವೆ. ಪ್ರತಿಯೊಂದು ಅಂಶವನ್ನು ಚರ್ಚಿಸಿರಿ. ನೀವು ಅದನ್ನು ಅರ್ಥಮಾಡಿಕೊಂಡಿದ್ದೀರಾ? ಒಬ್ಬ ನಾಯಕನಾಗಿ ನೀವು ಪ್ರತಿಯೊಂದು ಅಂಶವನ್ನು ಹೇಗೆ ಪೂರೈಸಬಹುದು?

ಅ. ತಿಮೊಥೆಯು ಒಳ್ಳೆಯ ಮಾದರಿಯಲ್ಲಿ ಜೀವಿಸುವುದು.

ಆ. ಪೌಲನು ನೇಮಿಸಿದಾಗ ತಿಮೊಥೆಯನು ಪಡೆದ ಅಧಿಕಾರವನ್ನು ಅರಿತುಕೊಳ್ಳತಕ್ಕದ್ದು, ಆದರೆ ಅದಕ್ಕಿಂತಲೂ ಹೆಚ್ಚಾಗಿ ವಾಕ್ಯದ ಅಧಿಕಾರವನ್ನು ಅರಿತುಕೊಳ್ಳಬೇಕು.

ಇ. ತಿಮೊಥೆಯು ತನ್ನಲ್ಲಿರುವ ವರಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಈ. ತಿಮೊಥೆಯು ತನ್ನ ಪ್ರಗತಿಯನ್ನು ತೋರಿಸತಕ್ಕದ್ದು.

ಉ. ತಿಮೊಥೆಯು ತನ್ನ ಬಗ್ಗೆ ಗಮನಹರಿಸಬೇಕು.

ಊ. ತಿಮೊಥೆಯು ತನ್ನ ಸಂಬಂಧಗಳಿಗೆ ಗಮನವನ್ನು ಹರಿಸತಕ್ಕದ್ದು.

ಉತ್ತರ

ಒಬ್ಬ ನಾಯಕನಾಗಿ ನೀವು ಪ್ರತಿಯೊಂದು ಹಂತಕ್ಕೂ ಹೇಗೆ ಹೊಂದಿಕೊಳ್ಳಬಹುದು ಎಂಬುದರ ಕೆಲವು ಉದಾಹರಣೆಗಳು ಇಲ್ಲಿವೆ:

- ಯಾವಾಗಲೂ ದೇವರ ಹತ್ತಿರದಲ್ಲಿ ಜೀವಿಸುತ್ತಾ ಆತನಿಗೆ ಎಲ್ಲವನ್ನು ಒಪ್ಪಿಸಿಕೊಡಿರಿ!
- ಧೈರ್ಯದಿಂದ ದೇವರು ನಿಮಗೆ ಹೇಳುವುದನ್ನು ಮಾಡಿರಿ!
- ತಗ್ಗಿಸಿಕೊಳ್ಳಿರಿ!
- ಇತರರು ಹೇಳುವಾಗ ಆಲಿಸಿರಿ!
- ಇತರರಿಂದ ಕಲಿಯಿರಿ!
- ನಿಮ್ಮ ತಪ್ಪುಗಳಿಂದ ಕಲಿಯಿರಿ!
- ಬೆಳೆಯುವುದನ್ನು ಮುಂದುವರಿಸಿರಿ ಮತ್ತು ದೇವರ ವಾಕ್ಯದಿಂದ ಇನ್ನಷ್ಟು ಕಲಿಯಲು ಶ್ರಮವಹಿಸಿರಿ!
- ನಿಮ್ಮ ಜೀವನವನ್ನು ವೀಕ್ಷಿಸಿರಿ!

ಮೊದಲನೇ ತಿಮೊಥೆ ಅಧ್ಯಾಯ 5 ಮತ್ತು 6 (ಸಾಮಾಜಿಕ ಜವಾಬ್ದಾರಿಗಳು)

ಸಭೆಯ ಸಾಮಾಜಿಕ ಜವಾಬ್ದಾರಿಗಳು (1 ತಿಮೊ. 5:3-6:2)

ಚರ್ಚೆಯ ಪ್ರಶ್ನೆ

ಭಾರತೀಯ ಸಂಸ್ಕೃತಿಯಲ್ಲಿ ಒಬ್ಬ ವಿಧವೆಯನ್ನು ಹೇಗೆ ಗೌರವಿಸಲಾಗುವುದು ಮತ್ತು ಪರಿಗಣಿಸಲಾಗುವುದು? ಅಪರಿಚಿತರಿಗೂ ಮತ್ತು ತಂದೆಯಿಲ್ಲದವರಿಗೂ ಹಾಗೂ ವಿಧವೆಯರಿಗೆ ಸಭೆಯು ಹೆಚ್ಚಿನದ್ದನ್ನು ಏನಾದರೂ ಮಾಡಲು ಸಾಧ್ಯವಿದೆಯೋ?

ಉತ್ತರ

(ವಿದ್ಯಾರ್ಥಿಗಳು ತಮ್ಮದೇ ಆದ ಉತ್ತರಗಳನ್ನು ಮತ್ತು ಆಲೋಚನೆಗಳನ್ನು ಹೊಂದಿರುತ್ತಾರೆ)

ಚರ್ಚೆಯ ಪ್ರಶ್ನೆ

ಪಾವತಿಸುವ ಸಭಾಪಾಲಕರ ಕುರಿತು ನೀವು ಏನನ್ನು ಆಲೋಚಿಸುವಿರಿ? "ಗುಡಾರವನ್ನು ಮಾಡುವ ಕಾರ್ಯ" ನೀವು ಒಂದು ಆಯ್ಕೆಯನ್ನಾಗಿ ಕಾಣುವಿರೋ?

ಉತ್ತರ

(ವಿದ್ಯಾರ್ಥಿಗಳು ತಮ್ಮದೇ ಆದ ಉತ್ತರಗಳನ್ನು ಮತ್ತು ಆಲೋಚನೆಗಳನ್ನು ಹೊಂದಿರುತ್ತಾರೆ.)

ಚರ್ಚೆಯ ಪ್ರಶ್ನೆ

ಕೈಗಳನ್ನಿಡುವುದರ ಬಗ್ಗೆ ಪೌಲನು ಹೇಳುವಾಗ ಏನನ್ನು ಉಲ್ಲೇಖಿಸುತ್ತಿದ್ದಾನೆ? ಈ ಒಂದು ಕಾರ್ಯದಲ್ಲಿ ಜಾಗರೂಕರಾಗಿರುವುದು ಏಕೆ ಪ್ರಾಮುಖ್ಯವಾಗಿದೆ?

ಉತ್ತರ

ಬಹುಶಃ ಪೌಲನು ದೀಕ್ಷೆಯ ಕಾರ್ಯವನ್ನು ಉಲ್ಲೇಖಿಸುತ್ತಿರಬಹುದು (1 ತಿಮೊ. 4:14 ಮತ್ತು 2 ತಿಮೊ. 1:6 ಅನ್ನು ಹೋಲಿಸಿ, ಅಲ್ಲಿಯೂ ಸಹ ಈ ನುಡಿಗಟ್ಟನ್ನು ಬಳಸಲಾಗಿದೆ). ಒಂದು ನಿರ್ದಿಷ್ಟ ಸೇವೆಗೆ ಪ್ರವೇಶಿಸುವ ವ್ಯಕ್ತಿಯ ತಲೆಯ ಮೇಲೆ ಕೈಗಳನ್ನು ಇಡುವುದು ಎರಡು ಮುಖ್ಯ ಉದ್ದೇಶಗಳನ್ನು ಹೊಂದಿದೆ:

- ಇದು ಯಾರಿಗಾಗಿ ಪ್ರಾರ್ಥಿಸಲಾಗುತ್ತದೆ ಎಂಬುದನ್ನು ಗುರುತಿಸುತ್ತದೆ. ಹಿರಿಯರು ಯಾರ ಮೇಲೆ ಕೈಯನ್ನು ಇಡುತ್ತಾರೆ ಎಂಬುದನ್ನು ಹಾಜರಿರುವ ಪ್ರತಿಯೊಬ್ಬರೂ ನೋಡಬಹುದು.
- ದೇವರು ಅವರನ್ನು ಕರೆದಿರುವ ಸೇವೆಗೆ ಅವರನ್ನು ಬಹಿರಂಗವಾಗಿ ನಿಯೋಜಿಸುವುದಾಗಿದೆ.

ಈ ಕ್ಷೇತ್ರದಲ್ಲಿ ಜಾಗರೂಕರಾಗಿರುವುದು ಮುಖ್ಯವಾದದ್ದಾಗಿದೆ. 1 ತಿಮೊಥೆ. 5:20 ರಲ್ಲಿ ಪಾಪಮಾಡುತ್ತಿರುವ ನಾಯಕನನ್ನು ಗದರಿಸುವ ಅಗತ್ಯವನ್ನು ಪೌಲನು ಉಲ್ಲೇಖಿಸುತ್ತಾನೆ. ಅಂತಹ ಹಗರಣವನ್ನು ತಪ್ಪಿಸಲು ಉತ್ತಮವಾಗದ ಮಾರ್ಗವೆಂದರೆ ನಾಯಕತ್ವದ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನೇಮಿಸುವ ಮೊದಲು ಎಚ್ಚರಿಕೆಯಿಂದ ಪರೀಕ್ಷಿಸುವುದು. ಪೌಲನು ತನ್ನ ಪತ್ರದಲ್ಲಿ ನಾಯಕನಲ್ಲಿ ಅಗತ್ಯವಿರುವ ಗುಣಗಳನ್ನು ಮೊದಲೇ ವಿವರಿಸಿದ್ದಾನೆ (ಉದಾಹರಣೆಗೆ, 1 ತಿಮೊಥೆ. 3:1-13 ನೋಡಿರಿ). ಆದ್ದರಿಂದ ಯಾವುದೇ ವ್ಯಕ್ತಿಯನ್ನು ಸೇವೆಗೆ ನೇಮಿಸುವ ಮೊದಲು ಈ ನಾಯಕತ್ವದ ಗುಣಗಳು ಇರಬೇಕು. ಸಹಜವಾಗಿ, ಪ್ರತಿಯೊಬ್ಬರೂ

ತಪ್ಪುಗಳನ್ನು ಮಾಡಬಹುದು ಮತ್ತು ಕೆಲವರು ಜೀವನದಲ್ಲಿ ಬದಲಾಗಬಹುದು. ಆದ್ದರಿಂದ ನಾವು ಕ್ಷಮಿಸುವ ಮನೋಭಾವವನ್ನು ಹೊಂದಿರಬೇಕು. ಆದ್ದರಿಂದ ನಾವು ಸೇವೆಗೆ ಯಾರನ್ನು ಆರಿಸಿಕೊಳ್ಳುತ್ತೇವೆ ಮತ್ತು ನೇಮಿಸುತ್ತೇವೆ ಎಂಬುದರ ಬಗ್ಗೆ ನಾವು ಜಾಗರೂಕರಾಗಿರಬೇಕು.

ಮೊದಲನೇ ತಿಮೊಥೆ ಅಧ್ಯಾಯ 6 (ಸರಿ ಮತ್ತು ತಪ್ಪು)

ದೇವರ ಸೇವಕರು (1 ತಿಮೊ. 6:11-16)

ಚರ್ಚೆಯ ಪ್ರಶ್ನೆಗಳು

1 ತಿಮೊಥೆಯ 6:11-16 ಅನ್ನು ಓದಿರಿ ಮತ್ತು ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ

1. ನೀತಿಯ ವಿಷಯಕ್ಕೆ ಬಂದಾಗ ದೇವರ ಸೇವಕನು ಯಾವುದರಿಂದ ಓಡಿಹೋಗಬೇಕು?
2. ನೀತಿಯ ವಿಷಯಕ್ಕೆ ಬಂದಾಗ ದೇವರ ಸೇವಕನು ಯಾವುದಕ್ಕೆ ಶ್ರಮವಹಿಸಬೇಕು?
3. ಸೈದ್ಧಾಂತಿಕ ವಿಷಯಕ್ಕೆ ಬಂದಾಗ ದೇವರ ಸೇವಕನು ಯಾವುದರಿಂದ ಓಡಿಹೋಗಬೇಕು?
4. ಸೈದ್ಧಾಂತಿಕವಾಗಿ ದೇವರ ಸೇವಕನು ಯಾವುದಕ್ಕೆ ಶ್ರಮವಹಿಸಬೇಕು?
5. ದೇವರ ಸೇವಕನು ಯಾಕೆ ಈ ಸಂಗತಿಗಳನ್ನು ಮಾಡಬೇಕು?

ಉತ್ತರಗಳು

1. ಹಣದ ಪ್ರೀತಿ, ವಿವಾದಗಳು, ಜಗಳಗಳು, ಅಸೂಯೆ ಮತ್ತು ಭ್ರಷ್ಟಮನಸ್ಸು ಇತ್ಯಾದಿ.
2. ನೀತಿವಂತಿಕೆ, ದೇವಭಕ್ತಿ, ನಂಬಿಕೆ, ಪ್ರೀತಿ, ತಾಳ್ಮೆ ಮತ್ತು ಸೌಮ್ಯತೆ.
3. ಸುಳ್ಳುಬೋಧನೆಯಿಂದ ಓಡಿಹೋಗಬೇಕು.
4. ಸ್ವಸ್ಥಬೋಧನೆ.
5. ದೇವರು ನಮ್ಮ ಜೀವನದಲ್ಲಿ ಇರುವುದರಿಂದ ಮತ್ತು ಯೇಸು ಕ್ರಿಸ್ತನು ಹಿಂತಿರುಗಿ ಬರುತ್ತಿರುವುದರಿಂದ ನಾವು ನಿರ್ದೋಷಿಗಳಾಗಿರಬೇಕು.

ಚರ್ಚೆಯ ಪ್ರಶ್ನೆ

ಪೌಲನು ದೇವರನ್ನು ವರ್ಣಿಸುತ್ತಾನೆ ಮತ್ತು ಆತನ ವಿವರಣೆಯನ್ನು ನಾವು ನಾಲ್ಕು ಶಕ್ತಿಯುತ ಪದಗಳಿಂದ ಸಂಕ್ಷಿಪ್ತಗೊಳಿಸಬಹುದು: ದೇವರು ಸೋಲರಿಯದವನು (ಆತನೊಬ್ಬನೇ ಆಳುವವನು, ರಾಜಾಧಿರಾಜನು ಮತ್ತು ಕರ್ತನು). ದೇವರು ಅಮರನು. ದೇವರು ತಲುಪಲಾಗದವನು (ಆತನು ಎಟುಕದ ಬೆಳಕಿನಲ್ಲಿ ವಾಸಿಸುವವನಾಗಿದ್ದಾನೆ). ದೇವರು ಅದೃಶ್ಯನಾಗಿದ್ದಾನೆ (ಯಾರೂ ಅವನನ್ನು ನೋಡುವುದಿಲ್ಲ). ಈ ಪದಗಳನ್ನು ನೀನು ಹೇಗೆ ಅರ್ಥೈಸಿಕೊಳ್ಳುತ್ತೀ? ಮತ್ತು ದೇವರು ಈ ರೀತಿಯಾದ ಗುಣಲಕ್ಷಣಗಳನ್ನು ಹೊಂದಿದ್ದಾನೆ ಎಂದು ಹೇಳುವುದರ ಅರ್ಥವೇನು?

ಉತ್ತರ

- ಅಜೇಯ: ದೇವರು ಸ್ವರ್ಗದಲ್ಲಿ ಮತ್ತು ಭೂಮಿಯ ಮೇಲೆ ಎಲ್ಲಾ ಶಕ್ತಿಯನ್ನು ಹೊಂದಿದ್ದಾನೆ. ದೇವರು ಆಳ್ವಿಕೆಮಾಡುವವನು, ರಾಜರ ರಾಜನು ಮತ್ತು ಪ್ರಭುಗಳ ಪ್ರಭು ಎಂದು ಪೌಲನು ಬರೆಯುತ್ತಿದ್ದಾನೆ. ಅವನಿಗೆ ಸಮಾನರು ಯಾರೂ ಇಲ್ಲ. ಅವನು ಅತ್ಯುನ್ನತ ರಾಜನು.
- ಅಮರ: ದೇವರು ಶಾಶ್ವತ, ಶಾಶ್ವತತೆಯಿಂದ ಶಾಶ್ವತತೆಗೆ, ಅವನು ಸಾಯಲು ಸಾಧ್ಯವಿಲ್ಲ. ಅವನು ಶಾಶ್ವತವಾಗಿ ಜೀವಿಸುವವನಾಗಿದ್ದಾನೆ.
- ಪ್ರವೇಶಿಸಲಾಗದು: ದೇವರು ಯಾರೂ ಸಮೀಪಿಸಲು ಸಾಧ್ಯವಾಗದ ಬೆಳಕಿನಲ್ಲಿ ವಾಸಿಸುತ್ತಾನೆ. ದೇವರು ಪವಿತ್ರ ಮತ್ತು ಪ್ರತ್ಯೇಕ ಎಂದು ಸತ್ಯವೇದವು ತಿಳಿಸುತ್ತದೆ. ಅಶುದ್ಧ ಅಥವಾ ಪಾಪಪೂರ್ಣವಾದ ಯಾವುದೂ ಆತನ ಬಳಿಗೆ ಬರಲು ಸಾಧ್ಯವಿಲ್ಲ. ನಾವು ಯೇಸು ಕ್ರಿಸ್ತನ ಮೂಲಕ

ಮಾತ್ರ ದೇವರ ಬಳಿಗೆ ಬರಬಹುದು ಎಂದು ನಮಗೆ ತಿಳಿದಿದೆ. ಯೇಸು ಕ್ರಿಸ್ತನು ಪಾಪದಿಂದ ಮುಕ್ತನಾಗಿದ್ದನು ಮತ್ತು ನಾವು ನಮ್ಮ ಜೀವಿತಗಳಲ್ಲಿ ಆತನ ತ್ಯಾಗ ಮತ್ತು ಪ್ರಭುತ್ವವನ್ನು ಸ್ವೀಕರಿಸಿದಾಗ, ನಾವು ಕ್ರಿಸ್ತನ ಮೂಲಕ ದೇವರನ್ನು ವಿಶ್ವಾಸದಿಂದ ಸಮೀಪಿಸಬಹುದು.

- ಅದೃಶ್ಯ: ದೇವರು ಆತ್ಮಸ್ವರೂಪನು, ಇದರರ್ಥ ಆತನು ವಸ್ತುವಿನಿಂದ ಕೂಡಿಲ್ಲ ಮತ್ತು ಅವನಿಗೆ ಭೌತಿಕ ಸ್ವಭಾವವಿಲ್ಲ. ದೇವರು ಭೌತಿಕ ಜಗತ್ತನ್ನು ಸೃಷ್ಟಿಸಿದನು, ಆದರೆ ಅವರು ಸತಃ ಯಾವುದೇ ವಸ್ತುವಿನಿಂದ ಕೂಡಿಲ್ಲ. ಯೋಹಾನ 4:24 ರಲ್ಲಿ ದೇವರು ಆತ್ಮಸ್ವರೂಪನು ಎಂಬುದಾಗಿ ಯೇಸು ಹೇಳಿದ್ದಾರೆ. ಮತ್ತು ನಾವು ಯೋಹಾನ 6:16 ರಲ್ಲಿ ಯಾರೂ ಆತನನ್ನು ನೋಡಿಲ್ಲ ಮತ್ತು ನೋಡಲು ಸಾಧ್ಯವಿಲ್ಲ ಎಂಬುದಾಗಿ ಓದುತ್ತೇವೆ.

ಶ್ರೀಮಂತ ಕ್ರೈಸ್ತವಿಶ್ವಾಸಿಗಳು (1 ತಿಮೊ. 6:17-19)

ಚರ್ಚೆಯ ಪ್ರಶ್ನೆ

ಈ ಜಗತ್ತಿನಲ್ಲಿ ಹಣದ ಪ್ರೀತಿಯ ವಿರುದ್ಧ ನಾವು ಹೇಗೆ ನಿಂತುಕೊಳ್ಳಬಹುದಾಗಿದೆ? ನಮ್ಮ ಜೀವಿತಗಳಲ್ಲಿ ಈ ಗುಣಲಕ್ಷಣಗಳನ್ನು (ಸರಳತೆ, ಕೃತಜ್ಞತಾ ಮನೋಭಾವ, ತೃಪ್ತಿ ಮತ್ತು ಉದಾರತೆ) ಬೆಳೆಯುವಂತೆ ನಾವು ಏನು ಮಾಡಬಹುದು? ನಾವು ಯಾವುದರಲ್ಲಿ ಬದಲಾಗಬೇಕಾಗಿದೆ?

ಉತ್ತರ

ಸತ್ಯವೇದವು ನಮಗೆ ಈ ರೀತಿಯ ಮಾರ್ಗದರ್ಶನವನ್ನು ನೀಡುತ್ತದೆ: ನಾವು ಸರಳ ಜೀವನವನ್ನು ನಡೆಸುವುದು, ಕೃತಜ್ಞತೆ, ಸಂತೃಪ್ತಿ ಮತ್ತು ಉದಾರತೆಯಿಂದ ಇರುವುದು ಮತ್ತು ನಮ್ಮ ಜೀವನ, ನಮ್ಮ ಭೌತಿಕ ವಸ್ತುಗಳು ಮತ್ತು ನಮ್ಮ ಸಮಯವನ್ನು ಇತರರೊಂದಿಗೆ ಹಂಚಿಕೊಳ್ಳುವುದರ ಮೇಲೆ ಕೇಂದ್ರೀಕರಿಸಬೇಕು. ನಮ್ಮ ದೈನಂದಿನ ಜೀವನದಲ್ಲಿ ಸರಿಯಾದ ಆಯ್ಕೆಗಳನ್ನು ಮಾಡುವ ಮೂಲಕ ನಾವು ಈ ಗುಣಗಳನ್ನು ನಮ್ಮ ಜೀವಿತಗಳಲ್ಲಿ ಬೆಳೆಸಿಕೊಳ್ಳಬಹುದು. ಕೆಲವು ಉದಾಹರಣೆಗಳು:

- ನಮಗೆ ಆ ನಿರ್ದಿಷ್ಟ ವಿಷಯ ನಿಜವಾಗಿಯೂ ಅಗತ್ಯವಿದೆಯೇ ಅಥವಾ ನಮ್ಮ ಹಣವನ್ನು ಹೆಚ್ಚು ಬುದ್ಧಿವಂತಿಕೆಯಿಂದ ಬಳಸಬಹುದೇ ಎಂದು ನಾವು ನಮ್ಮನ್ನು (ಮತ್ತು ದೇವರನ್ನು) ಕೇಳಿಕೊಳ್ಳಬಹುದು ಮತ್ತು ನಮಗೆ ಒಂದು ನಿರ್ದಿಷ್ಟ ವಿಷಯ ನಿಜವಾಗಿಯೂ ಅಗತ್ಯವಿದ್ದರೆ, ಅತ್ಯಂತ ಸಮಂಜಸವಾದ ಆಯ್ಕೆ ಯಾವುದು?
- ನಾವು ಈಗಾಗಲೇ ಹೊಂದಿರುವ ಮತ್ತು ಈ ದಿನ ನಾವು ಪಡೆಯುತ್ತಿರುವ ಆಹಾರ, ಬಟ್ಟೆ ಮತ್ತು ಇತರ ನಿಬಂಧನೆಗಳಿಗೆ ನಾವು ಕೃತಜ್ಞರಾಗಿರಬೇಕು.
- ದೇವರು ನಮಗೆ ನೀಡುವ ಎಲ್ಲಾ ಹೆಚ್ಚುವರಿ ಆಶೀರ್ವಾದಗಳಿಗಾಗಿ ನಾವು ಕೃತಜ್ಞರಾಗಿರಬೇಕು.
- ನಾವು ದುರಾಸೆ ಅಥವಾ ಅತ್ಯಾಸೆಯಿಂದ ಕೂಡಿರದೆ ನಮ್ಮ ಹೃದಯ ಮತ್ತು ಮನಸ್ಸುಗಳನ್ನು ಕಾಪಾಡಿಕೊಳ್ಳಬೇಕು.
- ನಾವು ನಮ್ಮ ಸಮಯ, ಹಣ, ಭೌತಿಕ ವಸ್ತುಗಳು, ಆಹಾರ ಅಥವಾ ದೇವರು ನಮಗೆ ಹೇಳುವಂತೆ ಬೇರೆಯವರಿಗೆ ಬೇಕಾಗಬಹುದಾದ ಯಾವುದನ್ನಾದರೂ ಇತರರಿಗೆ ನೀಡಲು ಸಿದ್ಧರಾಗಿರಬೇಕು.

ಈ ಗುಣಲಕ್ಷಣಗಳನ್ನು ಬೆಳಸಿಕೊಳ್ಳಲು ನಿಮ್ಮ ಜೀವನದಲ್ಲಿ ನೀವು ಏನನ್ನು ಬದಲಾಯಿಸಿಕೊಳ್ಳಬೇಕು ಎಂಬುದರ ಕುರಿತು ಹೆಚ್ಚು ಚಿಂತಿಸಿರಿ.

ತೀತನು ಅಧ್ಯಾಯ 1 (ಸಿದ್ಧಾಂತ ಮತ್ತು ಹಿರಿಯರು)

ಸಭೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (ತೀತ 1:5-16)

ಹಿರಿಯರ ಕುರಿತು ಮೂರು ಅಂಶಗಳು:

1. ಅವರು ತಮ್ಮ ವಿವಾಹ ಮತ್ತು ಕುಟುಂಬ ಜೀವನದಲ್ಲಿ ನಿರ್ದೋಷಿಗಳಾಗಿರಬೇಕು (1:6).
2. ಅವರು ತಮ್ಮ ಸ್ವಭಾವ ಮತ್ತು ನಡವಳಿಕೆಯಲ್ಲಿ ನಿರ್ದೋಷಿಗಳಾಗಿರಬೇಕು (1:7-8).
3. ಅವರು ತಮ್ಮ ಸತ್ಯವಾದ ಸಿದ್ಧಾಂತಗಳಲ್ಲಿ ನಿರ್ದೋಷಿಗಳಾಗಿರಬೇಕು (1:9).

ಚರ್ಚೆಯ ಪ್ರಶ್ನೆ

ಇತರೆ ಬೇರೆ ಅಂಶಗಳಿಗಿಂತ ಈ ಅಂಶಗಳು ಹೆಚ್ಚು ಪ್ರಾಮುಖ್ಯವಾಗಿವೆ ಎಂದು ನೀವು ಆಲೋಚಿಸುತ್ತೀರಾ? ಯಾಕೆ ಅಥವಾ ಯಾಕೆ ಇಲ್ಲ?

ಉತ್ತರ

ಅವೆಲ್ಲವೂ ಪ್ರಾಮುಖ್ಯವಾದದ್ದು. ಒಂದುವೇಳೆ ನಿಮ್ಮ ನಡತೆಯು ತಪ್ಪಾಗಿದ್ದರೆ, ನೀವು ಸರಿಯಾದ ಸೈದ್ಧಾಂತಿಕ ಸತ್ಯಗಳನ್ನು ಹಿಡಿದಿಟ್ಟುಕೊಳ್ಳುವುದರಿಂದ ನಿಮಗೆ ಯಾವುದೇ ಪ್ರಯೋಜನವಿಲ್ಲ.

ಚರ್ಚೆಯ ಪ್ರಶ್ನೆ

ನಿರ್ದೋಷಿಗಳಾಗಿರುವುದು ಎಂಬುದರ ಅರ್ಥವೇನು? ಹಿರಿಯರು ಪರಿಪೂರ್ಣರು ಮತ್ತು ನಿಷ್ಕಳಂಕರು ಆಗಿರಬೇಕೇ? ಅಥವಾ ಅವರ ಮೇಲೆ ಆರೋಪ ಮಾಡಲು ಮತ್ತು ದೂಷಿಸಲು ಏನೂ ಇರಬಾರದು ಎಂಬುದು ಇದರರ್ಥವಾಗಿದೆಯೋ?

ಉತ್ತರ

ನಿರ್ದೋಷಿಗಳ ಅವಶ್ಯಕತೆಯು ಆ ವ್ಯಕ್ತಿಯು ಆರೋಪ ಅಥವಾ ದೋಷರಹಿತನಾಗಿರಬೇಕೆಂಬ ಅರ್ಥವಲ್ಲ. ಹೀಗಾದರೆ ನಾವೆಲ್ಲರೂ ಅನರ್ಹರಾಗುತ್ತೇವೆ! ಬದಲಾಗಿ, ಸಭೆಯಲ್ಲಿರುವ ನಾಯಕರ ಜೀವನವನ್ನು ಪರಿಶೀಲಿಸಿದಾಗ, ಅವರು ಪ್ರಾಮಾಣಿಕರು ಮತ್ತು ಸತ್ಯವಂತರು ಎಂದು ನಾವು ಕಂಡುಕೊಳ್ಳಬೇಕೆಂದರ್ಥ. ನಾಯಕರ ಖ್ಯಾತಿಯು ಮುಖ್ಯವಾಗಿದೆ, ಯಾಕೆಂದರೆ ಅವರ ಸೇವೆಯು ಸಾರ್ವಜನಿಕವಾಗಿದೆ. ನಾವು ಪರಿಪೂರ್ಣರಲ್ಲ, ಆದರೆ ನಾವು ತಪ್ಪುಮಾಡಿದಾಗ ನಾವು ದೇವರಿಗೆ ನಮ್ಮನ್ನು ಮತ್ತೆ ಒಪ್ಪಿಸಿಕೊಳ್ಳಬೇಕು ಮತ್ತು ಕ್ಷಮಾಪಣೆಯನ್ನು ಕೇಳಿ ನಾವು ಬದಲಾವಣೆಯನ್ನು ಬಯಸುವವರಾಗಿರತಕ್ಕದ್ದು.

ಚರ್ಚೆಯ ಪ್ರಶ್ನೆ

ಈ ಅಂಶವು ಇಂದು ಕರ್ನಾಟಕದ ಸಭೆಗಳಿಗೆ ಹೇಗೆ ಅನ್ವಯಿಸಲ್ಪಡುತ್ತದೆ? ನಾವು ನಾಯಕರುಗಳನ್ನು ಹೇಗೆ ನೇಮಿಸುತ್ತೇವೆ?

ಉತ್ತರ

(ವಿದ್ಯಾರ್ಥಿಗಳು ತಮ್ಮದೇ ಉತ್ತರಗಳನ್ನು ಹೊಂದಿರುತ್ತಾರೆ.)

ಚರ್ಚೆಯ ಪ್ರಶ್ನೆ

ಈ ಅಂಶಗಳು ನಿಮಗೆ ಅನ್ವಯಿಸಲ್ಪಡುತ್ತವೆಯೋ? ಹೇಗೆ?

ಉತ್ತರ

ನೀವು ಯಾವುದೇ ರೀತಿಯಿಂದ ನಾಯಕತ್ವದಲ್ಲಿದ್ದು ದೇವರ ಸೇವೆಯನ್ನು ಮಾಡಲು ಯೋಜಿಸಿದ್ದರೆ, ಈ ಅಂಶಗಳು ಖಂಡಿತವಾಗಿಯೂ ನಿಮಗೆ ಮುಖ್ಯವಾಗಿವೆ. ನಾಯಕರಾಗಿ ನಮ್ಮ ಜೀವನವನ್ನು ಕಾಪಾಡಿಕೊಳ್ಳಬೇಕು ಮತ್ತು ದೇವರು ಹಾಗೂ ಆತನ ವಾಕ್ಯಗಳಿಗೆ ನಾವು ಬದ್ಧರಾಗಿ ಜೀವನವನ್ನು ನಡಿಸಬೇಕು.

ನೀವು ನಿಮ್ಮ ಜೀವಿತದಲ್ಲಿ ಶೋಧನೆಗೆ ಒಳಗಾಗುವ ದುರ್ಬಲತೆಯ ಕಾರ್ಯವಿರುವುದಾದರೆ, ಅದರಿಂದ ಹೊರಗಡೆ ಬರಲು ದೇವರ ಸಹಾಯವನ್ನು ಮುಕ್ತವಾಗಿ ಕೇಳುವವರಾಗಿರಿ. ಹಾಗೆಯೇ ನೀವು ಭರವಸೆಯನ್ನು ಇಡುವಂತಹ ಮತ್ತು ನಂಬಿಕೆಗೆ ಅರ್ಹರಾಗಿರುವ ಆತ್ಮೀಕತೆಯ ಪ್ರಬುದ್ಧತೆಯಲ್ಲಿ ಬೆಳೆದಿರುವ ಒಬ್ಬ ಆತ್ಮೀಕ ನಾಯಕನನ್ನಾಗಲಿ ಅಥವಾ ಆತ್ಮೀಕ ಪ್ರಬುದ್ಧತೆಯ ವಿಶ್ವಾಸಿಯನ್ನಾಗಲಿ ಗುರುತಿಸಿಕೊಂಡು ಅವರ ಮಾರ್ಗದರ್ಶನವನ್ನು ಬಯಸುವವರಾಗಿರಿ. ಇಂತಹ ಕಾರ್ಯಗಳು ನಿಮ್ಮನ್ನು ಸಂರಕ್ಷಿಸಿ ಸಹಾಯ ಮಾಡುವಂತವುಗಳಾಗಿರುತ್ತವೆ.

ತೀತನು ಅಧ್ಯಾಯ 2 (ಸಿದ್ಧಾಂತ ಮತ್ತು ದೈನಂದಿನ ಜೀವನ)

ಮನೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯ (ತೀತ. 2:1-10)

ತೀತ. 2:1-10 ಓದಿ ಮತ್ತು ಕೆಳಗಿನ ಮೂರು ಪ್ರಶ್ನೆಗಳನ್ನು ಚರ್ಚಿಸಿರಿ.

ಚರ್ಚೆಯ ಪ್ರಶ್ನೆ

ಪೌಲನು ಯಾವ ಗುಂಪುಗಳನ್ನು ಮತ್ತು ವ್ಯಕ್ತಿಗಳನ್ನು ಉಲ್ಲೇಖಿಸುತ್ತಿದ್ದಾನೆ?

ಉತ್ತರ

ಪೌಲನು ವೃದ್ಧಪುರುಷರು, ವೃದ್ಧಮಹಿಳೆಯರು, ಯೌವನಸ್ಥಮಹಿಳೆಯರು, ಯೌವನಸ್ಥಪುರುಷರು, ಸ್ವತಃ ತೀತನನ್ನೇ ಮತ್ತು ಗುಲಾಮರ ಕುರಿತು ಉಲ್ಲೇಖಿಸುತ್ತಿದ್ದಾನೆ.

ಚರ್ಚೆಯ ಪ್ರಶ್ನೆ

ವಿವಿಧ ಗುಂಪುಗಳೊಂದಿಗೆ ಮರುಕಳಿಸುವ ಯಾವುದೇ ನಿರ್ದಿಷ್ಟ ವಿಷಯಾಂಶಗಳನ್ನು ನೀವು ನೋಡುತ್ತೀರಾ?

ಉತ್ತರ

ವಿಷಯಾಂಶಗಳು: ಸ್ವಯಂ ನಿಯಂತ್ರಣ, ನಂಬಿಕೆ ಮತ್ತು ಬೋಧನೆಯಲ್ಲಿ ಸ್ವಸ್ಥತೆ, ಪ್ರೀತಿ, ನಮ್ರತೆ, ದೇವರು ಮತ್ತು ಸಹಜೀವಿಗಳಿಗೆ ಗೌರವ ಮತ್ತು ಸಲ್ಲಿಕೆ.

ಚರ್ಚೆಯ ಪ್ರಶ್ನೆ

ಪೌಲನ ಸಲಹೆಗಳನ್ನು ನಮ್ಮ ಸ್ವಂತ ಪರಿಸ್ಥಿತಿಗೆ ಅನ್ವಯಿಸಬಹುದೇ? ಹೇಗೆ?

ಉತ್ತರ

ಈ ಸಲಹೆ ಇಂದು ಅಷ್ಟೇ ಮುಖ್ಯವಾಗಿದೆ. ದೇವರಿಗೆ ಮಹಿಮೆ ತರುವ ಜೀವನವನ್ನು ಹೇಗೆ ನಡೆಸುವುದು ಎಂಬುದರ ಕುರಿತು ನಾವು ವೃದ್ಧರು ಮತ್ತು ಯುವಕರಿಗೆ ಒಳ್ಳೆಯ ಸಲಹೆಯನ್ನು ನೀಡಬೇಕು. ಇದಲ್ಲದೆ, ನಮ್ಮ ಸ್ವಂತ ಜೀವನವು ಇತರರಿಗೆ ಉತ್ತಮ ಉದಾಹರಣೆಗಳಾಗಿರಬೇಕು. ನಾಯಕರಾಗಿ ನಾವು ದಾರಿ ತೋರಿಸಬೇಕು ಮತ್ತು ಪ್ರಾಮಾಣಿಕ ಮತ್ತು ದೇವಭಯವಿರುವ ಜೀವನವನ್ನು ಪ್ರದರ್ಶಿಸಬೇಕು. ಇದರಿಂದ ನಮ್ಮ ಸುತ್ತಲಿನ ಜನರು ಕ್ರೈಸ್ತೀಯ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ನಾವು ಜನರನ್ನು ಆ ರೀತಿಯ ಜೀವನವನ್ನು ನಡೆಸುವಂತೆ ಒತ್ತಾಯಿಸಲು ಸಾಧ್ಯವಿಲ್ಲ. ನಾವು ಹಾಗೆ ಮಾಡಿದರೆ, ನಾವು ಫರಿಸಾಯರಂತೆ ಇರುತ್ತೇವೆ, ಅವರು ತುಂಬಾ ಧಾರ್ಮಿಕರಂತೆ ವರ್ತಿಸಿದರು ಆದರೆ ಅವರ ಹೃದಯದಲ್ಲಿ ಅವರು ಸ್ವಾರ್ಥಿಗಳು ಮತ್ತು ತೀರ್ಪುಗಾರರಾಗಿದ್ದರು ಮತ್ತು ದೇವರ ಪ್ರೀತಿಯನ್ನು ಹಂಚಿಕೊಳ್ಳಲು ತಲೆಕೆಡಿಸಿಕೊಳ್ಳಲಿಲ್ಲ. ನಾವು ಸ್ವಯಂ ನಿಯಂತ್ರಣದಲ್ಲಿ, ನಂಬಿಕೆ ಮತ್ತು ಸಿದ್ಧಾಂತದಲ್ಲಿ ಸ್ವಸ್ಥತೆಯಲ್ಲಿ, ದೇವರು ಮತ್ತು ಇತರರ ಮುಂದೆ ಪ್ರೀತಿ ಮತ್ತು ನಮ್ರತೆಯಲ್ಲಿ ಮತ್ತು ವಿಧೇಯತೆಯಲ್ಲಿ ಮಾದರಿಗಳಾಗಿರಬೇಕು. ಆಗ ಮಾತ್ರ ನಾವು ಇತರರಿಗೆ ಕಲಿಸಬಹುದು.

ಅದೇ ಸಮಯದಲ್ಲಿ ನಾವು ಧೈರ್ಯಶಾಲಿಗಳಾಗಿರಬೇಕು ಮತ್ತು ದೇವರೊಂದಿಗೆ ಜೀವನವನ್ನು ಹೇಗೆ ನಡೆಸಬೇಕೆಂದು ತೋರಿಸಬೇಕು. ಪೌಲನು ತೀತನನ್ನು ವೃದ್ಧರು ಮತ್ತು ಯುವಕರು, ಮಹಿಳೆಯರು ಮತ್ತು ಪುರುಷರಿಬ್ಬರಿಗೂ ಕಲಿಸಲು ಪ್ರೋತ್ಸಾಹಿಸಿದನು.

ತೀತನು ಅಧ್ಯಾಯ 3 (ಸಿದ್ಧಾಂತ ಮತ್ತು ಜಗತ್ತು)

ಜಗತ್ತಿನಲ್ಲಿ ಸಿದ್ಧಾಂತ ಮತ್ತು ಕರ್ತವ್ಯಗಳು (3:18)

ಅಧ್ಯಾಯ 3 ರಲ್ಲಿ ಪೌಲನು ಮೊದಲು ಲೋಕದಲ್ಲಿ ನಮ್ಮ ಕರ್ತವ್ಯದ ಬಗ್ಗೆ ಕಲಿಸುತ್ತಾನೆ. ನಂತರ ಅವನು ಈ ಕರ್ತವ್ಯಕ್ಕೆ ಸಿದ್ಧಾಂತ ಮತ್ತು ಕಾರಣವನ್ನು ಪ್ರಸ್ತುತಪಡಿಸುತ್ತಾನೆ.

ಅ. ನಮ್ಮ ಸಂಬಂಧಗಳು: ಚರ್ಚಿಸುವ ಪ್ರಶ್ನೆ (ತೀತ. 3:2)

ನಮ್ಮ ಸಮಾಜದಲ್ಲಿರುವ ಜನರು ಕ್ರೈಸ್ತರಾದ ನಮ್ಮ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದಾರೆಂದು ನೀವು ಭಾವಿಸುತ್ತೀರಿ? ಈ ಲೋಕದಲ್ಲಿ ಹೆಚ್ಚು ಕ್ರಿಸ್ತನಂತೆ ಆಗಲು ನಾವು ಏನನ್ನು ಮಾಡಬಹುದು?

ಉತ್ತರ

ನಮ್ಮ ಸಮಾಜದಲ್ಲಿ ಕ್ರೈಸ್ತರ ಬಗ್ಗೆ ಜನರಲ್ಲಿ ಬಹುಶಃ ಹಲವು ವಿಭಿನ್ನ ವಿಚಾರಗಳಿವೆ:

ನಮ್ಮ ಸಮಾಜದಲ್ಲಿ ನಾವು ಹೇಗೆ ವರ್ತಿಸಬೇಕು ಎಂಬುದರ ಕುರಿತು ಪೌಲನು 3:2 ರಲ್ಲಿ ನಾಲ್ಕು ವಿಷಯಗಳನ್ನು ತಿಳಿಸುತ್ತಿದ್ದಾನೆ.

- ನಾವು ಯಾರನ್ನೂ ನಿಂದಿಸಬಾರದು.
- ನಾವು ಶಾಂತಿಯುತರಾಗಿರಬೇಕು.
- ನಾವು ಪರಿಗಣಿಸಬೇಕು.
- ನಾವು ಯಾವಾಗಲೂ ಎಲ್ಲರೊಂದಿಗೂ ಸೌಮ್ಯರಾಗಿರಬೇಕು.

ಆದ್ದರಿಂದ ಅಪಪ್ರಚಾರ ಮಾಡಿ ಜಗಳವಾಡುವ ಬದಲು, ವಿಶ್ವಾಸಿಗಳು ಶಾಂತಿಸ್ಥಾಪಿಸಲು ಮತ್ತು ವಿವೇಚನೆಯಿಂದ ವರ್ತಿಸುವಲ್ಲಿ ಹೆಸರುವಾಸಿಯಾಗಿರಬೇಕು. ನಾವು ಇತರರನ್ನು ಮೊದಲು ಇಡಬೇಕು. ಅವರ ಜನಾಂಗ ಅಥವಾ ಧರ್ಮದ ಹಿನ್ನಲೆಗಳನ್ನು ಲೆಕ್ಕಿಸದೆ, ನಮ್ಮ ಸುತ್ತಲಿರುವ ಜನರು ನಮ್ಮ ಶಾಂತಿ ಮತ್ತು ಸೌಮ್ಯತೆಗಾಗಿ ನಮ್ಮನ್ನು ಮೆಚ್ಚಬೇಕು. ಇದು ಹೆಚ್ಚು ಕ್ರಿಸ್ತನಂತೆ ಆಗುವ ಒಂದು ಮಾರ್ಗವಾಗಿದೆ. ಕೊಲೊಸ್ಸೆ. 3:15 ಮತ್ತು 2 ಕೊರಿಂಥ. 10:1 ಇವು ಕ್ರಿಸ್ತನಲ್ಲಿ ಕಂಡುಬರುವ ಗುಣಗಳಾಗಿವೆ ಎಂದು ನಮಗೆ ತೋರಿಸುತ್ತದೆ.

ಆ. ರಕ್ಷಣೆ: ಚರ್ಚೆಯ ಪ್ರಶ್ನೆ (ತೀತ 3:3-8)

ರಕ್ಷಣೆಯ ಬಗ್ಗೆ ತೀತ. 3:3-8 ನಮಗೆ ಏನನ್ನು ಹೇಳುತ್ತದೆ?

ಉತ್ತರ

ನಮ್ಮ ಮೋಕ್ಷದ ಅಗತ್ಯ: ನಾವು ಅಜ್ಞಾನಿಗಳು, ಅವಿಧೇಯರು ಮತ್ತು ದಾರಿತಪ್ಪಿಸುವವರು. ನಾವು ವಿವಿಧ ರೀತಿಯ ಆಸೆಗಳು ಮತ್ತು ಸುಖಗಳಿಗೆ ಗುಲಾಮರಾಗಿದ್ದೆವು. ನಾವು ದ್ವೇಷ ಮತ್ತು ಅಸೂಯೆಯಲ್ಲಿ ವಾಸಿಸುತ್ತಿದ್ದೆವು. ನಾವು ತಿರಸ್ಕಾರ ಅರ್ಹರು ಮತ್ತು ದ್ವೇಷದಿಂದ ತುಂಬಿದ್ದೇವು. ನಮಗೆ ಖಂಡಿತವಾಗಿಯೂ ರಕ್ಷಣೆಯ ಅಗತ್ಯವಿತ್ತು (ವ. 3).

ನಮ್ಮ ರಕ್ಷಣೆಯ ಮೂಲ: ದೇವರು ನಮ್ಮ ರಕ್ಷಣೆಯ ಮೂಲವಾಗಿದ್ದಾನೆ (ವಚನ 4). ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ಆತನ ಕರುಣೆ (ವಚನ 5) ಮತ್ತು ಆತನ ಕೃಪೆಯ (ವಚನ 7) ಮೂಲಕ ನಾವು ರಕ್ಷಿಸಲ್ಪಡಬಹುದು.

ನಮ್ಮ ರಕ್ಷಣೆಗೆ ಅಡಿಪಾಯ: ನಮ್ಮನ್ನು ರಕ್ಷಿಸುವುದು ನಮ್ಮ ನೀತಿವಂತಿಕೆ ಮತ್ತು ಒಳ್ಳೆಯ ಕಾರ್ಯಗಳಲ್ಲ (ವಚನ 5). ಆದರೆ ದೇವರು ತನ್ನ ಮಗನಾದ ಯೇಸು ಕ್ರಿಸ್ತನನ್ನು ನಮಗಾಗಿ ಕಳುಹಿಸಿದ್ದು ಆತನ ಕರುಣೆಯೇ

(ವಚನ 6). ಅದು ಆತನ ಪ್ರೀತಿ ಮತ್ತು ಕೃಪೆಯ ಕ್ರಿಯೆಯೇ ನಮ್ಮ ರಕ್ಷಣೆಯ ಅಡಿಪಾಯವಾಗಿದೆ. ನಮ್ಮ ರಕ್ಷಣೆಗೆ ಅಡಿಪಾಯ ನಮ್ಮ ನೀತಿಯ ಕಾರ್ಯಗಳಲ್ಲ. ಬದಲಾಗಿ ಶಿಲುಬೆಯ ಮೇಲಿನ ಆತನ ಕರುಣೆಯ ಕಾರ್ಯವಾಗಿದೆ.

ನಮ್ಮ ರಕ್ಷಣೆಯ ಸಾಧನಗಳು: 5 ನೇ ವಚನದಲ್ಲಿ ಪೌಲನು ರಕ್ಷಣೆಯ ಸಾಧನಗಳನ್ನು ನಾಲ್ಕು ಪದಗಳಲ್ಲಿ ವಿವರಿಸುತ್ತಿದ್ದಾನೆ: ತೊಳೆಯುವುದು, ಹೊಸದಾಗಿ ಹುಟ್ಟುವುದು, ನವೀಕರಣ ಮತ್ತು ಪವಿತ್ರಾತ್ಮ. ತೊಳೆಯುವುದು ನೀರಿನ ದೀಕ್ಷಾಸ್ನಾನವನ್ನು ಉಲ್ಲೇಖಿಸುತ್ತದೆ, ಇದು ನಮ್ಮ ಆಂತರೀಕವಾಗಿ ಹೊಸದಾಗಿ ಹುಟ್ಟುವುದರ ಬಾಹ್ಯ ಸಂಕೇತವಾಗಿದೆ. ಹೊಸದಾಗಿ ಹುಟ್ಟುವುದು ಎಂದರೆ 2 ಕೊರಿಂಥ. 5:17 ರಲ್ಲಿ ಉಲ್ಲೇಖಿಸಿದಂತೆ ನಾವು ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಿ ಮಾಡಲ್ಪಟ್ಟಿದ್ದೇವೆ. ನವೀಕರಣವು ಹೊಸ ಜನನದ ನಂತರ ನಮ್ಮ ಜೀವನದಲ್ಲಿ ನಡೆಯುತ್ತಿರುವ ಪರಿಶುದ್ಧತೆಯ ಕಾರ್ಯದೊಂದಿಗೆ ಸಂಬಂಧಿಸಿದೆ. ಪವಿತ್ರಾತ್ಮನು ನಾವು ನೂತನ ಸೃಷ್ಟಿಗಳಾಗಿ ಪಡೆಯುವ ಮತ್ತು ನವೀಕರಿಸಲ್ಪಡುವ ಕಾರ್ಯಗಳಲ್ಲಿ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುವುದಕ್ಕಾಗಿ ದೇವರು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಮೂಲಕ ನಮ್ಮ ಮೇಲೆ ಉದಾರವಾಗಿ ಸುರಿಸಿದ್ದಾನೆ (ವಚನ 6). ಈ ನಾಲ್ಕು ಪದಗಳು ನಮ್ಮ ರಕ್ಷಣೆಯ ಎಲ್ಲಾ ಸಾಧನಗಳಾಗಿವೆ ಮತ್ತು ಎಲ್ಲವೂ ಅಗತ್ಯವಾಗಿವೆ.

ನಮ್ಮ ರಕ್ಷಣೆಯ ಗುರಿ: ನಮ್ಮ ರಕ್ಷಣೆಯ ಗುರಿ ಶಾಶ್ವತ ಜೀವನ (ವಚನ 7). ನಾವು ಸ್ವರ್ಗದಲ್ಲಿ ನಮ್ಮ ಪೂರ್ಣಬಾಧ್ಯತೆಯನ್ನು ಪಡೆಯುವ ಸಮಯವಾಗಿದೆ. ಇದೇ ನಮ್ಮ ಭರವಸೆ ಮತ್ತು ಭವಿಷ್ಯವಾಗಿದೆ.

ಎರಡನೇ ತಿಮೊಥೆ ಅಧ್ಯಾಯ 1 (ತಿಮೊಥೆಯನಿಗೆ)

ಚರ್ಚೆಯ ಪ್ರಶ್ನೆ

ತಿಮೊಥೆಯನ ಕುರಿತು ಇರುವ ಈ ನಾಲ್ಕು ಅಂಶಗಳನ್ನು ಚಿಂತಿಸಿರಿ:

- ಅವರ ಪೋಷಕರ ಪಾಲನೆ
- ಅವರ ಆಧ್ಯಾತ್ಮಿಕ ಸ್ನೇಹ
- ಅವರ ವಿಶೇಷ ಕೊಡುಗೆ
- ಅವರ ವೈಯಕ್ತಿಕ ಜೀವನ ಚರಿತ್ರೆ

ಉತ್ತರ

ಪ್ರತಿಯೊಂದು ಅಂಶವನ್ನು ನೋಡಿರಿ ಮತ್ತು ನಿಮ್ಮ ಸ್ವಂತ ಜೀವನದ ಕುರಿತು ಯೋಚಿಸಿ. ತಿಮೊಥೆಯ ಜೀವನವನ್ನು ರೂಪಿಸಿದ ನಾಲ್ಕು ಪ್ರಮುಖ ಪ್ರಭಾವಗಳು ಯಾವುವು ಎಂಬುದನ್ನು ಪುನರಾವರ್ತಿಸಿರಿ? ನಿಮ್ಮ ಸ್ವಂತ ಜೀವನದಲ್ಲಿ ಇದೇ ರೀತಿಯ ಅಂಶಗಳು ಕಾರ್ಯನಿರ್ವಹಿಸುತ್ತಿವೆ ಎಂದು ನಿಮಗೆ ತಿಳಿದಿದೆಯೇ?

ಚರ್ಚೆಯ ಪ್ರಶ್ನೆ

ಮಾರ್ಗದರ್ಶಕರು ಮತ್ತು ನಂಬಿಕೆಯಲ್ಲಿರುವ ಸ್ನೇಹಿತರು ಯಾಕೆ ಪ್ರಾಮುಖ್ಯರಾಗಿದ್ದಾರೆ? ನಿಮ್ಮ ಕ್ರೈಸ್ತೀಯ ಜೀವಿತದಲ್ಲಿ ನೀವು ಮಾರ್ಗದರ್ಶಕರನ್ನು ಮತ್ತು ಸ್ನೇಹಿತರನ್ನು ಹೊಂದಿದ್ದೀರೋ? ಇಲ್ಲವಾದರೆ ಇಂತಹ ಜನರನ್ನು ಹುಡುಕಲು ನೀವು ಏನಾದರೂ ಮಾಡಬಹುದೇ?

ಉತ್ತರ

ನಮ್ಮ ಕ್ರೈಸ್ತೀಯ ಜೀವನದಲ್ಲಿ ನಮಗೆ ಮಾದರಿಯಾಗಿರುವ ಜನರನ್ನು ಹೊಂದಿರುವುದು ಮುಖ್ಯ. ನಾವು ಅವರಿಂದ ಸಲಹೆ ಮತ್ತು ಮಾರ್ಗದರ್ಶನವನ್ನು ಕೇಳಬಹುದು. ಒಬ್ಬ ಮಾರ್ಗದರ್ಶಕ (ನಿಮಗಿಂತ ಹೆಚ್ಚುಕಾಲ ನಂಬಿಕೆಯುಳ್ಳ ಮತ್ತು ನೀವು ನಂಬುವ ವ್ಯಕ್ತಿ) ಕೆಲವು ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕು ಎಂದು ನಿಮಗೆ ಕಲಿಸಬಹುದು, ನಿಮ್ಮನ್ನು ಪ್ರೋತ್ಸಾಹಿಸಬಹುದು, ಆದರೆ ಶಿಸ್ತುಗೊಳಿಸಬಹುದು, ಇದರಿಂದ ನೀವು ಕ್ರಿಸ್ತನಲ್ಲಿ ಬೆಳೆಯಬಹುದು.

ಚರ್ಚೆಯ ಪ್ರಶ್ನೆ

ನೀವು ಪರಸ್ಪರ ಮತ್ತು ನಿಮ್ಮಲ್ಲಿರುವ ಯಾವ ಆತ್ಮೀಕ ಮತ್ತು ನೈಸರ್ಗಿಕ ವರಗಳನ್ನು ನೋಡುವಿರಿ? ಅವುಗಳನ್ನು ನೀವು ಉಪಯೋಗಿಸುತ್ತಿದ್ದೀರೋ?

ಉತ್ತರ

(ವಿದ್ಯಾರ್ಥಿಗಳು ತಮ್ಮದೇ ಆದ ಉತ್ತರಗಳನ್ನು ಹೊಂದಿರುತ್ತಾರೆ.)

ಎರಡನೇ ತಿಮೊಥೆ ಅಧ್ಯಾಯ 1 (ಸುವಾರ್ತೆ)

ಚರ್ಚೆಯ ಪ್ರಶ್ನೆ

ಯೇಸುವಿನ ಜಯದ ಮೂಲಕ ಮರಣಕ್ಕೆ ಏನಾಯಿತು ಎಂಬುದನ್ನು ವಿವರಿಸಿರಿ.

ಉತ್ತರ

ಯೇಸು ಕ್ರಿಸ್ತನು ಮರಣವನ್ನು ರದ್ದುಗೊಳಿಸಿದನು ಮತ್ತು ಸುವಾರ್ತೆಯ ಮೂಲಕ ಜೀವನ ಮತ್ತು ಅಮರತ್ವವನ್ನು ಬೆಳಕಿಗೆ ತಂದನು. ಇದರರ್ಥ ಏನೆಂದರೆ, ಮರಣವು ಇನ್ನು ಮುಂದೆ ನಮ್ಮ ಜೀವನದಲ್ಲಿ ಅಂತಿಮ ವಿಚಾರವಲ್ಲ. ಈಗಿನ ಜೀವನದಲ್ಲಿ ಮರಣವು ಸಂಭವಿಸುತ್ತದೆ, ಆದರೆ ಅದು ಅಂತ್ಯವಲ್ಲ.

ಚರ್ಚೆಯ ಪ್ರಶ್ನೆ

ಜನರು ಇನ್ನೂ ಯಾಕೆ ಸಾಯುತ್ತಾರೆ? ಸಾವಿನ ಕುರಿತು ಭಯಭ್ರಾಂತನಾಗಿ ಚಿಂತೆಗೆ ಒಳಗಾಗಿರುವ ವ್ಯಕ್ತಿಗೆ ನೀವು ಹೇಗೆ ಸಂತೈಸಿ ಸಲಹೆಯನ್ನು ನೀಡುವಿರಿ?

ಉತ್ತರ

ಪೌಲನು 1 ಕೊರಿಂಥ. 15:26 ರಲ್ಲಿ ಈ ರೀತಿಯಾಗಿ ಬರೆದಿದ್ದಾನೆ. ಸಾವಿನ ಅಂತಿಮ ನಿರ್ಮೂಲನೆ ಭವಿಷ್ಯದಲ್ಲಿದೆ. ನಾಶವಾಗಬೇಕಾದ ದೇವರ ಕೊನೆಯ ಶತ್ರುವಾಗಿದೆ. ಆದಾಗ್ಯೂ ಜನರು ಯೇಸು ಕ್ರಿಸ್ತನ ಜಯದಲ್ಲಿ ಇದ್ದರು ಸಹ ಇಂದಿಗೂ ಸಾಯುತ್ತಾರೆ. ಆದರೆ ನಾವು ಹಿಂದಿನ ಪ್ರಶ್ನೆಯಲ್ಲಿ ಹೇಳಿದಂತೆ ಸಾವು ಇನ್ನು ಮುಂದೆ ಅಂತಿಮ ಹೇಳಿಕೆಯಾಗಿಲ್ಲ.

ಅದಕ್ಕಾಗಿಯೇ ಸುವಾರ್ತೆಯನ್ನು ಸಾರುವಂತಹದ್ದು ನಮಗೆ ತುಂಬಾ ಪ್ರಾಮುಖ್ಯವಾದುದ್ದಾಗಿದೆ. ಜನರು ಸಾಯುವ ಮೊದಲು ಕ್ರಿಸ್ತನನ್ನು ತಿಳಿದುಕೊಳ್ಳಬೇಕು. ನಾವು ಕ್ರಿಸ್ತನನ್ನು ತಿಳಿದಾಗ, ಸಾವು ಸೋಲಿಸಲ್ಪಟ್ಟು ಶತ್ರುವಾಗುತ್ತದೆ ಮತ್ತು ನಾವು ಅದಕ್ಕೆ ಭಯಪಡುವ ಅಗತ್ಯವಿಲ್ಲ.

ಎರಡನೇ ತಿಮೊಥೆ ಅಧ್ಯಾಯ 2 (ಕ್ರೈಸ್ತೀಯ ಸೇವೆ)

1. ಸುವಾರ್ತೆಯ ಸತ್ಯವನ್ನು ಕಾಪಾಡಿಕೊಳ್ಳಿ (2 ತಿಮೊ. 1:12, 14; 2:2)

ಚರ್ಚೆಯ ಪ್ರಶ್ನೆ

ಗುಂಪಿನಲ್ಲಿ ಸತ್ಯವನ್ನು ಹಸ್ತಾಂತರಿಸುವ ನಾಲ್ಕು ಹಂತಗಳನ್ನು ಪುನರಾವರ್ತಿಸಿರಿ. ಇಂದು ಸಹ ಇದು ಕಾರ್ಯ ಮಾಡುವುದನ್ನು ನೀವು ನೋಡಬಹುದೋ? ನೀವು ಮತ್ತು ನಾನು ಈ ರೀತಿಯ ತರಬೇತಿಯಲ್ಲಿ ಹೇಗೆ ಬದುಕಬಹುದು?

ಉತ್ತರ

(ವಿದ್ಯಾರ್ಥಿಗಳು ತಮ್ಮದೇ ಆದ ಉತ್ತರಗಳನ್ನು ಹೊಂದಿರುತ್ತಾರೆ.)

2. ಕ್ರೈಸ್ತೀಯ ಸೇವೆಯ ಕುರಿತು ಮೂರು ರೂಪಾಲಂಕಾರಗಳು (2 ತಿಮೊಥೆ. 2:3-6)

ಚರ್ಚೆಯ ಪ್ರಶ್ನೆ

ಕ್ರೈಸ್ತ ಸೈನಿಕನಾಗಿ ನಿಮಗೆ ಅಡ್ಡಿಯಾಗಬಹುದಾದ ವಿಷಯಗಳ ಬಗ್ಗೆ ನೀವು ಯೋಚಿಸಬಹುದೇ? ಅವು ಪಾಪಗಳಾಗಿರಕ್ಕಿಲ್ಲ ಆದರೆ ಒಬ್ಬ ವಿಶ್ವಾಸಿಯನ್ನು ಸಿಕ್ಕಿಹಾಕಿಕೊಳ್ಳುವ ಪ್ರಪಂಚದ ಕಾರ್ಯಗಳಾಗಿರಬಹುದು. ಅವುಗಳಲ್ಲಿ ಬದಲಾವಣೆಯನ್ನು ತರಲು ನೀವು ಏನು ಮಾಡಬಹುದು?

ಉತ್ತರ

ನಮಗೆ ಅಡ್ಡಿಯಾಗಬಹುದಾದ ವಿಷಯಗಳು ಉದಾಹರಣೆಗೆ ನಮ್ಮ ಕುಟುಂಬ ಮತ್ತು ಸ್ನೇಹಿತರ ಬಗ್ಗೆ ನಮ್ಮ ಕಾಳಜಿಗಳು, ಆಹಾರ, ಬಟ್ಟೆ ಮತ್ತು ಮನೆಯ ಬಗ್ಗೆ ನಮ್ಮ ಚಿಂತೆಗಳು, ಭವಿಷ್ಯದ ಬಗ್ಗೆ ನಮ್ಮ ಕಾಳಜಿಗಳು (ಬದಲಾವಣೆಯನ್ನು ಹೇಗೆ ತರುವುದು ಎಂಬುದರ ಕುರಿತು ವಿದ್ಯಾರ್ಥಿಗಳು ತಮ್ಮದೇ ಅದ ಉತ್ತರಗಳನ್ನು ಹೊಂದಿರುತ್ತಾರೆ).

ಚರ್ಚೆಯ ಪ್ರಶ್ನೆ

ಯಾವ ವಿಧದಲ್ಲಿ ಕ್ರೈಸ್ತೀಯ ಜೀವಿತವು ಕಠಿಣವಾಗಿರಬಹುದು?

ಉತ್ತರ

ಉದಾಹರಣೆಗೆ, ಕ್ರೈಸ್ತೀಯ ಜೀವನವು ಕಷ್ಟಕರವಾಗಿರುತ್ತದೆ ಏಕೆಂದರೆ, ನಾವು ದೇವರ ಮಾರ್ಗಗಳನ್ನು ಅನುಸರಿಸಲು ನಮ್ಮ ಸ್ವಂತ ಇಚ್ಛೆ, ಮಹತ್ವಾಕಾಂಕ್ಷೆಗಳನ್ನು ಮತ್ತು ಗುರಿಗಳನ್ನು ತ್ಯಜಿಸಬೇಕಾಗುತ್ತದೆ. ನಾವು ವಿರೋಧ ಮತ್ತು ಹಿಂಸೆಗಳನ್ನು ಸಹ ಎದುರಿಸಬಹದು. ಮೊದಲ ತಿಮೊಥೆಯನ ಪತ್ರಿಕೆಯಲ್ಲಿ ನಾವು ಸರಳ ಮತ್ತು ಸಂತೃಪ್ತ ಜೀವನವನ್ನು ನಡೆಸುವ ಮಹತ್ವವನ್ನು ಕಲಿತಿದ್ದೇವೆ ಮತ್ತು ಕೆಲವೊಮ್ಮೆ ಭೌತಿಕ ಶೋಧನೆಗಳು ಸಹ ಇರುತ್ತವೆ. ಕ್ರಿಸ್ತನ ಮೇಲಿನ ನಮ್ಮ ಗಮನವನ್ನು ಕಳೆದುಕೊಳ್ಳುವಂತೆ ಮಾಡುವ ಇತರ ಶೋಧನೆಗಳನ್ನು ಸಹ ನಾವು ಎದುರಿಸಬಹುದು.

ಚರ್ಚೆಯ ಪ್ರಶ್ನೆ

ನಾವು ಯಾವ ರೀತಿಯ ಸುಗ್ಗಿಯನ್ನು ಕೊಯ್ಯುತ್ತೇವೆ?

ಉತ್ತರ

ನಾವು ಮುಖ್ಯವಾಗಿ ಎರಡು ವಿಷಯಗಳನ್ನು ಕೊಯ್ಯುತ್ತೇವೆ. ಪರಿಶುದ್ಧತೆಯು ಒಂದು ಕೊಯ್ಲು. ನಾವು ನಮ್ಮ ಪಾತ್ರವನ್ನು ನಿರ್ವಹಿಸಿದಾಗ, ಹೊಲದಲ್ಲಿ ಕಷ್ಟಪಟ್ಟು ದುಡಿದು ದೇವರನ್ನು ಮಹಿಮೆಪಡಿಸುವ ಜೀವನವನ್ನು ನಡೆಸಿದಾಗ, ನಾವು ಬದಲಾದ ಜೀವನವನ್ನು ಕೊಯ್ಯುತ್ತೇವೆ ಮತ್ತು ನಾವು ಆತ್ಮದ ಫಲವನ್ನು ಹೊಂದಿರುವ ಯೇಸುವಿನಂತೆ ಆಗುತ್ತೇವೆ (ಗಲಾತ್ಯ. 5:22-23). ಇನ್ನೊಂದು ಕೊಯ್ಲು ಎಂದರೆ ನಂಬಿಕೆಗೆ ಬರುವ ಜನರು. ಕೊಯ್ಲು ದೊಡ್ಡದಾಗಿದೆ ಮತ್ತು ಕೆಲಸಗಾರರು ಬೇಕಾಗಿದ್ದಾರೆ ಎಂದು ಯೇಸು ಹೇಳಿದನು (ಮತ್ತಾಯ. 9:38-39). ಕೊಯ್ಲಿನಲ್ಲಿ ಸಂತೋಷಪಡುವವರು ಕೆಲಸಗಾರರು. ಅವರು ಪ್ರಾರ್ಥನೆ ಮತ್ತು ತ್ಯಾಗಗಳಲ್ಲಿ ಕಣ್ಣೀರು, ಬೆವರು ಮತ್ತು ನೋವಿನಿಂದ ಕಷ್ಟಪಟ್ಟು ಕೆಲಸಮಾಡಿದ್ದಾರೆ.

3. ನಮ್ಮ ಸಾಮಾನ್ಯ ಕ್ರೈಸ್ತೀಯ ಅನುಭವ (2 ತಿಮೊ. 2:7-13)

ಚರ್ಚೆಯ ಪ್ರಶ್ನೆ

ಕ್ರಿಸ್ತನನ್ನು, ಪೌಲನನ್ನು ಮತ್ತು ನಿಮ್ಮನ್ನು ಪರಿಗಣಿಸಿಕೊಳ್ಳಿ. ಅವರ ಜೀವಿತಗಳಲ್ಲಿ ಮತ್ತು ನಿಮ್ಮ ಸ್ವಂತ ಜೀವಿತದಲ್ಲಿ ಯಾವ ಶ್ರಮೆಯನ್ನು ನೀವು ನೋಡಬಹುದು?

ಉತ್ತರ

ಯೇಸು ಕ್ರಿಸ್ತನು ಪರಲೋಕದಲ್ಲಿನ ಅದ್ಭುತ ಜೀವನವನ್ನು ತ್ಯಜಿಸಿ ಭೂಮಿಗೆ ಬಂದು ನಮ್ಮಲ್ಲಿ ಒಬ್ಬನಾದನು. ಅವರು ಸರಳವಾಗಿ ಬದುಕಿದರು ಮತ್ತು ಅವರು ಯಾವುದನ್ನು ಸ್ವಂತವಾಗಿ ಇಟ್ಟುಕೊಳ್ಳಲಿಲ್ಲ. ಅವರು ತೀವ್ರವಾದ ವಿರೋಧಗಳನ್ನು ಎದುರಿಸಿದರು ಮತ್ತು ಆಗಾಗ್ಗೆ ಕಷ್ಟಗಳನ್ನು ಒಂಟಿಯಾಗಿ ಎದುರಿಸಬೇಕಾಯಿತು. ಅವರಿಗೆ ಹೆಂಡತಿ ಮತ್ತು ಮಕ್ಕಳೊಂದಿಗೆ ಯಾವುದೇ ಸ್ವಂತ ಕುಟುಂಬವಿರಲಿಲ್ಲ. ಅವರನ್ನು ಅಪಹಾಸ್ಯ ಮಾಡಲಾಯಿತು ಮತ್ತು ಅನೇಕರು ಅವರನ್ನು ನಂಬಲಿಲ್ಲ. ಅವರು ಚಿತ್ರಹಿಂಸೆ ಮತ್ತು ಮರಣದ ಮೂಲಕವೂ ಹಾದುಹೋದರು.

ಪೌಲನ ಕೆಲವು ಕಷ್ಟಗಳನ್ನು ಕುರಿತು ನಾವು 2 ಕೊರಿಂಥ 11:23-33 ರಲ್ಲಿ ಓದಬಹುದು.

(ವಿದ್ಯಾರ್ಥಿಗಳು ತಮ್ಮ ಕಷ್ಟಗಳ ಕುರಿತು ತಾವೇ ಉತ್ತರಗಳನ್ನು ಹೊಂದಿರುತ್ತಾರೆ.)

ಚರ್ಚೆಯ ಪ್ರಶ್ನೆ

ಅವರ ಜೀವಿತಗಳಲ್ಲಿ ಮತ್ತು ನಿಮ್ಮ ಜೀವಿತಗಳಲ್ಲಿ (ನಿಮಗೆ ತಿಳಿದಿರುವಂತೆ) ಶ್ರಮೆಯು ಯಾವುದರ ಕಡೆಗೆ ನಡೆಸಿತು?

ಉತ್ತರ

ಫಿಲಿ. 2:9-11 ರಲ್ಲಿ ತಿಳಿಸಲ್ಪಟ್ಟಂತೆ ಯೇಸು ಕ್ರಿಸ್ತನು ಮರಣದಿಂದ ಎಬ್ಬಿಸಲ್ಪಟ್ಟನು ಮತ್ತು ಉನ್ನತೀಕರಿಸಲ್ಪಟ್ಟನು ಮತ್ತು ಆತನ ಕಷ್ಟಗಳು ಎಲ್ಲಾ ಜನರು ರಕ್ಷಿಸಲ್ಪಡುವುದಕ್ಕೆ ಕಾರಣವಾಯಿತು.

ಪೌಲನು ತನ್ನ ಕಷ್ಟಗಳಲ್ಲಿ ಸಂತೋಷಪಟ್ಟನು, 2 ಕೊರಿಂಥ. 12:9-10. ಆತನು ದುರ್ಬಲನಾಗಿದ್ದಾಗ ಕ್ರಿಸ್ತನು ಅವನಲ್ಲಿ ಬಲಶಾಲಯಾಗಿ ಇದ್ದನು. ರೋಮಾ. 5:3-5 ರಲ್ಲಿ ಪೌಲನು ಹೇಳುವಂತೆ, ಕಷ್ಟಗಳು ತಾಳ್ಮೆಯನ್ನು ನೀಡುತ್ತವೆ ಮತ್ತು ಅವುಗಳು ಭರವಸೆಯನ್ನು ನೀಡುತ್ತವೆ. ದುಃಖವು ದೇವರ ರಕ್ಷಣೆಯ ಭರವಸೆಯನ್ನು

ನೀಡುತ್ತದೆ. ನಾವು ಎದುರಿಸುವ ಕಷ್ಟಗಲಲ್ಲಿ ದೇವರು ನಮಗೆ ಶಕ್ತಿಯನ್ನು ನೀಡುತ್ತಾನೆ ಎಂದು ಪೌಲನು ಹೇಳುತ್ತಾನೆ, ಫಿಲಿ. 4:13.

(ವಿದ್ಯಾರ್ಥಿಗಳು ತಮ್ಮ ಸಂಕಟದ ಬಗ್ಗೆ ತಮ್ಮದೇ ಉತ್ತರಗಳನ್ನು ಹೊಂದಿರುತ್ತಾರೆ.)

4. ಕ್ರೈಸ್ತ ಸೇವೆಯ ಕುರಿತು ಇರುವ ಮೂರು ರೂಪಾಲಂಕಾರಗಳು (2 ತಿಮೊಥೆ. 2:14-26)

ಚರ್ಚೆಯ ಪ್ರಶ್ನೆ

2 ತಿಮೊಥೆ 2:23-26 ಅನ್ನು ಓದಿರಿ ಮತ್ತು ಸೇವಕನ ಗುಣಲಕ್ಷಣಗಳನ್ನು ಅಭ್ಯಾಸಿಸಿರಿ.

- ಇಂದು ದೇವರ ರಾಜ್ಯದ ಕೆಲಸಗಾರರಲ್ಲಿ ಈ ಎಲ್ಲಾ ಅಥವಾ ಕೆಲವು ಗುಣಲಕ್ಷಣಗಳನ್ನು ನೀವು ಕಾಣಬಹುದೇ? ಅವರು ಹೇಗೆ ಕಾಣುತ್ತಾರೆ ಅಥವಾ ಕಾಣುವುದಿಲ್ಲ?
- ನಿಮ್ಮಲ್ಲಿ ಈ ಗುಣಲಕ್ಷಣಗಳನ್ನು ನೀವು ನೋಡಬಹುದೇ?
- ನೀವು ದೇವರಿಂದ ರೂಪಿಸಲ್ಪಡಲು ಈ ಯಾವ ಗುಣಲಕ್ಷಣಗಳಲ್ಲಿ ಕಾರ್ಯ ಮಾಡುವ ಅಗತ್ಯತೆ ಇದೆ?

(ಎಲ್ಲಾ ಪ್ರಶ್ನೆಗಳಿಗೆ ವಿದ್ಯಾರ್ಥಿಗಳೇ ಅವರ ಸ್ವಂತ ಉತ್ತರಗಳನ್ನು ಹೊಂದಿರುತ್ತಾರೆ.)

ಎರಡನೇ ತಿಮೊಥೆ ಅಧ್ಯಾಯ 3 (ಸುವಾರ್ತೆಯಲ್ಲಿ ಉಳಿಯುವುದು)

ಪೌಲನು ತಿಮೊಥೆಯನಿಗೆ ಮಾಡಿದ ಆಜ್ಞಾಪನೆಗಳು (2 ತಿಮೊ. 3:14-17)

ಚರ್ಚೆಯ ಪ್ರಶ್ನೆ

ದೇವರ ವಾಕ್ಯವು ದೇವರ ಉಸಿರು ಎಂದು ಬರೆಯಲಾಗಿದೆ. ಇದರ ಅರ್ಥವು ಏನಾಗಿರಬಹುದೆಂದು ನೀವು ಆಲೋಚಿಸುವಿರಿ?

ಉತ್ತರ

ಸತ್ಯವೇದ ವಾಕ್ಯಗಳನ್ನು ಬರೆದ ಲೇಖಕರು ದೇವರಿಂದ ಪ್ರೇರಿತರಾಗಿ ಬರೆದಿದ್ದಾರೆ ಮತ್ತು ದೇವರ ವಾಕ್ಯವು ದೇವರಿಂದ ನೀಡಲ್ಪಟ್ಟಿವೆ. ಪೌಲನು ಬಳಸುವ ಪದವಿನ್ಯಾಸವು ದೇವರ ವಾಕ್ಯಗಳು ದೇವರ ಸ್ವಂತ ಉಸಿರಾಗಿದೆ ಮತ್ತು ಆತನ ಬಾಯಿಂದ ಮಾತನಾಡುವ ನಿಜವಾದ ಪದಗಳಾಗಿವೆ ಎಂದು ತಿಳಿಸುತ್ತದೆ.

ಚರ್ಚೆಯ ಪ್ರಶ್ನೆ

ದೇವರ ವಾಕ್ಯವು ಉಪಯುಕ್ತವಾದದ್ದೆಂದು ಬರೆಯಲಾಗಿದೆ. ಇದು ಯಾವ ರೀತಿಯಲ್ಲಿ ಉಪಯುಕ್ತವಾಗಿದೆ?

ಉತ್ತರ

ದೇವರ ವಾಕ್ಯವು ದೈವಪ್ರೇರಿತವಾಗಿರುವುದರಿಂದ ಅವುಗಳು ನಮಗೆ ಎರಡು ರೀತಿಯಲ್ಲಿ ಉಪಯುಕ್ತವಾಗಿವೆ:

ಮೊದಲನೇಯದಾಗಿ, ಪೌಲನು 15 ನೇ ವಚನದಲ್ಲಿ ದೇವರ ವಾಕ್ಯವು ನಮಗೆ ರಕ್ಷಣೆಯ ಕುರಿತು ಬೋಧಿಸುತ್ತವೆ ಎಂದು ಹೇಳುತ್ತಾನೆ. ಸತ್ಯವೇದವು ಮೂಲತಃ ರಕ್ಷಣೆಗಾಗಿ ಒಂದು ಕೈಪಿಡಿಯಾಗಿದೆ. ಸೃಷ್ಟಿಯ ನಂತರ ಪಾಪಪೂರ್ಣ ದಂಗೆಯ ಹೊರತಾಗಿಯೂ ಮನುಷ್ಯಕುಲದ ಮೇಲಿನ ದೇವರ ಪ್ರೀತಿಯನ್ನು ಸತ್ಯವೇದವು ತೋರಿಸುತ್ತದೆ ಮತ್ತು ಸತ್ಯವೇದಾದ್ಯಂತ ದೇವರು ತನ್ನ ಮತ್ತು ಮನುಷ್ಯರ ನಡುವಿನ ಸಂಬಂಧವನ್ನು ಸ್ಥಾಪಿಸಲು ತಲುಪುತ್ತಿರುವುದನ್ನು ನಾವು ಕಾಣುತ್ತೇವೆ. ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನವು ಒಟ್ಟಾಗಿ ನಮಗೆ ದೇವರ ರಕ್ಷಣೆ ಮತ್ತು ವಿಮೋಚನೆಯ ಯೋಜನೆಯನ್ನು ರೂಪಿಸುತ್ತದೆ ಎಂದು ಸತ್ಯವೇದವು ನಮಗೆ ಕಲಿಸುತ್ತದೆ. ಪೌಲನು ಮತ್ತು ಇಡೀ ಸತ್ಯವೇದವು ಯೇಸು ಕ್ರಿಸ್ತನು ದೇವರ ರಕ್ಷಣೆಯ ಮೂಲ ಎಂದು ಸೂಚಿಸುತ್ತದೆ. ಯೇಸು ಕ್ರಿಸ್ತನು ದೇವರ ವಿಮೋಚನೆಯ ಕಾರ್ಯದ ಕೇಂದ್ರವಾಗಿದ್ದಾನೆ.

ಎರಡನೇಯದಾಗಿ, ವಚನ 17 ಮತ್ತು 18 ರಲ್ಲಿ ಪೌಲನು ದೇವರ ವಾಕ್ಯವು ಬೋಧನೆಗೆ ಮತ್ತು ನಡವಳಿಕೆಗೆ ಒಳ್ಳೆಯದು ಎಂದು ಹೇಳುತ್ತಾನೆ. ದೈವಪ್ರೇರಿತವಾದ ವಾಕ್ಯವು "ಬೋಧನೆಗೂ ಖಂಡನೆಗೂ ಮತ್ತು ತಿದ್ದುವಿಕೆಗೂ ಹಾಗೂ ನೀತಿಯ ತರಬೇತಿ ನೀಡಲು ಉಪಯುಕ್ತವಾಗಿದೆ" ಎಂದು ಪೌಲನು ತಿಳಿಸುತ್ತಾನೆ. ನಾವು ದೇವರ ವಾಕ್ಯವನ್ನು ಕಲಿತು ಅದರಲ್ಲಿ ಜೀವಿಸಿದಾಗ, ನಾವು ಸತ್ಯವನ್ನು ಕಲಿಸಲು ಮತ್ತು ಸುಳ್ಳುಬೋಧನೆಯನ್ನು ಸರಿಪಡಿಸಲು ಸಾಧ್ಯವಾಗುತ್ತದೆ. ನಾವು ದೈವಿಕ ವಿಷಯಗಳಲ್ಲಿ ಪ್ರಬುದ್ಧರಾಗುತ್ತೇವೆ ಹಾಗೂ ನೀತಿಯ ಜೀವಿದಲ್ಲಿ ಜೀವನ ನಡೆಸುತ್ತೇವೆ.

ಚರ್ಚೆಯ ಪ್ರಶ್ನೆ

ನಿಮ್ಮ ಸ್ವಂತ ಜೀವನದಲ್ಲಿ ದೇವರ ವಾಕ್ಯವು ಯಾವ ರೀತಿಯಲ್ಲಿ ಉಪಯುಕ್ತವಾಗಿದೆ ಎಂದು ನೀವು ಕಂಡುಕೊಂಡಿದ್ದೀರಿ? ಉದಾಹರಣೆಗಳನ್ನು ನೀಡಿರಿ.

(ವಿದ್ಯಾರ್ಥಿಗಳು ತಮ್ಮದೇ ಉತ್ತರಗಳನ್ನು ಹೊಂದಿರುತ್ತಾರೆ.)

ಎರಡನೇ ತಿಮೊಥೆ ಅಧ್ಯಾಯ 4 (ಸುವಾರ್ತೆಯನ್ನು ಸಾರಿರಿ)

ಸವಾರ್ತೆಯನ್ನು ಸಾರಲು ಮೂರು ಕಾರಣಗಳು (2 ತಿಮೊಥೆ. 4:1-8)

ಚರ್ಚೆಯ ಪ್ರಶ್ನೆ

ಸುವಾರ್ತೆಯನ್ನು ಸಾರಲು ಕ್ರಿಸ್ತನ ಬರುವಿಕೆ ಯಾಕೆ ಒಂದು ಕಾರಣವಾಗಿದೆ? ಕ್ರಿಸ್ತನ ಬರೋಣದ ಕುರಿತು ನೀವು ಆಗಾಗ್ಗೆ ಆಲೋಚಿಸುತ್ತೀರೋ? ನೀವು ಅದಕ್ಕಾಗಿ ಹಂಬಲಿಸುತ್ತಿದ್ದೀರಾ?

ಉತ್ತರ

ಯೇಸು ಕ್ರಿಸ್ತನು ಹಿಂತಿರುಗಿ ಬರುತ್ತಿದ್ದಾನೆ ಮತ್ತು ಅವರು ಜೀವಂತವಾಗಿರುವವರನ್ನು ಹಾಗೂ ಸತ್ತವರನ್ನು ನ್ಯಾಯತೀರ್ಪುಮಾಡಲಿಕ್ಕೆ ಇದ್ದಾರೆ. ದೇವರ ರಕ್ಷಣೆಯನ್ನು ಮತ್ತು ಯೇಸುವಿನ ಮರಳುವಿಕೆಯ ಕುರಿತು ಜನರು ತಿಳಿದುಕೊಳ್ಳಬೇಕಾಗಿರುವುದರಿಂದ ನಾವು ಸುವಾರ್ತೆಯನ್ನು ಸಾರಬೇಕಾಗಿದೆ.

(ವಿದ್ಯಾರ್ಥಿಗಳು ಹೆಚ್ಚುವರಿ ಉತ್ತರಗಳನ್ನು ಹೊಂದಿರುತ್ತಾರೆ.)

ಚರ್ಚೆಯ ಪ್ರಶ್ನೆ

ಇಂದಿನ ಪರಿಸ್ಥಿತಿಯು ಸುವಾರ್ತೆಯನ್ನು ಸಾರಲು ಯಾಕೆ ಕಾರಣವಾಗಿದೆ? ಜನರು ಸತ್ಯವನ್ನು ಕೇಳದೆ ಸುಳ್ಳುಬೋಧನೆಯನ್ನು ಹಿಂಬಾಲಿಸುತ್ತಾ ಇತರೆ ಧರ್ಮಗಳಿಗೆ ಆಧ್ಯತೆಯನ್ನು ನೀಡುವುದನ್ನು ನೀವು ಅನುಭವಿಸಿದ್ದೀರಾ? ಈ ಸತ್ಯವನ್ನು ಎದುರಿಸುವುದು ನಿಮಗೆ ಸುಲಭವೋ ಅಥವಾ ಕಠಿಣವಾಗಿದೆಯೋ? ನಮ್ಮ ಕರೆಯಲ್ಲಿ ನಾವು ಒಬ್ಬರಿಗೊಬ್ಬರು ಸತತವಾಗಿ ಹೇಗೆ ಸಹಾಯ ಮಾಡಬಹುದಾಗಿದೆ?

ಉತ್ತರ

ಲೋಕದಲ್ಲಿರುವ ಜನರು ಸತ್ಯವನ್ನು ಕೇಳಲು ಆಸಕ್ತಿಯನ್ನು ಹೊಂದಿಲ್ಲ, ಬದಲಾಗಿ ಅವರನ್ನು ಹೊಗಳುವ ಹಾಗೂ ಅವರ ಸ್ವಂತ ಆಸೆಗಳನ್ನು ಆಸೆಗಳನ್ನು ಅನುಸರಿಸಲು ಅವಕಾಶ ಮಾಡಿಕೊಡುವ ಬೋಧನೆಯನ್ನು ಕೇಳಲು ಹೆಚ್ಚು ಉತ್ಸುಕರಾಗಿದ್ದಾರೆ. ಆದ್ದದರಿಂದ ಸತ್ಯದಲ್ಲಿ ದೃಢವಾಗಿ ನಿಂತು ಅದನ್ನು ಬೋಧಿಸುವುದನ್ನು ಮುಂದುವರಿಸುವುದು ಬಹಳ ಪ್ರಾಮುಖ್ಯವಾದುದ್ದಾಗಿದೆ. ನಾವು ನಂಬಿಗಸ್ತರೆಂದು ಕರೆಯಲ್ಪಡುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ.

(ವಿದ್ಯಾರ್ಥಿಗಳಲ್ಲಿ ಹೆಚ್ಚುವರಿ ಉತ್ತ್ರಗಳು ಇರುತ್ತವೆ.)

ನಾವು ಒಟ್ಟಿಗೆ ಪ್ರಾರ್ಥಿಸುವುದರ ಮೂಲಕ ಮತ್ತು ಕ್ರಿಸ್ತನಲ್ಲಿ ನಮ್ಮ ಜೀವನವನ್ನು ಪರಸ್ಪರ ಹಂಚಿಕೊಳ್ಳುವುದರ ಮೂಲಕ ಪರಸ್ಪರ ಸಹಾಯ ಮಾಡಬಹುದು. ನಾವು ನಮ್ಮ ಹೋರಾಟಗಳನ್ನು ಮತ್ತು ಪ್ರಶ್ನೆಗಳನ್ನು ಹಂಚಿಕೊಳ್ಳುವುದು ಮತ್ತು ಪರಸ್ಪರ ಪ್ರೋತ್ಸಾಯಿಸಬಹುದು.

ಚರ್ಚೆಯ ಪ್ರಶ್ನೆ

ನಾವು ಸುವಾರ್ತೆಯನ್ನು ಸಾರಲು ಹಳೇಯ ಪೀಳಿಗೆಯ ವಿಶ್ವಾಸಿಗಳು ಯಾಕೆ ಕಾರಣರಾಗಿದ್ದಾರೆ? ನಿಮ್ಮ ನಂಬಿಕೆಯಲ್ಲಿ ನೀವು ಹಳೇಯ ಪೀಳಿಗೆಯ ಮಾದರಿಯನ್ನು ಹೊಂದಿದ್ದೀರಾ? ನಿಮ್ಮ ಸಭೆಯಲ್ಲಿರುವ ಹಳೇಯ ಪೀಳಿಗೆಯು ಸೇವೆ ಮಾಡಲು ನಿಮ್ಮನ್ನು ನಂಬುತ್ತಾರೆ ಎಂದು ನೀವು ಭಾವಿಸುತ್ತೀರೋ ಅಥವಾ ಅವರು ನಿಮಗೆ ಅಡ್ಡಿಯಾಗುತ್ತಿದ್ದಾರೆಂದು ನೀವು ಅನುಭವಿಸುತ್ತಿದ್ದೀರೋ?

ಉತ್ತರ

ಹಳೆಯ ತಲೆಮಾರಿನ ವಿಶ್ವಾಸಿಗಳು ನಮಗೆ ಮಾದರಿಗಳನ್ನು ಮತ್ತು ದೈವಿಕ ದಾರಿಗಳನ್ನು ಸಿದ್ಧಪಡಿಸುವವರಾಗಿದ್ದಾರೆ. ಅವರು ತಮ್ಮ ಓಟವನ್ನು ಮುಗಿಸುವ ಸಮಯದಲ್ಲಿ ಕರ್ತನ ಕೆಲಸವನ್ನು ಮಾಡಲು ಸಿದ್ಧರಾಗಿರುವ ಯೌವನಸ್ಥ ಜನರು ಇರಬೇಕು. ಹಿಂದಿನವರು ಒಳ್ಳೆಯ ಅಥವಾ ಕೆಟ್ಟ ಮಾಧರಿಗಳಾಗಿದ್ದರು ಸಹ ಈಗಿನ ವಿಶ್ವಾಸಿಗಳಿಗೆ ಯೌವನಸ್ಥ ಪೀಳಿಗೆಯು ಒಳ್ಳೆಯ ಮಾದರಿಗಳಾಗಿ ಜೀವಿಸತಕ್ಕದ್ದು.

(ವಿದ್ಯಾರ್ಥಿಗಳು ತಮ್ಮ ಅನುಭವ ಮತ್ತು ಉತ್ತರಗಳನ್ನು ಗುಂಪಿನಲ್ಲಿ ಹಂಚಿಕೊಳ್ಳುತ್ತಾರೆ.)

ಎರಡನೇ ತಿಮೊಥೆ ಅಧ್ಯಾಯ 4 (ಪೌಲ)

ಪೌಲನು ತನ್ನ ಹೃದಯದಿಂದ ಹಂಚಿಕೊಳ್ಳುತ್ತಾನೆ (2 ತಿಮೊ. 4:9-21)

ಚರ್ಚೆಯ ಪ್ರಶ್ನೆ

ಪೌಲನ ಒಂಟಿತನದ ಮನೋಭಾವನೆಗೆ ಯಾವ ಅಂಶಗಳು ಕಾರಣವಾಗಿವೆ?

ಉತ್ತರ

- ಪೌಲನು ತನ್ನ ಸ್ನೇಹಿತರಿಂದ ಕೈಬಿಡಲ್ಪಟ್ಟಂತೆ ಭಾವಿಸಿದನು. ಅವನಿಗೆ ಹತ್ತಿರವಾಗಿದ್ದ ಜನರು ಲೋಕದ ಮೇಲಿನ ಪ್ರೀತಿಯಿಂದಾಗಿಯೋ ಅಥವಾ ಬೇರೆಡೆ ಸೇವೆಯಲ್ಲಿ ನಿರತರಾಗಿದ್ದರಿಂದಲೋ ಅವನನ್ನು ಬಿಟ್ಟುಹೋಗಿದ್ದರು (4:9-13)
- ಅವನನ್ನು ತಾಮ್ರಗಾರನಾದ ಅಲೆಕ್ಸಾಂಡರ್ ವಿರೋಧಿಸಿದ್ದನು (4:14, 15)
- ಅವನ ಮೊದಲ ವಿಚಾರಣೆಯ ಸಮಯದಲ್ಲಿ 4:16-18 ಅವನಿಗೆ ಜನರಿಂದ ಯಾವುದೇ ಬೆಂಬಲ ಸಿಗಲಿಲ್ಲ.

ಚರ್ಚೆಯ ಪ್ರಶ್ನೆ

ಪೌಲನು ಇಲ್ಲಿ ಯಾವ ಮಾನವ ಅಗತ್ಯತೆಗಳನ್ನು ತೋರಿಸುತ್ತಿದ್ದಾನೆ?

ಉತ್ತರ

ಆತನು ತನ್ನನ್ನು ಆಧರಿಸುವ ಮನುಷ್ಯರನ್ನು ಮತ್ತು ತನಗೆ ಬೆಚ್ಚಗಿಡುವ ವಸ್ತುವನ್ನು ಹಾಗೂ ತನ್ನ ಮನಸ್ಸಿಗೆ ಸಮಾಧಾನವನ್ನು ನೀಡುವ ಸಂಗತಿಗಳ ಅಗತ್ಯತೆಯನ್ನು ಬಯಸುತ್ತಿದ್ದಾನೆ.

ಚರ್ಚೆಯ ಪ್ರಶ್ನೆ

ಅವನ ಪರಿಸ್ಥಿತಿಯನ್ನು ನೀವು ಅರ್ಥಮಾಡಿಕೊಳ್ಳಬಹುದೇ? ನೀವು ಒಂಟಿತನವನ್ನು ಅನುಭವಿಸಿದ್ದೀರಾ? ನೀವು ಜನರಿಂದ ತೊರೆಯಲ್ಪಟ್ಟಿದ್ದೀರಾ? ನಿಮಗೆ ಪ್ರಾಯೋಗಿಕ ಸಹಾಯಕ ಅಗತ್ಯತೆವಿದೆಯೋ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ.

ಉತ್ತರ

(ವಿದ್ಯಾರ್ಥಿಗಳು ತಮ್ಮ ಭವವನ್ನು ಹಂಚಿಕೊಳ್ಳುತ್ತಾರೆ.)

ವಿಷಯಾಂಶಗಳು

ಸಭಾಪಾಲಕರ ಪತ್ರಿಕೆಗಳು - ಸಾರಂಶ

ಪೀಠಿಕೆ 3

ಮೊದಲನೇ ತಿಮೊಥೆಯನಿಗೆ ಬರೆದ ಪತ್ರಿಕೆ 4

ತೀತನು 6

ಎರಡನೇ ತಿಮೊಥೆಯನಿಗೆ ಬರೆದ ಪತ್ರಿಕೆ 8

ಮೊದಲನೇ ತಿಮೊಥೆಯ ಸಂದೇಶ

ತಿಮೊಥೆಯ ಕುರಿತು ನಮಗೆ ಏನು ತಿಳಿದಿದೆ? 10

ಆರು ಪ್ರಮುಖ ಅಧ್ಯಯನಗಳು 11

1. ಸತ್ಯಬೋಧನೆ ಮತ್ತು ಸುಳ್ಳುಬೋಧಕರು (1:3-20) 12
2. ಸಭೆಯ ಸಾರ್ವತ್ರಿಕ ಆರಾಧನೆ (2:1-15) 14
3. ಸಭೆಯ ನಾಯಕರು ಮತ್ತು ಹಿರಿಯರು (3:1-16) 19
4. ಸುಳ್ಳುಬೋಧಕರನ್ನು ಗುರುತಿಸುವುದು ಮತ್ತು ಸತ್ಯಬೋಧನೆಯನ್ನು ಪ್ರೋತ್ಸಾಯಿಸುವುದು (4:1-5:2) 21
5. ಸಭೆಯ ಸಾಮಾಜಿಕ ಜವಬ್ದಾರಿಗಳು (5:3-6:2) 24
6. ಸರಿ ಮತ್ತು ತಪ್ಪು (6:3-21) 26

ತೀತನ ಸಂದೇಶ

ತೀತನ ಕುರಿತು ನಮಗೆ ಏನು ತಿಳಿದಿದೆ? 29

ಮೂರು ಮುಖ್ಯಭಾಗಗಳು 29

1. ಸಭೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (1:5-16) 30
2. ಮನೆಯಲ್ಲಿನ ಸಿದ್ಧಾಂತ ಮತ್ತು ಕರ್ತವ್ಯಗಳು (2:1-15) 32
3. ಜಗತ್ತಿನಲ್ಲಿ ಸಿದ್ಧಾಂತ ಮತ್ತು ಕರ್ತವ್ಯಗಳು (3:1-8) 33

ಎರಡನೇ ತಿಮೊಥೆಯ ಸಂದೇಶ

ಪೀಠಿಕೆ 35

ಅಧ್ಯಾಯ 1: ಸುವಾರ್ತೆಯನ್ನು ಸಾರುವುದಕ್ಕೆ ಅಪ್ಪಣೆ ಕೊಡುವುದು 36

ಅಧ್ಯಾಯ 2: ಸುವಾರ್ತೆಗಾಗಿ ಶ್ರಮೆಯನ್ನು ಅನುಭವಿಸಲು ಅಪ್ಪಣೆಯನ್ನು ಕೊಡುವುದು 40

ಅಧ್ಯಾಯ 3: ಸುವಾರ್ತೆಯಲ್ಲಿ ಉಳಿಯಲು ಅಪ್ಪಣೆ 46

ಅಧ್ಯಾಯ 4: ಸುವಾರ್ತೆಯನ್ನು ಸಾರುವ ಅಪ್ಪಣೆ 49

ಶಿಕ್ಷಕರ ಕೈಪಿಡಿ

ಸಾಮಾನ್ಯ ಸಲಹೆಗಳು....54
ಆಲೋಚನೆಯ ಸಲಹೆಗಳು....55
ಅಧ್ಯಯನದ ಮಾರ್ಗದರ್ಶಿ....56

ಪ್ರಶ್ನೆಗಳು ಮತ್ತು ಉತ್ತರಗಳು

ಮೊದಲನೇ ತಿಮೊಥೆ ಅಧ್ಯಾಯ 1 (ಸಿದ್ಧಾಂತ)....62
ಮೊದಲನೇ ತಿಮೊಥೆ ಅಧ್ಯಾಯ 2 (ಎಲ್ಲಾ ಜನರಿಗಾಗಿ ಪ್ರಾರ್ಥನೆ)....64
ಮೊದಲನೇ ತಿಮೊಥೆ ಅಧ್ಯಾಯ 3 (ನಾಯಕರು ಮತ್ತು ಹಿರಿಯರು)....65
ಮೊದಲನೇ ತಿಮೊಥೆ ಅಧ್ಯಾಯ 4 ಮತ್ತು 5 (ಬೋಧನೆ)....67
ಮೊದಲನೇ ತಿಮೊಥೆ ಅಧ್ಯಾಯ 5 ಮತ್ತು 6 (ಸಾಮಾಜಿಕ ಜವಾಬ್ದಾರಿಗಳು)....69
ಮೊದಲನೇ ತಿಮೊಥೆ ಅಧ್ಯಾಯ 6 (ಸರಿ ಮತ್ತು ತಪ್ಪು)....71
ತೀತನು ಅಧ್ಯಾಯ 1 (ಸಿದ್ಧಾಂತ ಮತ್ತು ಹಿರಿಯರು)....73
ತೀತನು ಅಧ್ಯಾಯ 2 (ಸಿದ್ಧಾಂತ ಮತ್ತು ದೈನಂದಿನ ಜೀವನ)....75
ತೀತನು ಅಧ್ಯಾಯ 3 (ಸಿದ್ಧಾಂತ ಮತ್ತು ಜಗತ್ತು)....76
ಎರಡನೇ ತಿಮೊಥೆ ಅಧ್ಯಾಯ 1 (ತಿಮೊಥೆಯನಿಗೆ)....78
ಎರಡನೇ ತಿಮೊಥೆ ಅಧ್ಯಾಯ 1 (ಸುವಾರ್ತೆ)....79
ಎರಡನೇ ತಿಮೊಥೆ ಅಧ್ಯಾಯ 2 (ಕ್ರೈಸ್ತೀಯ ಸೇವೆ)....80
ಎರಡನೇ ತಿಮೊಥೆ ಅಧ್ಯಾಯ 3 (ಸುವಾರ್ತೆಯಲ್ಲಿ ಉಳಿಯುವುದು)....83
ಎರಡನೇ ತಿಮೊಥೆ ಅಧ್ಯಾಯ 4 (ಸುವಾರ್ತೆಯನ್ನು ಸಾರಿರಿ)....84
ಎರಡನೇ ತಿಮೊಥೆ ಅಧ್ಯಾಯ 4 (ಪೌಲ)....86